# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಮಾರ್ಚ್ 12, 2025

ಸಂಪುಟ : 51 ಸಂಚಿಕೆ : 299 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





# ಯುವ ಜನರ ಅಪಕ್ವತೆ ರಾಜಕೀಯ ಲಾಭಕ್ಕೆ

## ವ್ಯವಸ್ಥೆಯ ವಿರುದ್ಧ ನಿರಂತರ ಹೋರಾಟ ಅಗತ್ಯ: ಕೆ.ಎಸ್. ಈಶ್ವರಪ್ಪ ಪ್ರತಿಪಾದನೆ

ದಾವಣಗೆರೆ, ಮಾ.11- ಮೌಢ್ಯವನ್ನೇ ಮೌಲ್ಯಗಳನ್ನಾಗಿ ಬಿತ್ತುತ್ತಿರುವ ಇಂದಿನ ವ್ಯವಸ್ಥೆ ಬದಲಾಗಬೇಕಾದರೆ ನಿರಂತರ ಹೋರಾಟ, ಸಮಾವೇಶ, ಮುಕ್ತ ಚರ್ಚೆಗಳ ಅಗತ್ಯವಿದೆ ಎಂದು ಡಿ.ಆರ್.ಎಂ. ಕಾಲೇಜು ನಿವೃತ್ತ ಪ್ರಾಂಶುಪಾಲ ಕೆ.ಎಸ್. ಈಶ್ವರಪ್ಪ ಪ್ರತಿಪಾದಿಸಿದರು.

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಒ) ವತಿಯಿಂದ ನಗರದ ಎಆರ್‌ಜಿ ಕಾಲೇಜು ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಯುವಜನ ಸಂಕಲ್ಪ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಕಲ್ಯಾಣ ಕ್ರಾಂತಿ, ಸ್ವಾತಂತ್ರ್ಯ ಹೋರಾಟ, ಇತ್ತೀಚೆಗೆ ದೆಹಲಿಯಲ್ಲಿ ನಡೆದ ಹೋರಾಟ ಹೊಸ ಸರ್ಕಾರದ ಉದಯಕ್ಕೆ ಕಾರಣವಾಗಿದ್ದೂ ಸೇರಿದಂತೆ, ಅನೇಕ ಹೋರಾಟಗಳು ಇದಕ್ಕೆ ಸಾಕ್ಷಿಯಾಗಿವೆ ಎಂದರು.

ವ್ಯವಸ್ಥೆಯ ವಿರುದ್ಧ ನಡೆಸುವ ಹೋರಾಟಕ್ಕೂ ಮುನ್ನ ನಮ್ಮ ಅಂತರಗ ಶುದ್ಧಿ ಮಾಡಿಕೊಳ್ಳಬೇಕಿದೆ. ನಾನು ಏನು? ನಮ್ಮ ನಡೆ, ನಮ್ಮ ಆದರ್ಶಗಳೇನು? ಎಂಬುದನ್ನು ತಿಳಿದುಕೊಳ್ಳಬೇಕು. ಸಂದರ್ಭಕ್ಕೆ ತಕ್ಕಂತೆ ಧರಿಸುವ ಮುಖವಾಡವನ್ನು ದೂರ ಎಸೆದು ಶರಣರ ಆಶಯದಂತೆ ನಡೆ-ನುಡಿ ಒಂದಾಗಬೇಕಿದೆ. ಇದು ನಮ್ಮ ವಿರುದ್ಧ ನಾವು ಮಾಡಿಕೊಳ್ಳುವ ಹೋರಾಟವಾಗಿದೆ ಎಂದು ವಿಶ್ಲೇಷಿಸಿದರು.

ವೈಚಾರಿಕತೆ, ವೈಜ್ಞಾನಿಕತೆ, ಆಚರಣೆ ಇವಾವುಗಳ ಬಗ್ಗೆಯೂ ಯುವಜನತೆಗೆ ಸ್ಪಷ್ಟತೆ ಇಲ್ಲ. ಈ ಅಪಕ್ವತೆಯನ್ನೇ ರಾಜಕೀಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗುತ್ತಿದೆ. ಕಾರಣ, ಮೊದಲು ತಾವು ವಿಚಾರವಂತರಾಗಬೇಕು. ನಿಮ್ಮ ಪಕ್ವತೆ ಸಮಾಜಕ್ಕೆ ತಲುಪಬೇಕು. ಆಗ ನಡೆಸುವ ಎಲ್ಲಾ ಹೋರಾಟಗಳು ಸಫಲವಾಗುತ್ತವೆ ಎಂದರು.

ಪ್ರೀತಿ, ಸಮಾನತೆ, ವಾಕ್ ಸ್ವಾತಂತ್ರ್ಯ, ಅಂತಃಕರಣ, ದಯೆ, ಮಾನವೀಯತೆ ಮೊದಲಾದ ಮೌಲ್ಯಗಳನ್ನು ಉಳಿಸಿಕೊಂಡು ಮುಂದಿನ ತಲೆಮಾರಿಗೆ ಕೊಂಡೊಯ್ಯಬೇಕಿದೆ. ಅದಕ್ಕಾಗಿ ನಾವು ಶುದ್ಧರಾಗಬೇಕಿದೆ. ಈ ಶುದ್ಧತೆಯೇ ಇಂದಿನ ಬಿಕ್ಕಟ್ಟುಗಳಿಗೆ ಸೂಕ್ತ ಪರಿಹಾರ ಎಂದು ಹೇಳಿದರು.

'ಲೈಂಗಿಕ ಅಪರಾಧಗಳು (4ನೇ ಪುಟಕ್ಕೆ)

### ವಾಸ್ತವ ಭಿನ್ನವಾಗಿದೆ

**ಹನ್ನೆರಡನೇ ಶತಮಾನದಲ್ಲಿ ಶರಣ ಪರಂಪರೆಯಲ್ಲಿ ನಡೆದ ಸಮಾನತೆಯ ಕ್ರಾಂತಿ, ಸ್ವಾತಂತ್ರ್ಯಾನಂತರದಲ್ಲಿ ನಾವು ರಚಿಸಿಕೊಂಡು ಅಂಗೀಕರಿಸಿದ ಸಂವಿಧಾನ ಇವೆಲ್ಲವೂ ನಮ್ಮನ್ನು ಉತ್ತುಂಗದ ಶಿಖರಕ್ಕೆ ಕೊಂಡೊಯ್ಯಬೇಕಿತ್ತು. ನಾನು ಸಾರ್ಭಭೌಮ ಎಂದು ಗರ್ಭದಿಂದ ಮೆರೆಯಬೇಕಿತ್ತು. ಆದರೆ ವಾಸ್ತವ ಭಿನ್ನವಾಗಿದೆ ಎಂದು ಕೆ.ಎಸ್. ಈಶ್ವರಪ್ಪ ಕಳವಳ ವ್ಯಕ್ತಪಡಿಸಿದರು.**

**ಸಂವಿಧಾನ ಬದಲಿಸುವ ಕೂಗು, ವೇದ-ಉಪನಿಷತ್ ಓದಿದರೆ ಮಾತ್ರ ರಾಜಕೀಯದಲ್ಲಿ ಸ್ಪರ್ಧೆಗೆ ಅವಕಾಶ ಕೊಡುವ ಮಾತುಗಳು ಕೇಳಿ ಬರುತ್ತಿವೆ ಎಂದಾದರೆ, ಎಂತಹ ಅಪಾಯದ ಸ್ಥಿತಿಯಲ್ಲಿ ನಾವಿದ್ದೇವೆ? ಆತ್ಮಸಾಕ್ಷಿ ಕದಡುವ ಸನ್ನಿವೇಶಗಳು ನಡೆಯುತ್ತಲೇ ಇವೆ ಎಂದು ಕಳವಳ ವ್ಯಕ್ತಪಡಿಸಿದರು.**

# ಗ್ಯಾರಂಟಿ ಸಮಿತಿಗೆ ಕಾರ್ಯಕರ್ತರು

## ವಿಧಾನಸಭೆಯಲ್ಲಿ ಪ್ರತಿಪಕ್ಷಗಳಿಂದ ಗದ್ದಲ, ಸಮಿತಿಗಳ ರದ್ಧತಿಗೆ ಆಗ್ರಹ

ಬೆಂಗಳೂರು, ಮಾ. 11 - ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರ ನೇಮಕ ಕುರಿತು ವಿಧಾನಸಭೆಯಲ್ಲಿ ಗದ್ದಲ ಹಾಗೂ ವಾಗ್ವಾದ ನಡೆದು ಪ್ರತಿಪಕ್ಷಗಳ ಸದಸ್ಯರು ಧರಣಿ ನಡೆಸಿದರು.

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಕ ಮಾಡಿ ಅವರಿಗೆ ಸರ್ಕಾರದಿಂದ ಗೌರವ ಧನ, ಭತ್ಯೆ ನೀಡುತ್ತಿರುವ ವಿಚಾರ ಪ್ರತಿಪಕ್ಷಗಳ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಸಮಿತಿಗಳನ್ನು ರದ್ದುಪಡಿಸಿ ಎಂದು ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದ ಭಾವಿಗಿಳಿದು ಧರಣಿ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಆಗ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಹತ್ತು ನಿಮಿಷಗಳ ಕಾಲ ಮುಂದೂಡಿದರು. ನಂತರ ಸಭಾಧ್ಯಕ್ಷರ ಕೊಠಡಿಯಲ್ಲಿ ಸಂಧಾನ ಸಭೆ ನಡೆದು ಅರ್ಧ ಗಂಟೆ ಬಳಿಕ ಸದನ ಮತ್ತೆ ಸಮಾವೇಶಗೊಂಡಿತು.

ಆಗ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕರ ನೇತೃತ್ವದಲ್ಲೇ ಸಮಿತಿ ಮಾಡಿ ಎಂದು ಪ್ರತಿಪಕ್ಷಗಳ ಸದಸ್ಯರು ಒತ್ತಾಯಿಸಿದ್ದಾರೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡುತ್ತೇವೆ. ಸದ್ಯಕ್ಕೆ ಗ್ಯಾರಂಟಿ ಅನುಷ್ಠಾನ ಸಮಿತಿಗಳು ಮುಂದುವರೆಯುತ್ತವೆ ಎಂದರು.

ಶಿವಕುಮಾರ್ ಉತ್ತರದಿಂದ ಅಸಮಾಧಾನಗೊಂಡ ಪ್ರತಿಪಕ್ಷಗಳ ಸದಸ್ಯರು, ಪ್ರತಿ ತಾಲ್ಲೂಕಿನಲ್ಲೂ ಶಾಸಕರೇ ಸುಪ್ರೀಂ. ಶಾಸಕರನ್ನು ಬಿಟ್ಟು ಬೇರೊಬ್ಬರು ಅಧಿಕಾರಿಗಳ ಸಭೆ ನಡೆಸುವುದು ಸರಿಯಲ್ಲ. ಈ ಸಮಿತಿಯನ್ನು ರದ್ದು (4ನೇ ಪುಟಕ್ಕೆ)

### ಕಾಂಗ್ರೆಸ್ ಅಧಿಕಾರಕ್ಕೆ ತಂದ ಕಾರ್ಯಕರ್ತರಿಗೆ ಹುದ್ದೆ ನೀಡುವ ಹಕ್ಕಿದೆ: ಡಿಕೆಶಿ ಸಮರ್ಥನೆ

ಬೆಂಗಳೂರು, ಮಾ. 11 - ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದ ಪಕ್ಷದ ಕಾರ್ಯಕರ್ತರಿಗೆ ಸರ್ಕಾರದ ಕಾರ್ಯಕ್ರಮಗಳ ಮೂಲಕ ಅನುಕೂಲ ಮಾಡಿಕೊಡುವ ಹಾಗೂ ಹುದ್ದೆಗಳನ್ನು ನೀಡುವ ಹಕ್ಕು ನಮಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಎಂ.ಟಿ.ಕೃಷ್ಣಪ್ಪ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿಕೊಂಡಿರುವುದನ್ನು ಸಮರ್ಥಿಸಿಕೊಂಡರು.

52 ಸಾವಿರ ಕೋಟಿ ರೂ. ಬೃಹತ್ ಯೋಜನೆ ಜನರಿಗೆ ತಲುಪುತ್ತಿದೆಯೋ ಇಲ್ಲವೋ ಎಂಬುದನ್ನು ಮನೆ, ಮನೆಗೆ ತೆರಳಿ ಪರಿಶೀಲಿಸಲು ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟರೆ, ನಿಮಗೆ ತಡೆದುಕೊಳ್ಳಲು ಆಗುತ್ತಿಲ್ಲ ಎಂದು (4ನೇ ಪುಟಕ್ಕೆ)

# 15 ರಂದು ನಗರದಲ್ಲಿ ಬೃಹತ್ ಉದ್ಯೋಗ ಮೇಳ

## 50 ಕ್ಕೂ ಹೆಚ್ಚು ಕಂಪನಿಗಳು ಭಾಗಿ, 5000 ಕ್ಕೂ ಹೆಚ್ಚು ಹುದ್ದೆಗಳಿಗೆ ಆಯ್ಕೆ: ಜಿಲ್ಲಾಧಿಕಾರಿ

ದಾವಣಗೆರೆ, ಮಾ.11- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಇದೇ ಮಾ. 15 ರಂದು ನಗರದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಐದು ಸಾವಿರಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಆಯ್ಕೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಉದ್ಯೋಗ ಮೇಳ ಕುರಿತು ಏರ್ಪಡಿಸಲಾದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.



ಹದಡಿ ರಸ್ತೆಯಲ್ಲಿರುವ ಸರ್ಕಾರಿ ಐಟಿಐ ಕಾಲೇಜು ಮತ್ತು ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ ಎರಡೂ ಕಡೆ ಉದ್ಯೋಗ ಮೇಳ ನಡೆಯಲಿದೆ. ಬಿಐಟಿಯಲ್ಲಿ ಬಿಇ ಹಾಗೂ ಎಂಬಿಎ ಪದವಿ ಪಡೆದ ಅಭ್ಯರ್ಥಿಗಳ ಆಯ್ಕೆ ನಡೆಯಲಿದ್ದು ಐಟಿಐ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಹಾಗೂ ಪದವಿ, ಸ್ನಾತಕೋತ್ತರ ಪದವಿ ಪಡೆದವರಿಗೆ ಆಯ್ಕೆ ನಡೆಯಲಿದೆ ಎಂದರು.

ಬೃಹತ್ ಉದ್ಯೋಗ ಮೇಳದಲ್ಲಿ 50 ಕ್ಕೂ ಹೆಚ್ಚಿನ ಕಂಪನಿಗಳು ಭಾಗವಹಿಸುತ್ತಿವೆ. ಜಿಲ್ಲೆಯ ನಿರುದ್ಯೋಗಿಗಳಿಗೆ ಮೇಳ ವರದಾನವಾಗಿದೆ. ಮೇಳದಲ್ಲಿ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಕಂಪನಿಗಳು ಭಾಗವಹಿಸುತ್ತಿವೆ. ಜಿಲ್ಲೆಯ 1000 ಕ್ಕೂ ಹೆಚ್ಚಿನ ಯುವಕ, ಯುವತಿಯರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿದ್ದು, ಎಲ್ಲಾ ದಾಖಲೆಗಳೊಂದಿಗೆ ನೇರವಾಗಿಯೂ ಭಾಗವಹಿಸಲು ಅವಕಾಶ ಇದೆ. ಆಗಮಿಸುವ ಅಭ್ಯರ್ಥಿಗಳಿಗೆ (2ನೇ ಪುಟಕ್ಕೆ)

# ವಿಶೇಷಚೇತನರ ಮಾಸಿಕ ಪಿಂಚಣಿ ಹೆಚ್ಚಳಕ್ಕೆ ಒತ್ತಾಯ

### ಸಂಸತ್ತಿನಲ್ಲಿ ಗಮನ ಸೆಳೆದ ಸಂಸದೆ ಡಾ. ಪ್ರಭಾ

ದಾವಣಗೆರೆ, ಮಾ. 11- ಇಂದಿರಾಗಾಂಧಿ ರಾಷ್ಟ್ರೀಯ ವಿಶೇಷಚೇತನರ ಪಿಂಚಣಿ ಯೋಜನೆಯಡಿ ಫಲಾನುಭವಿಗಳಿಗೆ ತಿಂಗಳಿಗೆ ಕೇವಲ 300 ರೂ. ನೀಡಲಾಗುತ್ತಿದೆ. ಇದರಿಂದ ಮೂಲಭೂತ ಅಗತ್ಯಗಳನ್ನು ಪೂರೈಸಲು ಸಾಧ್ಯವಿಲ್ಲ. ಆದ್ದರಿಂದ ಪಿಂಚಣಿ ಮೊತ್ತ ಏರಿಕೆಗೆ ಕೇಂದ್ರ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಒತ್ತಾಯಿಸಿದ್ದಾರೆ.

ನವದೆಹಲಿಯ ಸಂಸತ್ತಿನಲ್ಲಿ ನಡೆದ ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಸಂಸದರು ವಿಶೇಷಚೇತನರು ತಮ್ಮ ಮೂಲಭೂತ ಅಗತ್ಯಗಳನ್ನು ನೋಡಿಕೊಳ್ಳಲು ಅಲ್ಪ ಮೊತ್ತದ



ಮಾಸಾಶನ ದಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾಸಾಶನ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಪ್ರಸ್ತುತ, 80% ಅಥವಾ ಅದಕ್ಕಿಂತ ಹೆಚ್ಚಿನ ಅಂಗ ವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಮಾತ್ರ ಅರ್ಹತೆ ಇದೆ. 40% ಅಥವಾ ಹೆಚ್ಚು ಅಂಗವಿಕಲತೆಯನ್ನು ಹೊಂದಿ ರುವವರಿಗೂ ಈ ಯೋಜನೆಯ ಲಾಭ ವನ್ನು ವಿಸ್ತರಿಸುವುದರ ಬಗ್ಗೆ ಪರಿಗಣಿಸ ಬೇಕೆಂದು ಸದನದ ಗಮನ ಸೆಳೆದರು.

ಸಂಸದರ ಪ್ರಶ್ನೆಗೆ ಕೇಂದ್ರ ಗ್ರಾಮೀಣ ವಿಕಾಸ್ ಸಚಿವ ಶಿವರಾಜ್ ಸಿನ್ಹಾ ಚೌಹಾಣ್ ಉತ್ತರಿಸುತ್ತಾ, ಕೇಂದ್ರ ಸರ್ಕಾರದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪಗಳಿಲ್ಲ. ಆದರೆ ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ವಿಶೇಷಚೇತನರ ಮಾಸಾಶನ ಹೆಚ್ಚಳ ಮಾಡಬಹುದಾಗಿದೆ ಎಂದರು.

ದಾವಣಗೆರೆ ಸಂಸದರು ವಿಶೇಷಚೇತನರ ಮಾಸಿಕ ಪಿಂಚಣಿ ಹೆಚ್ಚಳ ಕುರಿತು ಸದನದ ಗಮನ ಸೆಳೆದಿರುವುದು ವಿಶೇಷವಾಗಿತ್ತು.

# ತಮಿಳು ಶಾಲೆಗಳಲ್ಲಿ ಕುಸಿಯುತ್ತಿರುವ ದಾಖಲಾತಿ

ನವದೆಹಲಿ, ಮಾ. 11 - ನೂತನ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ಟೀಕಿಸುತ್ತಿರುವುದಕ್ಕೆ ತಿರುಗೇಟು ನೀಡಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರಾಜ್ಯದ ತಮಿಳು ಶಾಲೆಗಳಲ್ಲಿ ದಾಖಲಾತಿ ಗಣನೀಯವಾಗಿ ಕುಸಿದಿದೆ ಎಂದಿದ್ದಾರೆ.

ತಮಿಳುನಾಡಿನ ಸರ್ಕಾರಿ ಶಾಲೆಗಳಲ್ಲಿ ತಮಿಳು ಭಾಷೆ ಕುಸಿದಿದೆ ಹಾಗೂ ವಸಹಾತುಶಾಹಿ ಭಾಷೆ ಬೆಳೆಯುತ್ತಿದೆ ಎಂದಿದ್ದಾರೆ.

ತಮಿಳುನಾಡಿನ ಶೇಕಡ 67ರಷ್ಟು ವಿದ್ಯಾರ್ಥಿಗಳು ಈಗ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. 2018-19 ರಲ್ಲಿ ತಮಿಳು ಮಾಧ್ಯಮಕ್ಕೆ ದಾಖಲಾಗುವ (2ನೇ ಪುಟಕ್ಕೆ)

# ದಾವಣಗೆರೆ ಜಿಲ್ಲಾ ನೂತನ ನ್ಯಾಯಾಧೀಶರಾಗಿ ವೇಲಾ ಖೋಡೆ


ಬೆಂಗಳೂರು, ಮಾ. 11- ದಾವಣಗೆರೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನಾಗಿ ಶ್ರೀಮತಿ ವೇಲಾ ದಾಮೋದರ್ ಖೋಡೆ ಅವರನ್ನು ನೇಮಕ ಮಾಡಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ಆದೇಶ ಹೊರಡಿಸಿದೆ.

ವೇಲಾ ಅವರು ಈವರೆಗೂ ಬೆಂಗಳೂರಿನಲ್ಲಿ ಜಿಲ್ಲಾ ನ್ಯಾಯಾಧೀಶರು ಮತ್ತು ಕರ್ನಾಟಕ ಲೋಕಾಯುಕ್ತ ಹೆಚ್ಚುವರಿ ರಿಜಿಸ್ಟ್ರಾರ್ (ವಿಚಾರಣೆಗಳು) ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ದಾವಣಗೆರೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿ ಈವರೆಗೂ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರನ್ನು ಚಿಕ್ಕಮಗಳೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನಾಗಿ ವರ್ಗಾವಣೆ ಮಾಡಲಾಗಿದೆ.

# ರಾಜ್ಯಸಭಾ ಉಪಾಧ್ಯಕ್ಷರಿಗೆ 'ಒದೆಯುವೆ' ಎಂದ ಖರ್ಗೆ

ನವದೆಹಲಿ, ಮಾ. 11 - ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿರುವ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ರಾಜ್ಯಸಭಾ ಉಪಾಧ್ಯಕ್ಷರಿಗೆ 'ಒದೆಯುತ್ತೇನೆ' ಎಂದು ಹೇಳಿದ್ದಾರೆ. ನಂತರ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿರುವ ಅವರು, ನಾನು ಸರ್ಕಾರ ಉದ್ದೇಶಿಸಿ ಈ ಹೇಳಿಕೆ ನೀಡಿದ್ದೆ ಎಂದಿದ್ದಾರೆ



ಕೇಂದ್ರ ಶಿಕ್ಷಣ ಸಚಿವಾಲಯದ ಕಾರ್ಯ ನಿರ್ವಹಣೆ ಕುರಿತು ರಾಜ್ಯಸಭೆಯಲ್ಲಿ ಚರ್ಚೆ ನಡೆಯುತ್ತಿತ್ತು. ತಮಿಳುನಾಡು ಸರ್ಕಾರದ ವಿರುದ್ಧ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ನೀಡಿರುವ ಹೇಳಿಕೆಗಾಗಿ ಕ್ಷಮೆಯಾಚಿಸಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ಒತ್ತಾಯಿಸಿದ್ದರು.

ತ್ರಿಭಾಷಾ ಶಿಕ್ಷಣ ನೀತಿ ಹಾಗೂ ನೂತನ ಶಿಕ್ಷಣ ನೀತಿಯ ಕುರಿತು ತಮಿಳನಾಡು ಸರ್ಕಾರವನ್ನು ಶಿಕ್ಷಣ ಸಚಿವ ಪ್ರಧಾನ್ ಸೋಮವಾರ ತರಾಟೆಗೆ ತೆಗೆದುಕೊಂಡಿದ್ದರು. ತಮಿಳುನಾಡು ಸರ್ಕಾರ ರಾಜಕೀಯಕ್ಕಾಗಿ ವಿದ್ಯಾರ್ಥಿಗಳ ಭವಿಷ್ಯ ಹಾಳು ಮಾಡುತ್ತಿದೆ ಎಂದಿದ್ದರು. (2ನೇ ಪುಟಕ್ಕೆ)

# ರನ್ಯಾ ಮನೆ ಮೇಲೆ ಸಿಬಿಐ ದಾಳಿ

ಬೆಂಗಳೂರು, ಮಾ. 11 - ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ, ರನ್ಯಾ ರಾವ್ ಮನೆ ಹಾಗೂ ಕಚೇರಿ ಮೇಲೆ ದಾಳಿ ನಡೆಸಿ, ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿದೆ.

ದೆಹಲಿಯಿಂದ ಬಂದ ಇಬ್ಬರು ಅಧಿಕಾರಿಗಳು ರಾಜ್ಯದಲ್ಲಿನ ಸಿಬಿಐ ಕೇಂದ್ರ, ಕಚೇರಿ ಸಿಬ್ಬಂದಿ ಜೊತೆಗೂಡಿ ನಿನ್ನೆ ರಾತ್ರಿ ನಗರದ ಲ್ಯಾವೆಲ್ಲಿ ರಸ್ತೆಯಲ್ಲಿನ ಅವರ ಫ್ಲ್ಯಾಟ್ ಮತ್ತು ವಿಕ್ಟೋರಿಯಾ ಲೇಔಟ್‌ನಲ್ಲಿನ ಕಚೇರಿ ಪರಿಶೀಲಿಸಿದರು.

### ಹಲವು ದಾಖಲೆ ವಶ


ಪ್ರಕರಣವನ್ನು ಸಿಬಿಐ ಕೈಗೆತ್ತಿಕೊಳ್ಳುತ್ತಿದ್ದಂತೆ ಎಚ್ಚೆತ್ತ ಸರ್ಕಾರ, ರನ್ಯಾ ರಾವ್ ತಂದೆ, ಪೊಲೀಸ್ ಮಹಾನಿರ್ದೇಶಕ ರಾಮಚಂದ್ರ ರಾವ್ ಪಾತ್ರ ಕುರಿತು ತನಿಖೆಗೆ ಆದೇಶಿಸಿತು.

ಮತ್ತೊಂದೆಡೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾಜ್ಯ ಪೊಲೀಸರ ವೈಫಲ್ಯದ ಬಗ್ಗೆಯೂ ತನಿಖೆ ನಡೆಸುವಂತೆ (4ನೇ ಪುಟಕ್ಕೆ)

# ಕಿಸಾನ್ ನಿಧಿ : ರೈತರ ಸೇರ್ಪಡೆಗೆ ಸಿದ್ಧ

ನವದೆಹಲಿ, ಮಾ. 11 – ಪಿಎಂ ಕಿಸಾನ್ ಸಮ್ಮಾನ್ ನಿಧಿಗೆ ಅರ್ಹ ರೈತರನ್ನು ಸೇರ್ಪಡೆ ಮಾಡಲು ಕೇಂದ್ರ ಸರ್ಕಾರ ಈಗಲೂ ಸಿದ್ಧವಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಲೋಕಸಭೆಯಲ್ಲಿ ತಿಳಿಸಿದ್ದಾರೆ. ಈ ಯೋಜನೆಯ ಅನ್ವಯ ರೈತರಿಗೆ ವರ್ಷಕ್ಕೆ ಮೂರು ಕಂತುಗಳಲ್ಲಿ 6 ಸಾವಿರ ರೂ.ಗಳನ್ನು ನೀಡಲಾಗುತ್ತದೆ.

ಅರ್ಹರಿದ್ದೂ ಇನ್ನೂ ಈ ಯೋಜನೆಗೆ ಸೇರ್ಪಡೆಯಾಗದವರನ್ನು ಗುರುತಿಸಲು ಹಾಗೂ ಸೇರ್ಪಡೆ ಮಾಡಲು ಎಲ್ಲಾ ರಾಜ್ಯಗಳು ಕೇಂದ್ರ ಸರ್ಕಾರದ ಜೊತೆ ಸಹಕರಿಸಬೇಕು ಎಂದವರು ಮನವಿ ಮಾಡಿಕೊಂಡಿದ್ದಾರೆ. (4ನೇ ಪುಟಕ್ಕೆ)

# ಸ್ವಾರ್ಥದಿಂದ ಸಂಬಂಧಗಳು ಕ್ಷೀಣಿಸುತ್ತಿವೆ



**ಹೊನ್ನಾಳಿ: ಮೃತ್ಯುಂಜಯ ಶ್ರೀಗಳ 55ನೇ ಪುಣ್ಯಾರಾಧನೆ, ಚಂದ್ರಶೇಖರ ಶ್ರೀಗಳ 10ನೇ ವಾರ್ಷಿಕ ಸಂಸ್ಮರಣೆ ಕಾರ್ಯಕ್ರಮದಲ್ಲಿ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶ್ರೀ**

ಹೊನ್ನಾಳಿ, ಮಾ.11- ಸ್ವಾರ್ಥ ಬದುಕಿನಿಂದಾಗಿ ಸಂಬಂಧಗಳು ಕ್ಷೀಣಿಸುತ್ತಿದ್ದು, ವೃದ್ಧಾಶ್ರಮಗಳು ತಲೆ ಎತ್ತಿ ನಿಂತಿವೆ. ವಿದ್ಯೆ ಪಡೆಯುವುದು ಹೆಚ್ಚಾದಂತೆ ಸ್ವಾರ್ಥವೂ ಹೆಚ್ಚಾಗುತ್ತಿದೆ. ಇದರ ಫಲವೇ ಇಂದು ಎಲ್ಲೆಂದರಲ್ಲಿ ವೃದ್ಧಾಶ್ರಮಗಳು ತಲೆ ಎತ್ತುತ್ತಿವೆ ಎಂದು ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ವಿಷಾದಿಸಿದರು.

ಹಿರೇಕಲ್ಮಠದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಲಿಂ. ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿಯವರ 55ನೇ ವಾರ್ಷಿಕ ಪುಣ್ಯಾರಾಧನೆ ಹಾಗೂ ಲಿಂ.ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ 10ನೇ ವಾರ್ಷಿಕ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಶ್ರೀಮಠ ಮಾನ್ಯಗಳು ಧಾರ್ಮಿಕ ಕಾರ್ಯಗಳ ಜೊತೆ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಎಲ್ಲರನ್ನೂ ಸಂಸ್ಕಾರವಂತರನ್ನಾಗಿ ಮಾಡಿ ಸನ್ಮಾರ್ಗದಲ್ಲಿ ಕೊಂಡೊಯ್ಯುವ ಪ್ರಯತ್ನವನ್ನು ಶ್ರೀಮಠ ಮಾಡುತ್ತಿದೆ. ಇದಕ್ಕೆ ಭಕ್ತರೂ ಸಹ ಶ್ರಮಿಸುತ್ತಿದ್ದಾರೆ ಎಂದರು.

ಈಗಲಾದರೂ ಸ್ವಾರ್ಥ ಬಿಟ್ಟು, ವಿಶಾಲ ಮನೋಭಾವದಿಂದ ಸಕುಟಂಬದ ಜೊತೆ ಸಹ ಬಾಳ್ವೆಯಿಂದ ಜೀವನ ನಡೆಸಿದರೆ ತಮ್ಮ ಬದುಕಿಗೊಂದು ಅರ್ಥ ಬರುತ್ತದೆ ಎಂದರು.

ಬಿಳಿಕಿ ಮಠದ ರಾಚೋಟೇಶ್ವರ ಶಿವಾಚಾರ್ಯ ಶ್ರೀಗಳು ಮಾತನಾಡಿ, ಹೊನ್ನಾಳಿಯ ಹಿರೇಕಲ್ಮಠ ಎರಡನೇ ಶ್ರೀಶೈಲ ಮಠ ಎಂದು ಖ್ಯಾತಿ ಪಡೆದಿದೆ. ಶ್ರೀಮಠ ಅಂತಹ ಸಂಸ್ಕಾರ, ಸನ್ಮಾರ್ಗ ನೀಡುತ್ತಾ ಕಾಲಕಾಲಕ್ಕೆ ಭಕ್ತರಿಗೆ ಮಾರ್ಗದರ್ಶನ ಮಾಡುತ್ತಾ ಬಂದಿದೆ ಎಂದರು.

ರಟ್ಟಿಹಳ್ಳಿಯ ಶ್ರೀ ಶಿವಲಿಂಗ ಶಿವಾಚಾರ್ಯ ಶ್ರೀಗಳು ಮಾತನಾಡಿ, ಇತ್ತೀಚಿಗೆ ಕನ್ಯಾ ಪಿತೃಗಳು ತಮ್ಮ ಮಗಳಿಗೆ ಮದುವೆ ಮಾಡುವಾಗ ವರನ ಕಡೆಯವರಿಗೆ ಅನೇಕ ನಿಬಂಧನೆಗಳನ್ನು ಹಾಕುತ್ತಿದ್ದಾರೆ. ವರ ಸರ್ಕಾರಿ ನೌಕರಿ, ನಗರ ಪ್ರದೇಶದಲ್ಲಿ ವಾಸ, ವರನ ಕಡೆಯವರು ಬಹಳ ಜನ ಇರಬಾರದು ಎಂಬ ನಿಬಂಧನೆಗಳನ್ನು ಹಾಕುವ ಕಾಲ ಬಂದಿದೆ. ಇದರಿಂದಾಗಿಯೇ ಅವಿಭಕ್ತ ಕುಟುಂಬಗಳು ಮರೆಯಾಗುತ್ತಿವೆ. ಇಂತಹ ಸಂಕುಚಿತ ಮನೋಭಾವ ಬಿಡಬೇಕು ಎಂದರು.

ಮುಷ್ಠೂರು ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯನಲ್ಲಿ ಧಾರ್ಮಿಕ ನಂಬಿಕೆಗಳು ಕಡಿಮೆಯಾಗುತ್ತಿರುವುದು ಎಲ್ಲಾ ರೀತಿಯ ದುಃಖಗಳಿಗೆ ಕಾರಣವಾಗಿದೆ ಎಂದು ಹೇಳಿದರು.

ಬೃಹನ್ಮಠದ ರಾಂಪುರದ ಶಿವಕುಮಾರ ಹಾಲಸ್ವಾಮಿ, ಗೋವಿನಕೋವಿ ವಿಶ್ವಾರಾಧ್ಯ ಮಹಾಲಿಂಗಸ್ವಾಮೀಜಿ, ಮೈಸೂರಿನ ಸುಜ್ಞಾನದೇವ ಶಿವಾಚಾರ್ಯರು, ಪ್ರಮುಖರಾದ ಪಟ್ಟಣಶೆಟ್ಟಿ ಪರಮೇಶ್, ಎಚ್.ಎ.ಉಮಾಪತಿ, ಹೊಸಕೇರಿ ಸುರೇಶ್, ಪುರಸಭೆ ಅಧ್ಯಕ್ಷ ಮೈಲಪ್ಪ ಮಾತನಾಡಿದರು.

ಮುಂಡರಗಿ ತಾಲ್ಲೂಕು ಕೋರ್ಲಹಳ್ಳಿಯ ನಾಗಪ್ಪ ಗಂಗಪ್ಪ ಮಜ್ಜಿಗೆ ಇವರಿಗೆ ಲಿಂ. ಚಂದ್ರಶೇಖರ ಶಿವಾಚಾರ್ಯ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖಂಡರಾದ ಎಂ.ಪಿ. ರಮೇಶ್, ಮಂಜುನಾಥ, ಇಂಚರ, ಗದ್ದಿಗೇಶ್, ಸಣ್ಣಕ್ಕಿ ಬಸವನಗೌಡ, ಕುಮಾರಸ್ವಾಮಿ, ಗಂಗಾಧರಯ್ಯ, ಚನ್ನಯ್ಯ ಬೆನ್ನೂರುಮಠ, ರುದ್ರಣ್ಣ, ಶ್ರೀಮಠದ ಚನ್ನಬಸವಯ್ಯ ಇತರರು ಇದ್ದರು.

# ಹಳ್ಳಿ ಮಕ್ಕಳಲ್ಲಿರುವ ವಿಶೇಷ ಪ್ರತಿಭೆಯನ್ನು ಹೊರ ತನ್ನಿ

## ಜಿಗಳಿ : ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಗುರುಸಿದ್ಧಸ್ವಾಮಿ ಮನವಿ



ಮಲೇಬೆನ್ನೂರು, ಮಾ. 11- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳೇ ತಯಾರು ಮಾಡಿದ ವಿಜ್ಞಾನ ವಸ್ತುಗಳ ಪ್ರದರ್ಶನ ನಡೆಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ ಮಾತನಾಡಿ, ಈ ಶಾಲೆಯ ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಇರುವ ಪ್ರತಿಭೆ ಕಂಡು ನನಗೆ ತುಂಬಾ ಸಂತೋಷವಾಯಿತು.

ಶಿಕ್ಷಣ ಕೃಷಿಯಲ್ಲಿ ನಿರತರಾಗಿರುವ ಶಿಕ್ಷಕರು, ಮಕ್ಕಳಲ್ಲಿರುವ ವಿಶೇಷ ಪ್ರತಿಭೆಯನ್ನು ಹೊರ ತರುವ ಕೆಲಸ ಮಾಡಬೇಕು. ಆಗ ಮಾತ್ರ ನೀವು ಶ್ರೇಷ್ಠ ಶಿಕ್ಷಕರಾಗಲು ಸಾಧ್ಯ ಎಂದು ಅವರು ಹೇಳಿದರು.

ಜಿಲ್ಲಾ ಬಾಲ ಭವನದ ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಶಿಲ್ಪಾ ಮಾತನಾಡಿ, ಶಾಮನೂರು ಬಳಿ ಇರುವ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಜಿಲ್ಲಾ ಬಾಲ ಭವನವಿದ್ದು, ಶಿಕ್ಷಕರು ತಮ್ಮ ಶಾಲೆಗಳ ಮಕ್ಕಳನ್ನು ಒಮ್ಮೆ ಅಲ್ಲಿಗೆ ಕರೆ ತಂದರೆ ಅಲ್ಲಿನ ಉದ್ದೇಶ ಮತ್ತು ಮನರಂಜನೆಯನ್ನು ಮಕ್ಕಳಿಗೆ ತಿಳಿಸುತ್ತೇವೆ.

ವಲಯ ಅರಣ್ಯಾಧಿಕಾರಿ ಧನ್ಯಕುಮಾರ್ ಮಾತನಾಡಿ, ಇಂತಹ ಒಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿರುವ ಜಿಗಳಿ ಶಾಲೆಯ ಶಿಕ್ಷಕರು ಮಾದರಿಯಾಗಿದ್ದು, ಮಕ್ಕಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಇಕೋ ಕ್ಲಬ್ ಸ್ಥಾಪಿಸಿರುವುದು ಕೂಡಾ ಶ್ಲಾಘನೀಯ ಎಂದರು.

ಅರಣ್ಯ ಇಲ್ಲದಿದ್ದರೆ, ನದಿಗಳೇ ಇರುವುದಿಲ್ಲ ಎಂಬ ವಿಷಯವನ್ನು ವಿವರವಾಗಿ ತಿಳಿಸಿದ ಧನ್ಯಕುಮಾರ್, ಮರ-ಗಿಡಗಳು ನೀರನ್ನು ಹಿಡಿದುಕೊಂಡು, ನಂತರ ಬಿಟ್ಟಾಗ ಅದು ಝರಿ ಝರಿಯಾಗಿ ಹರಿದು ಹಳ್ಳ-ಕೊಳ್ಳಗಳಾಗಿ ನದಿ ಸೇರುತ್ತದೆ.

ನದಿಗಳನ್ನು ಪೂಜಿಸುವ ನಾವೇ ನದಿಯಲ್ಲಿ ಬಟ್ಟೆ, ದೇವರ ಫೋಟೋಗಳನ್ನು ಸೇರಿದಂತೆ ಬೇಡವಾದ ವಸ್ತುಗಳನ್ನೂ ಹಾಕುತ್ತೇವೆ. ಇದರಿಂದ ನದಿ ನೀರು ಮಲಿನವಾಗುತ್ತದೆ. ಈ ಮಕ್ಕಳೇ ಪೋಷಕರಿಗೆ ಅರಿವು ಮೂಡಿಸಬೇಕು.

ವಾತಾವರಣವನ್ನು ಸುಸ್ಥಿರವಾಗಿಡಲು ಶೇ. 33ರಷ್ಟು ಅರಣ್ಯ ಪ್ರದೇಶ ಇರಬೇಕು. ಆದರೀಗ ಶೇ. 22ರಷ್ಟು ಮಾತ್ರ ಅರಣ್ಯ ಪ್ರದೇಶ ಇದೆ. ಆದ್ದರಿಂದ ಪ್ರತಿಯೊಬ್ಬರೂ ಗಿಡ-ಮರಗಳನ್ನು ಬೆಳೆಸಲು ಒತ್ತು ನೀಡಬೇಕೆಂದು ಧನ್ಯಕುಮಾರ್ ಮನವಿ ಮಾಡಿದರು.

ಪತ್ರಕರ್ತ ಪ್ರಕಾಶ್, ಶಾಲಾ ಮುಖ್ಯ ಶಿಕ್ಷಕ ಲಿಂಗರಾಜ್, ಶಿಕ್ಷಕ ಲೋಕೇಶ್ ಮಾತನಾಡಿ, ವಿಜ್ಞಾನ ಎಂದರೆ ನಿರಂತರ ಬದಲಾವಣೆ ಆಗಿದ್ದು, ಚರ್ಚೆ, ತರ್ಕ, ಅನ್ವೇಷಣೆಗಳನ್ನು ಒಳಗೊಂಡಿದೆ. ಅಂತಹ ವಿಜ್ಞಾನ ವಸ್ತು ಪ್ರದರ್ಶನವನ್ನು ನಮ್ಮ ಶಾಲೆ ವಿದ್ಯಾರ್ಥಿಗಳು ಮಾಡಿರುವುದು ನಮಗೆ ಹೆಮ್ಮೆಯ ವಿಷಯ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರಾಚಾರಿ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಬಿ. ಪ್ರಭಾಕರ್, ಶಾಲಾ ಶಿಕ್ಷಕರಾದ ಮಲ್ಲಿಕಾರ್ಜುನ್, ಶ್ರೀನಿವಾಸ್ ರೆಡ್ಡಿ, ಗುಡ್ಡಪ್ಪ, ಕರಿಬಸಮ್ಮ, ಜಯಶ್ರೀ, ಶಿಲ್ಪಾ, ಸಂಗೀತ ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ಜಿಲ್ಲಾಡಳಿತದಿಂದ ಶ್ರೀ ರೇಣುಕಾಚಾರ್ಯರ ಜಯಂತಿ

ದಾವಣಗೆರೆ ಜಿಲ್ಲಾಡಳಿತದ ವತಿಯಿಂದ ಮಾ.12ರ ಇಂದು ಬೆಳಗ್ಗೆ 10.30ಕ್ಕೆ ಜಿಲ್ಲಾಡಳಿತ ಭವನದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿ ಚಂದ್ರ ತಿಳಿಸಿದ್ದಾರೆ.

# ಸೇವೆ ಮೂಲಕ ಅರಿವು ಮೂಡಿಸುವುದೇ ಎನ್ನೆಸ್ಸೆಸ್ ಉದ್ದೇಶ

## ಹರಪನಹಳ್ಳಿ : ರಾಷ್ಟ್ರೀಯ ಸೇವಾ ಯೋಜನೆ ಸ್ವಚ್ಛತಾ ಕಾರ್ಯಕ್ರಮದಲ್ಲಿ ಡಾ. ಸಿದ್ದಲಿಂಗಮೂರ್ತಿ

ಹರಪನಹಳ್ಳಿ,ಮಾ.11- ಸೇವೆ ಇಲ್ಲದ ಜೀವನ ಅದು ಜೀವನವೇ ಅಲ್ಲ ಎಂದು ಪ್ರಾಚಾರ್ಯ ಡಾ. ಎಸ್.ಎಂ. ಸಿದ್ದಲಿಂಗಮೂರ್ತಿ ಹೇಳಿದರು.



ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ದೈನಂದಿನ ಚಟುವಟಿಕೆ ಕಾರ್ಯಕ್ರಮದಡಿ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣ. ಸಂತೆ ಮೈದಾನ ಕಾಲೇಜು ಆವರಣ ರಸ್ತೆಗಳ ಭಾಗದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿ ಅರಿತು, ಅದನ್ನು ಬದುಕಿನೊಡನೆ ನೇರ ಸಂಪರ್ಕವಿಟ್ಟು ಕೊಳ್ಳಬೇಕು ಎಂಬುದು ಗಾಂಧೀಜಿ ಅವರ ಕನಸಾಗಿತ್ತು. ಸೇವೆಯ ಮೂಲಕ ಸಮಾಜದ ಅರಿವು ಮೂಡಿಸುವುದು ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯ ಉದ್ದೇಶ. ಇದರಿಂದ ಸ್ವಯಂ ಸೇವಕರ ವ್ಯಕ್ತಿತ್ವ ವಿಕಸನವಾಗುತ್ತದೆ. ಸಮಾಜ ಸೇವೆಯ ಪ್ರಜ್ಞೆ ಜಾಗೃತಗೊಳ್ಳುತ್ತದೆ.

ಸೇವೆ ಎನ್ನುವ ಪದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅತ್ಯಂತ ಮಹತ್ವವನ್ನು ಪಡೆದಿದೆ. ನಮ್ಮಲ್ಲಿರುವ ಶ್ರಮ, ವಿದ್ಯೆ, ಬುದ್ಧಿ, ಜ್ಞಾನ, ಕೌಶಲ್ಯ, ಆರ್ಥಿಕ ಸೌಲಭ್ಯ ಇತ್ಯಾದಿಗಳನ್ನು ಸಮಾಜದ, ದೇಶದ ಒಳಿತಿಗಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಅರ್ಪಣಾ ಮನೋಭಾವದಿಂದ ನೀಡುವ ಸಹಾಯವೇ ಸೇವೆ. ಸೇವಾ ಚಟುವಟಿಕೆ ನಮ್ಮ ಜೀವನದ ಅವಿಭಾಜ್ಯ ಭಾಗ ಹಾಗೂ ಸ್ವಭಾವವಾಗಬೇಕು ಎಂದರು.

ಕಾರ್ಯಕ್ರಮ ಅಧಿಕಾರಿ ಡಾ.ಎಂ. ರಾಜಶೇಖರ್ ಮಾತನಾಡಿ, ರಾಷ್ಟ್ರದ ಅನೇಕ ಕಾಲೇಜಿನ ಸಾವಿರಾರು ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಈಗಾಗಲೇ ಸ್ವಯಂ ಸೇವಕರಾಗಿ ದೈನಂದಿನ ಮತ್ತು ವಿಶೇಷ ಶಿಬಿರಗಳಲ್ಲಿ ಪಾಲ್ಗೊಂಡು ತಮ್ಮ ಸೇವೆಯನ್ನು ಧಾರೆ ಎರೆಯುತ್ತಿದ್ದಾರೆ.

ಸೇವೆಯ ಕಡೆಗೆ ವಿದ್ಯಾರ್ಥಿಗಳ ಮನಸ್ಸನ್ನು ಒಲಿಸುವುದು ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶವಾಗಿದೆ. ಶಿಕ್ಷಣದ ಉದ್ದೇಶವೂ ಇದೇ ಆಗಬೇಕು.

ಸೇವೆ ಎನ್ನುವುದು ಜೀವನದ ಪ್ರಮುಖ ಉದ್ದೇಶವಾಗಬೇಕು. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ನಂತರವೂ ಸೇವೆ, ಅನುಕಂಪದ ಸಾರ್ಥಕ ಜೀವಿಯಾಗಬೇಕು. ಕಾಲೇಜುಗಳಲ್ಲಿ ಸಾಮಾನ್ಯವಾಗಿ ಎರಡು ವರ್ಗದ ಅಂದರೆ, ಬಡ ಮತ್ತು ಶ್ರೀಮಂತ ವಿದ್ಯಾರ್ಥಿಗಳಿರುತ್ತಾರೆ. ಬಡ ವಿದ್ಯಾರ್ಥಿಗಳಿಗೆ ಶ್ರಮದ ಬದುಕಿನ ಅನುಭವವಿರುತ್ತದೆ, ಆದರೆ ಶ್ರೀಮಂತ ವಿದ್ಯಾರ್ಥಿಗಳಿಗೆ ಇರುವುದಿಲ್ಲ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಭಾಗವಹಿಸಿದಾಗ ಇವರಿಬ್ಬರ ಮಿಶ್ರಣದಿಂದ ಸಮಾನತಾ ಭಾವನೆ ಮೂಡುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಕೆಎಸ್‌ಆರ್‌ಟಿಸಿ ಬಸ್ ಡಿಪೋದ ಘಟಕ ವ್ಯವಸ್ಥಾಪಕರಾದ ಮಂಜುಳಾ, ಮಹಾವಿದ್ಯಾಲಯದ ನ್ಯಾಕ್ ಸಂಯೋಜಕ, ದೈಹಿಕ ಶಿಕ್ಷಣ ನಿರ್ದೇಶಕ ಎನ್. ನವಾಜ್ ಬಾಷಾ, ರವಿ ಸೊನ್ನದ, ಡಾ. ಅಣ್ಣೇಶ್, ಎಂ.ಜಿ ಕೊಟ್ರಗೌಡ, ಎನ್. ಕಲ್ಪನಾ, ಚೆನ್ನಪ್ಪ, ಕೆಎಸ್‌ಆರ್‌ಟಿಸಿ ಡಿಪೋದ ಸಂಚಾರಿ ನಿರೀಕ್ಷಕ ಕೊಟ್ರೇಶ್, ಎಂ ಮಂಜುನಾಥ್, ಸಹಾಯಕ ಸಂಚಾರಿ ನಿರೀಕ್ಷಕ ಶಂಕರ್, ಕಾಲೇಜು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಕುಸಿಯುತ್ತಿರುವ ದಾಖಲಾತಿ

**(1ನೇ ಪುಟದಿಂದ)** ವಿದ್ಯಾರ್ಥಿಗಳ ಪ್ರಮಾಣ ಶೇ. 54ರಷ್ಟಿತ್ತು. 2023 - 24ರ ಸಾಲಿಗೆ ಇದು ಶೇ.36 ಕ್ಕೆ ಕುಸಿದಿದೆ. ಅನುದಾನಿತ ಶಾಲೆಗಳಲ್ಲಿ ತಮಿಳು ಮಾಧ್ಯಮಕ್ಕೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ 7.3 ಲಕ್ಷ ಇಳಿಕೆಯಾಗಿದೆ ಎಂದು ಸಚಿವರು ಹೇಳಿದ್ದಾರೆ.

ಹೊರ ಜಗತ್ತಿನ ಬೇಡಿಕೆಗೆ ಅನುಗುಣವಾಗಿ ಬಹುಭಾಷಾ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಿದೆ. ನೂತನ ಶಿಕ್ಷಣ ನೀತಿ ಜಾರಿಗೆ ತಮಿಳುನಾಡು ಸರ್ಕಾರ ಪರಿಶೀಲಿಸಬೇಕಿದೆ ಎಂದವರು ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಶಿಕ್ಷಣ ಸಚಿವಾಲಯ ಕಾರ್ಯನಿರ್ವಹಣೆ ಕುರಿತಂತೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತಮಿಳುನಾಡು ದೇಶದ ಪ್ರಗತಿಯ ಚಾಲನಾ ಶಕ್ತಿ ಆಗಲಿ ಎಂದು ದೇಶ ಬಯಸುತ್ತಿದೆ ಎಂದು ಹೇಳಿದರು.

ತಮಿಳು ಭಾಷೆಯ ಬದ್ಧತೆ ಕುರಿತು ತಮ್ಮ ಸರ್ಕಾರಕ್ಕೆ ಯಾರಿಂದಲೂ ಪ್ರಮಾಣ ಪತ್ರದ ಅಗತ್ಯವಿಲ್ಲ. ಇದು ಪ್ರಜಾಸತ್ತಾತ್ಮಕವಾದ ಸಮಾಜವಾಗಿದೆ. ಬಹುಭಾಷೆ ಈಗಿನ ಅಗತ್ಯವಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ತಮಿಳು ಭಾಷೆಯ ಬಗ್ಗೆ ನನಗೆ ಹೆಮ್ಮೆ ಇದೆ. ಐದನೇ ತರಗತಿಯವರೆಗೆ ತಮಿಳು ಮಾಧ್ಯಮದಲ್ಲಿ ಕಲಿಸಬೇಕು ಎಂದು ನೂತನ ಶಿಕ್ಷಣ ನೀತಿಯಲ್ಲಿ ತಿಳಿಸಲಾಗಿದೆ. ಹೀಗಿರುವಾಗ ಅವರೇಕೆ ಆಕ್ಷೇಪಿಸುತ್ತಿದ್ದಾರೆ? ಎಂದು ಪ್ರಧಾನ್ ಪ್ರಶ್ನಿಸಿದ್ದಾರೆ.

# 15 ರಂದು ಬೃಹತ್ ಉದ್ಯೋಗ ಮೇಳ

**(1ನೇ ಪುಟದಿಂದ)** ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ 6 ಸಾವಿರಕ್ಕಿಂತಲೂ ಹೆಚ್ಚು ಪದವಿ, ಡಿಪ್ಲೋಮಾ ಪಾಸಾದವರಿಗೆ ಯುವನಿಧಿಯಡಿ ನಿರುದ್ಯೋಗ ಭತ್ಯೆ ನೀಡಲಾಗುತ್ತಿದೆ. ಇವರೆಲ್ಲರಿಗೂ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗಿದೆ. ಮಾರ್ಚ್ 15 ರಂದು ಬೆಳಗ್ಗೆ 10 ಗಂಟೆಯಿಂದ ಉದ್ಯೋಗ ಮೇಳ ಆರಂಭವಾಗಲಿದ್ದು, ಜಿಲ್ಲೆಯ ಅರ್ಹ ಅಭ್ಯರ್ಥಿಗಳು ನೇರವಾಗಿಯು ಭಾಗವಹಿಸಬಹುದಾಗಿದೆ ಎಂದು ತಿಳಿಸಿದರು.

ಈಗಾಗಲೇ https://tinyurl.com/mnm8vykz ಜಾಲತಾಣದಲ್ಲಿ ಆನ್‌ಲೈನ್ ಮೂಲಕ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಕುಡಿಯುವ ನೀರು, ಆರೋಗ್ಯ ಸುರಕ್ಷತೆ, ಲಘು ಉಪಹಾರ ಸೇರಿದಂತೆ ಎಲ್ಲಾ ಅಗತ್ಯ ಕ್ರಮ ವಹಿಸಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ, ನಗರದ ಹೈಸ್ಕೂಲ್ ಮೈದಾನದಲ್ಲಿ ಮಾರ್ಚ್ 15 ರಿಂದ 5 ದಿನಗಳ ಕಾಲ 20 ಸ್ವ-ಸಹಾಯ ಸಂಘದ ಮಹಿಳೆಯರು ತಯಾರಿಸಿರುವ ವಸ್ತುಗಳ ಮಾರಾಟಕ್ಕಾಗಿ ಮಾಸಿಕ ಸಂತೆಯನ್ನು ಏರ್ಪಡಿಸಲಾಗಿದೆ ಎಂದರು.

ಮಾರ್ಚ್ 14 ಮತ್ತು 15 ರಂದು ಎಲ್ಲಾ ಬ್ಯಾಂಕ್‌ಗಳ ಮೂಲಕ ಎಲ್ಲಾ ನಾಗರಿಕರಿಗೂ ಪ್ರಧಾನಮಂತ್ರಿ ಜೀವನ್ ಜ್ಯೋತಿ, ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆಗೆ ನೋಂದಾಯಿಸಲು ಬೃಹತ್ ಶಿಬಿರ ಮಾಡಲಾಗುತ್ತಿದೆ. ಈ ಎರಡೂ ವಿಮೆ ಮಾಡಿಸುವುದರಿಂದ ಅಪಘಾತ, ಮರಣ ಹೊಂದಿದಾಗ ಪರಿಹಾರ ಸಿಗಲಿದೆ ಎಂದರು. ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ರೇಷ್ಮಾ ಕೌಸರ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

**ಬೇಸಿಗೆ: 2 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ**

ಬೇಸಿಗೆಯಲ್ಲಿ 197 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದ್ದು, 2 ಕೋಟಿ ರೂ. ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿ.ಪಂ. ಸಿಇಒ ಸುರೇಶ್ ಬಿ. ಇಟ್ನಾಳ್ ತಿಳಿಸಿದರು. ಮಾರ್ಚ್‌ನಲ್ಲಿ 58, ಏಪ್ರಿಲ್‌ನಲ್ಲಿ 57 ಹಾಗೂ ಮೇ ತಿಂಗಳಲ್ಲಿ 53 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ. 126 ಖಾಸಗಿ ಕೊಳವೆಬಾವಿಗಳನ್ನು ಗುರುತಿಸಲಾಗಿದೆ. 158 ಕೊಳವೆ ಬಾವಿಗಳನ್ನು ಮರು ಕೊರೆಸಲು ತೀರ್ಮಾನಿಸಲಾಗಿದೆ ಎಂದರು.

# ಕೆನಡಾ ಮೇಲಿನ ಉದ್ದೇಶಿತ ತೆರಿಗೆಯನ್ನು ಶೇ. 50 ಕ್ಕೆ ಹೆಚ್ಚಿಸಿದ ಟ್ರಂಪ್: ಷೇರುಪೇಟೆ ಕುಸಿತ


ವಾಷಿಂಗ್ಟನ್, ಮಾ. 11 - ಕೆನಡಾದಿಂದ ಆಮದಾಗುವ ಉಕ್ಕು ಹಾಗೂ ಅಲ್ಯೂಮಿನಿಯಂ ಮೇಲೆ ವಿಧಿಸಲು ಉದ್ದೇಶಿಸಿದ್ದ ಶೇ. 25ರ ತೆರಿಗೆಯನ್ನು ಶೇಕಡ 50 ಕ್ಕೆ ಹೆಚ್ಚಿಸಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇದರಿಂದಾಗಿ ಅಮೆರಿಕ ಹಾಗೂ ಕೆನಡಾ ನಡುವಿನ ವ್ಯಾಪಾರಿ ಸಮರ ಇನ್ನಷ್ಟು ಉಲ್ಬಣಿಸಿದೆ.

ಬುಧವಾರದಿಂದ ಈ ತೆರಿಗೆ ಹೆಚ್ಚಳ ಜಾರಿಗೆ ಬರಲಿದೆ ಎಂದು ಟ್ರಂಪ್ ಹೇಳಿದ್ದಾರೆ. ಅಮೆರಿಕಾಗೆ ಪೂರೈಸುವ ವಿದ್ಯುತ್ ಮೇಲಿನ ತೆರಿಗೆ ಹೆಚ್ಚಿಸುವುದಾಗಿ ಕೆನಡಾ ಹೇಳಿದ ಬೆನ್ನಲ್ಲೇ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕೆನಡಾದಿಂದ ಆಮದಾಗುವ ಉಕ್ಕು ಹಾಗೂ ಅಲ್ಯೂಮಿನಿಯಂ ಮೇಲೆ ಶೇಕಡ 50ರಷ್ಟು ತೆರಿಗೆ ವಿಧಿಸಲು ವಾಣಿಜ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದೇನೆ. ಇದು ವಿಶ್ವದಲ್ಲೇ ಅತಿ ಹೆಚ್ಚಿನ ತೆರಿಗೆಗಳಲ್ಲಿ ಒಂದಾಗಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದ ಮೂಲಕ ಟ್ರಂಪ್ ಈ ಹೇಳಿಕೆ ನೀಡಿದ ನಂತರ ಅಮೆರಿಕದ ಷೇರುಪೇಟೆಯಲ್ಲಿ ತೀವ್ರ ಕುಸಿತ ಕಂಡು ಬಂದಿದೆ.

## ಹರಿಹರದ ಶ್ರೀ ದೊಡ್ಡತಿಪ್ಪೇಶಪ್ಪ ನಿಧನ



ದಾವಣಗೆರೆ ತಾಲ್ಲೂಕು
ಹೊಸ ಬೆಳವನೂರು ಗ್ರಾಮದ ವಾಸಿ
ಹರಿಹರದ ಹೆಚ್.ಟಿ. ನಾಗರಾಜಪ್ಪ
ಅವರ ತಂದೆಯವರಾದ
**ಹರಿಹರದ ಶ್ರೀ ದೊಡ್ಡ ತಿಪ್ಪೇಶಪ್ಪ**
ಇವರು ದಿನಾಂಕ : 11.03.2025ರ
ಮಂಗಳವಾರ ಸಂಜೆ 5.40ಕ್ಕೆ
ನಿಧನರಾದರು.

ಮೃತರಿಗೆ 89 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು 12.03.2025ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹೊಸಬೆಳವನೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಮೊ. 97400 94294**

## ನಾಗನೂರು ಗ್ರಾಮದ ಅಚ್ಚೇಟಿ ರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದ ವಾಸಿ ದಿ. ಅಚ್ಚೇಟಿ ತಿಪ್ಪೇಶಪ್ಪನವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (75) ಅವರು ದಿನಾಂಕ 11.03.2025ರ ಮಂಗಳವಾರ ರಾತ್ರಿ 8 ಗಂಟೆಗೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.03.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಾಗನೂರಿನ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

# ಅಕ್ರಮ ಬ್ಯಾನರ್: ಮಾಜಿ ಸಿಎಂ ಕೇಜ್ರಿವಾಲ್ ವಿರುದ್ಧ ಎಫ್.ಐ.ಆರ್.ಗೆ ಕೋರ್ಟ್ ಆದೇಶ

ನವದೆಹಲಿ, ಮಾ. 11 - ಅಕ್ರಮವಾಗಿ ಬ್ಯಾನರ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿದ ಆರೋಪದ ಮೇಲೆ ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ದೆಹಲಿ ನ್ಯಾಯಾ ಲಯ ಆದೇಶಿಸಿದೆ. ಅಕ್ರಮ ಬ್ಯಾನರ್‌ಗಳಲ್ಲಿ ಕೇಜ್ರಿವಾಲ್ ಸೇರಿದಂತೆ ಹಲವರ ಚಿತ್ರಗಳಿವೆ. ಇವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯ ಮೂರ್ತಿ ನೇಹಾ ಮಿತ್ತಲ್ ಆದೇಶಿಸಿದ್ದಾರೆ. ಈ ರೀತಿಯ ಬ್ಯಾನರ್‌ಗಳು ಸಾರ್ವಜನಿಕ ಆಸ್ತಿ ವಿರೂಪಗೊಳಿಸುವುದಷ್ಟೇ ಅಲ್ಲದೆ ಸಂಚಾರಕ್ಕೆ ಅಪಾಯಕಾರಿಯೂ ಆಗಿವೆ. ಅಕ್ರಮ ಫಲಕಗಳು ಬಿದ್ದು ಸಾವು ಸಂಭವಿಸುವುದು ಭಾರತದಲ್ಲಿ ಹೊಸದೇನು ಅಲ್ಲ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

# ತಮಿಳು ಅನಾಗರಿಕ ಭಾಷೆ ಎಂದವರನ್ನು ಆರಾಧಿಸುತ್ತೀರಿ : ಡಿಎಂಕೆಗೆ ಸಚಿವೆ ತರಾಟೆ

ನವದೆಹಲಿ, ಮಾ. 11 - ತಮಿಳು ಭಾಷೆಯನ್ನು ಅನಾಗರಿಕ ಎಂದು ಜರಿದ ಹಿರಿಯ ವ್ಯಕ್ತಿಯೊಬ್ಬರನ್ನು ಡಿಎಂಕೆ ಆರಾಧಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತರಾಟೆಗೆ ತೆಗೆದುಕೊಂಡಿದ್ದಾರೆ.

ತಮಿಳು ಅನಾಗರಿಕ ಭಾಷೆ, ಇದು ಭಿಕ್ಷುಕರು ಊಟ ಪಡೆಯಲೂ ಸಹ ನೆರವಾಗದು ಎಂದು ಹಿರಿಯ ವ್ಯಕ್ತಿಯೊಬ್ಬರು ಹೇಳಿದ್ದರು. ಅವರ ಹೆಸರು ನಾನು ಹೇಳುವುದಿಲ್ಲ. ಆದರೆ ಅವರು ಹೇಳಿದ ಮಾತುಗಳನ್ನು ಉಲ್ಲೇಖಿಸಿದರೆ, ತಮಿಳಿನ ಬಗ್ಗೆ ಸ್ವಲ್ಪವಾದರೂ ತಿಳಿದವರಿಗೆ ಆ ವ್ಯಕ್ತಿ ಯಾರೆಂಬುದು ತಿಳಿಯುತ್ತದೆ ಎಂದು ಸೀತಾರಾಮನ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಮಾತನಾಡಿದ ಬಿಜೆಪಿ ನಾಯಕಿ ಸೀತಾರಾಮನ್ ಅವರು ಹಿರಿಯ ವ್ಯಕ್ತಿ ಯಾರು ಎಂಬುದನ್ನು ಹೇಳಲಿಲ್ಲ. ಆದರೆ ಅವರು ದ್ರಾವಿಡ ಚಳುವಳಿಯ ನೇತಾರ ಪೆರಿಯಾರ್ ಅವರನ್ನು ಉಲ್ಲೇಖಿಸಿದ್ದರು ಎಂಬುದು ಸ್ಪಷ್ಟವಾಗಿತ್ತು.

ಆ ವ್ಯಕ್ತಿ ತಮಿಳಿನ ಬಗ್ಗೆ ಎಷ್ಟು ಕೇವಲವಾಗಿ ಮಾತನಾಡಿದ್ದಾರೆ. ಆದರೆ ಡಿಎಂಕೆ ಆ ಬಗ್ಗೆ ಆಕ್ಷೇಪಿಸುವುದಿಲ್ಲ. ಅದರ ಬದಲು ಅವರ ಚಿತ್ರವನ್ನು ಹಿಡಿದುಕೊಂಡಿದೆ, ಇವರು ನಮ್ಮ ದ್ರಾವಿಡ ನೇತಾರ ಎಂದು ಹೇಳುತ್ತಿದೆ ಎಂದು ತಿಳಿಸಿದರು. ತಮಿಳು ಭಾಷೆಯ ಬಗ್ಗೆ ಡಿಎಂಕೆ ಮಿಥ್ಯಾಚಾರದಿಂದ ವರ್ತಿಸುತ್ತಿದೆ. ನಿಮ್ಮ ಪ್ರತಿಭಟನೆ ಅನಾಗರಿಕವಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ ಮಾತನ್ನು ವಾಪಸ್ ಪಡೆಯುವಂತೆ ಒತ್ತಡ ಹೇರಿದ್ದೀರಿ. ಆದರೆ ತಮಿಳು ಅನಾಗರಿಕ ಭಾಷೆ ಎಂದು ಹೇಳಿದವರ ಚಿತ್ರವನ್ನು ಪ್ರತಿಯೊಂದು ಕೋಣೆಯಲ್ಲಿ ಹಾಕಿಕೊಂಡಿದ್ದೀರಿ, ಅವರಿಗೆ ಹಾರ ಹಾಕಿ ಆರಾಧಿಸುತ್ತೀರಿ ಹಾಗೂ ಅವರು ದ್ರಾವಿಡ ಚಳುವಳಿಯ ನೇತಾರ ಎನ್ನುತ್ತೀರಿ ಇದು ಮಿಥ್ಯಾಚಾರ ಎಂದು ಸೀತಾರಾಮನ್ ಹೇಳಿದರು.

## ಹಳೇ ಕುಂದುವಾಡದ ಶತಾಯುಷಿ ಸೀತಮ್ಮ ನಿಧನ



ದಾವಣಗೆರೆ ಹಳೇ ಕುಂದುವಾಡ ನಿವಾಸಿ
ಗ್ವಾರಪ್ಪರ ದಿವಂಗತ ನಿಂಗಪ್ಪ ಇವರ ಧರ್ಮಪತ್ನಿ
**ಶತಾಯುಷಿ ಸೀತಮ್ಮ**
ಇವರು, ದಿನಾಂಕ 11.3.2025ರ ಮಂಗಳವಾರ ಸಂಜೆ ನಿಧನರಾದರು.
ಮೃತರಿಗೆ 103 ವರ್ಷ ವಯಸ್ಸಾಗಿತ್ತು. ಏಳು ಜನ ಪುತ್ರರು,
ಏಳು ಜನ ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಗಿರಿಮೊಮ್ಮಕ್ಕಳು
ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ 12.3.2025ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹಳೇ
ಕುಂದುವಾಡ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 9740220709, 9900636628**

## ಚಿಕ್ಕಮೇಗಳಗೆರೆ ಗ್ರಾಮದ ರತ್ನಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು, ಚಿಕ್ಕಮೇಗಳಗೆರೆ ಗ್ರಾಮದ
ದಿ. ಸದಾಶಿವಪ್ಪನವರ ಧರ್ಮಪತ್ನಿ
**ಶ್ರೀಮತಿ ರತ್ನಮ್ಮ**
ಇವರು ದಿನಾಂಕ 11.3.2025ರ ಮಂಗಳವಾರ ಸಂಜೆ 7.45ಕ್ಕೆ ನಿಧನರಾದರೆಂದು
ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿದ್ದು,
ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ
ಅಂತ್ಯಕ್ರಿಯೆಯನ್ನು ದಿನಾಂಕ 12.3.2025ರ ಬುಧವಾರ ಮಧ್ಯಾಹ್ನ 12 ಗಂಟೆಗೆ
ಚಿಕ್ಕಮೇಗಳಗೆರೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 99005 07834, 98445 53177**

## ಶ್ರೀ ವೇದಮೂರ್ತಿ ಎ.ಎಂ. ನಿಧನ



ದಾವಣಗೆರೆ ಸಿಟಿ, ವಿನೋಬನಗರ ವಾಸಿ
ದಿ. ವೀರಭದ್ರಯ್ಯ ಇವರ ಮಗನಾದ
**ಶ್ರೀ ವೇದಮೂರ್ತಿ ಎ.ಎಂ.**
ಇವರು ದಿನಾಂಕ : 11.3.2025ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ
ನಿಧನರಾದರು. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ : 12.3.2025ರ ಬುಧವಾರ ಮಧ್ಯಾಹ್ನ 11.30ಕ್ಕೆ
ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**
**76760 04468, 82178 06025**

# 'ಒದೆಯುವೆ' ಎಂದ ಖರ್ಗೆ

**(1ನೇ ಪುಟದಿಂದ)** ಮಂಗಳವಾರ ರಾಜ್ಯಸಭಾ ಉಪಾಧ್ಯಕ್ಷ ಹರಿವಂಶ್ ಅವರು ಸಭಾಧ್ಯಕ್ಷರ ಪೀಠದಲ್ಲಿದ್ದರು. ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರು ಸಚಿವಾಲಯದ ಕಾರ್ಯನಿರ್ವಹಣೆ ಕುರಿತ ಚರ್ಚೆಯಲ್ಲಿ ಮಾತನಾಡಲು ತಿಳಿಸಿದರು. ಸಚಿವ ಪ್ರಧಾನ್ ಕ್ಷಮೆ ಯಾಚಿಸಬೇಕು ಎಂದು ಡಿಎಂಕೆ ಸಂಸದರು ಇದೇ ವೇಳೆ ಗದ್ದಲ ನಡೆಸುತ್ತಿದ್ದರು.

ಈ ನಡುವೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಲು ಎದ್ದು ನಿಂತರು. ಈ ವಿಷಯದ ಬಗ್ಗೆ ಮಾತನಾಡಲು ಖರ್ಗೆ ಅವರಿಗೆ ಬೆಳಿಗ್ಗೆ ಈಗಾಗಲೇ ಅವಕಾಶ ನೀಡಲಾಗಿದೆ ಎಂದು ರಾಜ್ಯಸಭಾ ಉಪಾಧ್ಯಕ್ಷರು ಹೇಳಿದರು.

ನಾನು ಆ ವೇಳೆ ಮಾತನಾಡುವಾಗ ಶಿಕ್ಷಣ ಸಚಿವರು ಸದನದಲ್ಲಿ ಇರಲಿಲ್ಲ. ಈಗ ಮಾತನಾಡಲು ಅವಕಾಶ ನೀಡದೇ ಇರುವುದು ಸರ್ವಾಧಿಕಾರ ಎಂದು ಖರ್ಗೆ ಹೇಳಿದರು.

ಮುಂದುವರೆದು ಮಾತನಾಡಿದ ಅವರು, ನೀವು ನನಗೆ ಮಾತನಾಡಲು ಅವಕಾಶ ನೀಡಬೇಕು ಎಂದು ಕೈಮುಗಿದು ಕೇಳುತ್ತೇನೆ. ನಿಮಗೂ ಒದ್ದೇ ಒದೆಯುತ್ತೇವೆ, ಸರ್ಕಾರವನ್ನೂ ಒದೆಯುತ್ತೇವೆ ಎಂದು ಹೇಳಿದರು.

ಖರ್ಗೆ ಅವರ ಮಾತಿಗೆ ತೀವ್ರವಾಗಿ ಆಕ್ಷೇಪಿಸಿದ ಸದನದ ನಾಯಕ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಸಭಾಧ್ಯಕ್ಷರ ಮೇಲೆ ದಾಳಿ ನಡೆಸುವಂತಹ ಭಾಷೆ ಆಕ್ಷೇಪಾರ್ಹ. ಇದನ್ನು ಖಂಡಿಸುತ್ತೇವೆ, ಖರ್ಗೆ ತಮ್ಮ ಮಾತಿಗಾಗಿ ಕ್ಷಮೆ ಯಾಚಿಸಬೇಕು ಎಂದರು.

ತಮ್ಮ ಮಾತುಗಳಿಗಾಗಿ ಕ್ಷಮೆ ಯಾಚಿಸಿದ ಖರ್ಗೆ, ನಾನು ಸಭಾಧ್ಯಕ್ಷರ ಬಗ್ಗೆ ಮಾತನಾಡಿಲ್ಲ. ಸರ್ಕಾರದ ನೀತಿಗಳ ಬಗ್ಗೆ ಮಾತನಾಡಿದ್ದೆ ಎಂದರು.

## 'ದಾವಣಗೆರೆ ಹಳೆ ಊರಿನ ಕಾಮದಹನ, ಹೋಳಿ ಸ್ವಾರಸ್ಯಗಳು'

# ಬಾಬಣ್ಣರ ಕಂಬ ಗೊಂಬಿ ?!!

ಹಳೇ ಊರಿನ ಕ್ಯಾಲೆಂಡರ್ ಸ್ವಾರಸ್ಯಗಳನ್ನು ಹೇಳುತ್ತಿದ್ದ, ನಡುವೆ ಕಾಮದಹನ ಹಾಗೂ ಹೋಳಿ ಬಂದದ್ದರಿಂದ ಈ ಕುರಿತಾದ ಹಳೇ ಸ್ವಾರಸ್ಯಗಳನ್ನು ಬರೆದು ನಂತರ ಕ್ಯಾಲೆಂಡರ್ ಸ್ವಾರಸ್ಯ ಮುಂದುವರಿಸುವೆ.



ಕಾಮದಹನ ಸಮೀಪಿಸಿದರೆ ಸಾಕು ನಮ್ಮ ಬಾಲ್ಯದಲ್ಲಿ ಮಕ್ಕಳು ತಂಡ - ತಂಡವಾಗಿ ಕಾಮಣ್ಣನ ಚಿತ್ರಪಟವನ್ನು ಕೋಲಿಗೆ ಸಿಕ್ಕಿಸಿಕೊಂಡು ಕೈಯಲ್ಲಿ ಒಂದು ಡಬ್ಬಿ ಹಿಡಿದು ಊರೆಲ್ಲಾ ಸುತ್ತುತ್ತಾ ಪಟ್ಟಿ ಸಂಗ್ರಹಿಸುತ್ತಿದ್ದರು. ಈಗ ಇದು ತುಂಬಾ ಕಡಿಮೆಯಾಗಿದೆ. ಹಾಗೆ ಪಟ್ಟಿ ಕೇಳುತ್ತಾ ಹೋಗುವಾಗ 'ಕಾಮಣ್ಣ ಮಕ್ಕಳೇ, ಕಳ್ಳ ಸೂಳೇ ಮಕ್ಕಳೇ, ಭೀಮಣ್ಣ ಮಕ್ಕಳೇ ಭಿಕ್ಷೆ ಬೇಡೋ ಮಕ್ಕಳೇ, ಐದೇ ಕುಳ್ಳು, ಆರೆ ಕಟಗಿ, ಎಂಟಣೆ ರೊಕ್ಕ ಕೊಡತಂಕ ಬಿಡಲ್ಲ...' ಎಂದು ಬಾಯಿ ಬಡಿದುಕೊಳ್ಳುತ್ತಿದ್ದರು. ಆದರೆ, ಇಲ್ಲಿ ಹೇಳಬೇಕಾದ್ದು ಕಳ್ಳ 'ಸೂಳೇ' ಮಕ್ಕಳೇ ಅಂತಲ್ಲ, ಕಳ್ಳ 'ಸುಳ್ಳ' ಮಕ್ಕಳೇ ಎಂದು ಹೇಳಬೇಕು. ಅಂದರೆ ಸುಳ್ಳು ಹೇಳುವವರು ಎಂದು ಅಷ್ಟೇ.

ನಂತರ ಮಕ್ಕಳು ಇದಕ್ಕೆ ಮತ್ತೊಂದು ಸೇರ್ಪಡೆ ಮಾಡಿದರು, ಅದೇನೆಂದರೆ 'ಎಂಟಣೆ ರೊಕ್ಕ ಡಬ್ಬದಾಗಿಕ್ರಿ, ಒಂದು ರೂಪಾಯಿ ರೊಕ್ಕ ಜೇಬಾಗಿಕ್ರಿ...' ಎಂದು. ಇಲ್ಲಿ ಸಣ್ಣ ಮೊತ್ತವನ್ನಷ್ಟೇ ಲೆಕ್ಕಕ್ಕೆ ತೆಗೆದುಕೊಂಡು ದೊಡ್ಡ ಮೊತ್ತವನ್ನು 'ಗುಳುಂ' ಮಾಡುವ ಕಾಮಣ್ಣ ಮಕ್ಕಳ ಕಳ್ಳ ಮತ್ತು ಸುಳ್ಳುತನವನ್ನು ಮತ್ತಷ್ಟು ಸಮರ್ಥಿಸಿಕೊಂಡರು!!.

ದಶಕಗಳ ಹಿಂದೆ ನಮ್ಮ ತಾಯಿ 'ಸ್ವಯಂ ಪ್ರೇರಿತ ಕನ್ನಡ ಅಕ್ಷರ ಶಿಕ್ಷೆ' ಪ್ರಶಸ್ತಿ ಪುರಸ್ಕೃತೆ ಡಿ. ಶ್ರೀಮತಿ ಲಕ್ಷ್ಮೀದೇವಮ್ಮನವರು ಹಾಗೂ ನನ್ನ ತಂಗಿ ಪ್ರಸಿದ್ಧ ಚಿತ್ರಕಲಾವಿದೆ ಸುಲೋಚನಾ ರವರು, ತಂಬಾಕು ಪೇಟೆ ಅಂದರೆ ಈಗಿನ ವಿಜಯಲಕ್ಷ್ಮಿ ರಸ್ತೆಯ ರಾಜನಹಳ್ಳಿ ರಾಧಾಕೃಷ್ಣ ಗುಪ್ತರವರ ಬೆಳ್ಳಿ ಬಂಗಾರದ ಅಂಗಡಿಗೆ ಹೋಗಿದ್ದರು. ರಾಜನಹಳ್ಳಿ ಹಾಲಪ್ಪನವರ ಮಕ್ಕಳಾದ ರಾಧಾಕೃಷ್ಣ ಗುಪ್ತರ ಚಿನ್ನ ಬೆಳ್ಳಿ ಅಂಗಡಿಯು ನಗರದ ಸುಪ್ರಸಿದ್ಧ ಅಂಗಡಿಗಳಲ್ಲಿ ಒಂದು. ರಾಧಾಕೃಷ್ಣ ಗುಪ್ತರ ಮಗ ರಮೇಶ ಬಾಬು ಎಲ್ಲರ ಬಾಯಲ್ಲಿ ಇವರ ಹೆಸರು 'ಬಾಬಣ್ಣ' ಎಂದೇ ಪ್ರಸಿದ್ಧಿ, ಇವರು ಪ್ರಚಾರ ಬಯಸದ ದಾನಿಗಳು, ಆಧ್ಯಾತ್ಮ ಜೀವಿಗಳು, ಸದಭಿ ರುಚಿಯ ಸಾಹಿತ್ಯಾಸಕ್ತರು, ಸಹೃದಯರು.

ಒಂದು ಹುಡುಗರ ತಂಡ ಇವರ ಅಂಗಡಿಯ ಮುಂದೆ ಬಂದು ಕಾಮಣ್ಣನ ಪಟ್ಟಿ ಕೇಳಿ ಬಾಯಿ ಬಡಿದುಕೊಂಡು ಡಬ್ಬಿ ಮುಂದು ಮಾಡಿದವು. ಕೂಡಲೇ ಬಾಬಣ್ಣನವರು 'ಕಂಬ ಗೊಂಬಿ ಎಲ್ಲಿ?' ಎಂದು ಕೇಳಿದರು. ಮಕ್ಕಳಿಗೆ ಅರ್ಥವಾಗಲಿಲ್ಲ, ಮುಖ ಮುಖ ನೋಡಿಕೊಂಡರು. ಬಾಬಣ್ಣನವರ ಪಕ್ಕದಲ್ಲಿ ಕುಳಿತಿದ್ದ ಅವರ ಮೇಷ್ಟ್ರು ಆಗಿದ್ದ ಹನುಮಂತರಾಯರು (ಇವರ ಹಾಗೂ ಬಾಬಣ್ಣನ ನಡುವಿನ ವಿಚಿತ್ರ ಗುರು ಶಿಷ್ಯ ಸಂಬಂಧದ ಬಗ್ಗೆ ಮುಂದೊಮ್ಮೆ ಬರೆಯುವೆ) 'ಕಂಬ ಅಂದ್ರೆ ಕೋಲು, ಗಳ, ಗೊಂಬಿ ಎಂದರೆ ಕಾಮಣ್ಣನ ಚಿತ್ರ ಕಣ್ರೋ, ಅದನ್ನೇ ತಂದಿಲ್ಲವಲ್ಲ!?' ಎಂದರು. ಅದಕ್ಕೆ ಒಬ್ಬ ಹುಡುಗ 'ಈಗಿನ್ನೂ ಹೊಂಟೇವಿ ಸಾ, ಕೈಯ್ಯಾಗೆ ದುಡ್ಡಿಲ್ಲ, ಪಟ್ಟಿ ಎತ್ತಿ ಕಾಮಣ್ಣನ ಚಿತ್ರ ತಗೊಂಡು ಗಳಕ್ಕೆ ಕಟ್ಟಿ ಸುಡ್ತೀವಿ' ಎಂದ. ಕೂಡಲೇ ನಸು ನಕ್ಕ ಬಾಬಣ್ಣನವರು ಐದು ರೂಪಾಯಿಯ ನೋಟ್ ಒಂದನ್ನು ತೆಗೆದು ಅಂಗಡಿಯಲ್ಲಿದ್ದ ಪುರುಷೋತ್ತಮನ ಕೈಗೆ ಕೊಟ್ಟು (ಈತ ಬಹುಶಃ ದಾವಣಗೆರೆ ನಗರಾಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದ ದಿ. ಸವಿತಾ ರುದ್ರಪ್ಪನವರ ಸಂಬಂಧಿ ಇರಬೇಕು) 'ಲೇ ಪುರುಷಿ ಇದನ್ನು ಆ ಹುಡುಗರಿಗೆ ಕೊಡು, ಕಂಬ ಗೊಂಬಿ ತಗೊಳ್ಳಿ' ಎಂದರು. ಆಗಿನ ಐದು ರೂಪಾಯಿ ಈಗಿನ ಇನ್ನೂರು ರೂಪಾಯಿಗೆ ಸಮ. ಅಂಗಡಿಯಲ್ಲಿ ಕೆಲಸಕ್ಕೆ ಇದ್ದ ನಂಜಮ್ಮ (ಈಕೆ ಗಂಡು ಮೈಕಟ್ಟಿನ ದೃಢಕಾಯಳು, ಮುಗ್ಧೆಯಾದರೂ ಬುದ್ಧಿವಂತ ಹೆಣ್ಣುಮಗಳು, ಅಂಗಡಿಯ ಕೆಲಸಗಾರರು ಗ್ರಾಹಕರುಗಳಿಗೆ ಒಡವೆಗಳನ್ನು ತೋರಿಸುವ ತೆಗೆದಿಡುವ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು) ಆಕೆ ಹೇಳಿದಳು 'ಈ ಕಾಮಣ್ಣ ಮಕ್ಕಳ್ನ ನಂಬಂಗಿಲ್ಲ ಬಾಬಣ್ಣ, ರೂಪಾಯಿ ಒಯ್ದು ತಿಂತಾರೆ, ಕಂಬ ಗೊಂಬಿ ತಗಳ್ಲ' ಎಂದಳು. 'ನೀನು ಹೇಳೋದೂ ಸರಿ ನಂಜಮ್ಮ ತಗೋ, ನೀನೇ ಹೋಗಿ ಅವರಿಗೆ ಕಂಬ ಗೊಂಬಿ ಕೊಡಿಸು' ಎಂದರು ಬಾಬಣ್ಣ. ಬಹುಶಃ ಅಲ್ಲೇ ಸಮೀಪದ ಮೈಲಾರ ಶೆಟ್ಟರ ಅಂಗಡಿಯಿಂದಲೋ ಏನೋ ಕಾಮಣ್ಣನ ಚಿತ್ರಪಟವನ್ನು ಮಕ್ಕಳಿಗೆ ನಂಜಮ್ಮ ಕೊಂಡುಕೊಟ್ಟಳು.

ಬಾಬಣ್ಣರ ಈ 'ಕಂಬ ಗೊಂಬಿ' ಪ್ರಹಸನ ಕೇಳುವಾಗ ಅಧ್ಯಾತ್ಮ, ಅದರಲ್ಲೂ ಪ್ರಮುಖವಾಗಿ ಕನಕದಾಸರು ಹೇಳಿದ 'ಡಿಂಬದೊಳಗೆ ಇರುವ ಜೀವ ಕಂಬ ಸೂತ್ರ ಬೊಂಬೆಯಂತೆ ಎಂದಿಗಾದರೊಂದು ದಿನ ಸಾವು ತಪ್ಪದು, ಹುಟ್ಟುತ್ತೇನು ತಾರಲಿಲ್ಲ, ಸಾಯುತ್ತೇನು ಒಯ್ಯಲಿಲ್ಲ, ಸುಟ್ಟು ಸುಟ್ಟು ಸುಣ್ಣದ ಹರಳು ಆಯಿತೀ ದೇಹ' ಎಂಬ ಸಾಲುಗಳು ನೆನಪಾಗುತ್ತವೆ. ಬರಿ ಕೈಯಲ್ಲಿ ಬಂದ ಮಕ್ಕಳು ಕಷ್ಟಪಟ್ಟು ಊರು ಸುತ್ತಿ ಬೊಬ್ಬೆ ಹೊಡೆದು ಪಟ್ಟಿ ಎತ್ತಿ ಕಂಬ ಬೊಂಬೆ ಮಾಡಿಕೊಂಡು ಮತ್ತೆ ಅದನ್ನೇ ಸುಟ್ಟು ಬೂದಿ ಮಾಡಿ ಬಾಯಿ ಬಡಿದುಕೊಂಡು ಮನೆಗೆ ಹೋಗುವ ವೈಪರೀತ್ಯವು ಅಧ್ಯಾತ್ಮವನ್ನು ಜ್ಞಾಪಿಸುವಂತಿದೆ ಬಾಬಣ್ಣರ ಮಾತು.

**- ಹೆಚ್.ಬಿ.ಮಂಜುನಾಥ್**
ಹಿರಿಯ ಪತ್ರಕರ್ತರು, ದಾವಣಗೆರೆ.

# ಮಾಲಿನ್ಯದಲ್ಲಿ ಅಸ್ಸಾಂನ ಬರ್ನಿಹತ್ ವಿಶ್ವದಲ್ಲೇ ಪ್ರಥಮ : ದೆಹಲಿ ಅತ್ಯಂತ ಮಲಿನ ರಾಜಧಾನಿ

ನವದೆಹಲಿ, ಮಾ. 11 - ವಿಶ್ವದ 20 ಅತ್ಯಂತ ಮಲಿನ ನಗರಗಳಲ್ಲಿ 13 ಭಾರತದಲ್ಲಿವೆ. ಮೇಘಾಲಯದ ಬರ್ನಿಹತ್ ಈ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದೆ.

ವರ್ಲ್ಡ್ ಏರ್ ಕ್ವಾಲಿಟಿ ರಿಪೋರ್ಟ್-2024ರ ಪ್ರಕಾರ ನವದೆಹಲಿ ವಿಶ್ವದ ಅತ್ಯಂತ ಮಲಿನ ರಾಜಧಾನಿಯಾಗಿದೆ. ಸ್ವಿಡ್ಜರ್‌ಲ್ಯಾಂಡ್‌ನ ವಾಯು ಗುಣಮಟ್ಟ ತಂತ್ರಜ್ಞಾನ ಕಂಪನಿಯಾದ ಎಐಕ್ಯೂರ್ ಈ ವರದಿ ರೂಪಿಸಿದೆ. ಈ ವರದಿಯ ಪ್ರಕಾರ 2024ರಲ್ಲಿ ಭಾರತ ವಿಶ್ವದ ಐದನೇ ಅತ್ಯಂತ ಮಲಿನ ದೇಶವಾಗಿದೆ. 2023ರಲ್ಲಿ ಭಾರತ ಮೂರನೇ ಸ್ಥಾನದಲ್ಲಿತ್ತು.

ವಿಶ್ವದ ಮೊದಲ 20 ಮಲಿನ ನಗರಗಳ ಪೈಕಿ ಪಾಕಿಸ್ತಾನ ನಾಲ್ಕು ಹಾಗೂ ಚೀನಾ ಒಂದು ನಗರ ಹೊಂದಿದೆ.

2024ರಲ್ಲಿ ಭಾರತದಲ್ಲಿ ಪಿಎಂ 2.5 ಮಾಲಿನ್ಯ ಶೇಕಡ 7ರಷ್ಟು ಕಡಿಮೆಯಾಗಿದೆ. ಪಿಎಂ 2.5 ಸರಾಸರಿ ಪ್ರಮಾಣ ಪ್ರತಿ ಕ್ಯೂಬಿಕ್ ಮೀಟರ್‌ಗೆ 50.6 ಮೈಕ್ರೋಗ್ರಾಮ್ ಆಗಿದೆ. 2023 ರಲ್ಲಿ ಈ ಪ್ರಮಾಣ 54.4 ಮೈಕ್ರೋಗ್ರಾಮ್ ಆಗಿತ್ತು.

ದೆಹಲಿಯಲ್ಲಿ ವಾಯುಮಾಲಿನ್ಯ ತೀವ್ರವಾಗಿದೆ. 2023ರಲ್ಲಿ ಪಿಎಂ2.5 ಮಾಲಿನ್ಯ 102.4 ಮೈಕ್ರೋ ಗ್ರಾಂ ಮಾಲಿನ್ಯ ಇದ್ದರೆ, ಅದು 2024ರಲ್ಲಿ 108.3ಕ್ಕೆ ತಲುಪಿದೆ.

ಮುಲ್ಲನ್‌ಪುರ್, ಫರೀದಾಬಾದ್, ಲೋನಿ, ಗುರುಗ್ರಾಮ್, ಗಂಗಾನಗರ, ಗ್ರೇಟರ್ ನೋಯ್ಡಾ, ಭಿವಾಡಿ, ಮುಜಾಫರನಗರ, ಹನುಮಾನ್‌ಘರ್ ಹಾಗೂ ನೋಯ್ಡಾಗಳು ವಿಶ್ವದ 20 ಅತಿ ಹೆಚ್ಚಿನ ಮಾಲಿನ್ಯದ ನಗರಗಳ ಪಟ್ಟಿಯಲ್ಲಿವೆ.

ದೇಶದ ಶೇಕಡ 35 ರಷ್ಟು ನಗರಗಳಲ್ಲಿ



ಪಿಎಂ 2.5 ಮಾಲಿನ್ಯದ ಪ್ರಮಾಣ ವಿಶ್ವ ಆರೋಗ್ಯ ಸಂಘಟನೆಯ 5 ಮೈಕ್ರೋಗ್ರಾಮ್ ಮಿತಿಗಿಂತ 10 ಪಟ್ಟು ಹೆಚ್ಚಾಗಿದೆ.

ಅಸ್ಸಾಂ ಹಾಗೂ ಮೇಘಾಲಯ ಗಡಿಯಲ್ಲಿರುವ ಬರ್ನಿಹತ್ ವಿಶ್ವದಲ್ಲೇ ಅತ್ಯಂತ ಮಲಿನ ನಗರ ಎಂಬ ಕುಖ್ಯಾತಿ ಪಡೆದಿದೆ. ಸ್ಥಳೀಯ ಕಾರ್ಖಾನೆಗಳು, ಕಬ್ಬಿಣ ಹಾಗೂ ಉಕ್ಕಿನ ಘಟಕಗಳ ಕಾರಣದಿಂದ ಈ ಮಾಲಿನ್ಯ ಉಂಟಾಗಿದೆ. ದೆಹಲಿಯಲ್ಲಿ ವರ್ಷವಿಡೀ ವಾಯು ಮಾಲಿನ್ಯ ಕಂಡು ಬಂದಿದೆ. ಚಳಿಗಾಲದಲ್ಲಿ ಪರಿಸ್ಥಿತಿ ತೀವ್ರವಾಗಿ ಹದಗೆಡುತ್ತಿದೆ. ವಾಹನಗಳ ಮಾಲಿನ್ಯ, ಕೃಷಿ ತ್ಯಾಜ್ಯ ಸುಡುವುದು, ಪಟಾಕಿ ಹಾಗೂ ಇತರೆ ಸ್ಥಳೀಯ ಮೂಲಗಳ ಕಾರಣದಿಂದ ಮಾಲಿನ್ಯ ಹೆಚ್ಚಾಗುತ್ತಿದೆ.

ಭಾರತದಲ್ಲಿ ವಾಯುಮಾಲಿನ್ಯ ಆರೋಗ್ಯಕ್ಕೆ ತೀವ್ರ ಸಮಸ್ಯೆ ಆಗಿದೆ. ಇದರಿಂದಾಗಿ ಸರಾಸರಿ ಆಯುಷ್ಯ 5.2 ವರ್ಷ ಕಡಿಮೆಯಾಗುತ್ತಿದೆ ಎಂದು ವರದಿಗಳು ತಿಳಿಸಿವೆ.

ಕಳೆದ ವರ್ಷ ಲ್ಯಾನ್ಸೆಟ್ ಪ್ಲಾನೆಟರಿ ಹೆಲ್ತ್ ರೂಪಿಸಿರುವ ವರದಿಯ ಪ್ರಕಾರ 2009 ರಿಂದ 2019ರ ನಡುವೆ ಪ್ರತಿವರ್ಷ ಪಿಎಂ 2.5 ಮಾಲಿನ್ಯದ ಕಾರಣದಿಂದ 15 ಲಕ್ಷ ಸಾವುಗಳು ಸಂಭವಿಸುತ್ತಿವೆ.

2.5 ಮೈಕ್ರಾನ್‌ಗಿಂತ ಕಡಿಮೆ ಗಾತ್ರದ ವಾಯುಮಾಲಿನ್ಯ ಕಣಗಳನ್ನು ಪಿಎಂ 2.5 ಎಂದು ಕರೆಯಲಾಗುತ್ತದೆ. ಇಷ್ಟು ಸಣ್ಣ ಮಾಲಿನ್ಯ ಕಣಗಳು ಶ್ವಾಸಕೋಶ ಹಾಗೂ ರಕ್ತದಲ್ಲಿ ಸೇರಿಕೊಳ್ಳುತ್ತವೆ. ಇದರಿಂದಾಗಿ ಉಸಿರಾಟಕ್ಕೆ ಸಮಸ್ಯೆ ಆಗುತ್ತದೆ. ಅಲ್ಲದೆ ಹೃದಯ ರೋಗ ಹಾಗೂ ಕ್ಯಾನ್ಸರ್ ರೀತಿಯ ರೋಗಗಳು ಬರುತ್ತವೆ. ವಾಹನಗಳ ಹೊಗೆ, ಕೈಗಾರಿಕಾ ತ್ಯಾಜ್ಯ ಹಾಗೂ ಕೃಷಿ ತ್ಯಾಜ್ಯ ಸುಡುವುದು ಇತ್ಯಾದಿಗಳು ಪಿಎಂ 2.5 ಮಾಲಿನ್ಯಕ್ಕೆ ಕಾರಣವಾಗುತ್ತವೆ.

ವಾಯು ಮಾಲಿನ್ಯ ಮಾಹಿತಿ ಸಂಗ್ರಹದಲ್ಲಿ ಭಾರತ ಪ್ರಮುಖ ಹೆಜ್ಜೆ ಇಟ್ಟಿದೆ. ಆದರೆ ಮಾಲಿನ್ಯ ತಡೆಯುವ ದೆಸೆಯಲ್ಲಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆಯ ಮಾಜಿ ಮುಖ್ಯ ವಿಜ್ಞಾನಿ ಹಾಗೂ ಆರೋಗ್ಯ ಸಚಿವಾಲಯದ ಸಲಹೆಗಾರರಾದ ಸೌಮ್ಯ ಸ್ವಾಮಿನಾಥನ್ ಹೇಳಿದ್ದಾರೆ.

ನಮ್ಮ ಬಳಿ ಮಾಹಿತಿ ಇದೆ, ನಾವೀಗ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಕಟ್ಟಿಗೆಯ ಬದಲು ಅಡುಗೆ ಅನಿಲ ಬಳಸುವಂತೆ ಮಾಡುವುದು ಸುಲಭ ಪರಿಹಾರಗಳಲ್ಲಿ ಒಂದಾಗಿದೆ. ಭಾರತ ಈ ದಿಸೆಯಲ್ಲಿ ಯೋಜನೆಯನ್ನು ರೂಪಿಸಿದೆ. ಆದರೆ ಹೆಚ್ಚುವರಿ ಸಿಲಿಂಡರ್‌ಗಳಿಗೆ ಸಬ್ಸಿಡಿ ನೀಡಬೇಕಿದೆ ಎಂದವರು ತಿಳಿಸಿದ್ದಾರೆ.

ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಹೆಚ್ಚಿಸಬೇಕಿದೆ ಹಾಗೂ ಕೆಲ ರೀತಿಯ ಕಾರುಗಳ ಮೇಲೆ ದಂಡ ವಿಧಿಸುವುದರಿಂದ ಪರಿಸ್ಥಿತಿ ಸುಧಾರಿಸುತ್ತದೆ. ಉತ್ತೇಜನ ಹಾಗೂ ದಂಡ ಎರಡೂ ಕ್ರಮಗಳ ಸಮತೋಲನದ ಅಗತ್ಯವಿದೆ ಎಂದು ಸ್ವಾಮಿನಾಥನ್ ಹೇಳಿದ್ದಾರೆ.

## ಮಕ್ಕಳ ಆಸಕ್ತಿಗೆ ಪಾಲಕರು ಸಹಕಾರ ನೀಡಬೇಕು



ದಾವಣಗೆರೆ, ಮಾ.11- ಮಕ್ಕಳ ಆಲೋಚನೆ ಹಾಗೂ ಅವರ ಆಸಕ್ತಿಯನ್ನು ಪಾಲಕರು ಗುರುತಿಸಿ, ಸಹಕಾರ ನೀಡಬೇಕು. ಆಗ ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪುಷ್ಪಲತಾ ಹೇಳಿದರು.

ನಗರದ ಸಂತ ಪೌಲರ ನರ್ಸರಿ ಶಾಲೆಯಲ್ಲಿ ಯುಕೆಜಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಗ್ರಾಜುಯೇಷನ್ ಡೇ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಮಾನಗಳಲ್ಲಿ ಪಾಲಕರು ತಮ್ಮ ಕೆಲಸಗಳಲ್ಲಿ ನಿರತರಾಗುತ್ತಿದ್ದ ರಿಂದ ಮಕ್ಕಳಿಗೆ ಸಮಯವನ್ನೇ ನೀಡುತ್ತಿಲ್ಲ. ಇದರಿಂದಾಗಿ ಮಕ್ಕಳಲ್ಲಿ ತಂದೆ-ತಾಯಿಯರ ಮಹತ್ವ ಹಾಗೂ ಕುಟುಂಬದ ಒಡನಾಟ ತಪ್ಪುತ್ತಿದೆ. ಹಾಗಾಗಿ ಮಕ್ಕಳೊಂದಿಗೆ ಸಮಯ ಮೀಸಲಿಡಬೇಕೆಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂತ ಪೌಲರ ಸಂಸ್ಥೆಯ ಸ್ಥಳೀಯ ವ್ಯವಸ್ಥಾಪಕರಾದ ಮಾರ್ಜರಿ, ನರ್ಸರಿ ಶಾಲೆಯ ಮುಖ್ಯಶಿಕ್ಷಕಿ ಮೆಟ್ಟಿಲ್ಡ, ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಸುಪ್ರಿಯಾ, ಸಂಸ್ಥೆಯ ಸಿಬ್ಬಂದಿ ಇದ್ದರು.

## 5, 8ನೇ ತರಗತಿಗೆ ಪ್ರವೇಶ ಪರೀಕ್ಷೆ

ದಾವಣಗೆರೆ, ಮಾ.11- ಬೆಂಗಳೂರಿನ ಚೆನ್ನನಹಳ್ಳಿಯ ಜನಸೇವಾ ವಿದ್ಯಾಕೇಂದ್ರ ಶಾಲೆಯಲ್ಲಿ ಪ್ರಸಕ್ತ ಸಾಲಿನ 5 ಮತ್ತು 8ನೇ ತರಗತಿಯ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರವೇಶಕ್ಕೆ ಏಪ್ರಿಲ್ 6ರಂದು ಪರೀಕ್ಷೆ ನಡೆಸಲಾಗುವುದು.

ಮಾಹಿತಿಗಾಗಿ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ, ಚನ್ನಗಿರಿ, ಜಗಳೂರು ಮತ್ತು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹರಿಹರ, ಹೊನ್ನಾಳಿ, ಕಚೇರಿಗಳನ್ನು ಸಂಪರ್ಕಿಸಲು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

## ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಮಹಿಳಾ ದಿನಾಚರಣೆ

ದಾವಣಗೆರೆ, ಮಾ. 11 - ನಗರದ ಬ್ರಾಹ್ಮಣ ಸಮಾಜ ಮಹಿಳಾ ವಿಭಾಗದಿಂದ ಮಹಿಳಾ ದಿನಾಚರಣೆ ಮತ್ತು ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಬ್ರಾಹ್ಮಣ ಸಮಾಜದ ಮಹಿಳೆಯರಿಗಾಗಿ ಏರ್ಪಡಿಸಲಾಗಿದೆ ಎಂದು ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ನಳಿನಿ ಅಚ್ಯುತ್ ತಿಳಿಸಿದ್ದಾರೆ.

ನಾಡಿದ್ದು ದಿನಾಂಕ 13ರ ಗುರುವಾರ ಸಂಜೆ 4 ಗಂಟೆಗೆ ಬ್ರಾಹ್ಮಣ ಸಮಾಜ ವಿದ್ಯಾರ್ಥಿ ನಿಲಯ (ನಾಟ್ಯಾಚಾರ್ಯ ಕುಲಕರ್ಣಿ ರಸ್ತೆ) ದಲ್ಲಿ ಈ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯು ದಾವಣಗೆರೆ ತಾಲ್ಲೂಕಿನವರಿಗೆ ಮಾತ್ರ. ಸ್ಪರ್ಧೆಯಲ್ಲಿ ರಸಪ್ರಶ್ನೆ, ಅಂತ್ಯಾಕ್ಷರಿ ಅಲ್ಲದೆ ಇನ್ನೂ ಅನೇಕ ಸ್ಪರ್ಧೆಗಳು ಇರುತ್ತವೆ. ವಿವರಕ್ಕೆ (9964027146) ಶ್ರೀಮತಿ ಚಂದ್ರಶೇಖರ ಅಡಿಗ, (9886058866) ಅವರನ್ನು ಸಂಪರ್ಕಿಸಬಹುದು.

# ಎಸ್.ಎಂ. ಕೃಷ್ಣ ನಗರದ ತೆರವು ಕಾರ್ಯ ನಿಲ್ಲಿಸುವಂತೆ ನಿವಾಸಿಗಳ ಮನವಿ



ದಾವಣಗೆರೆ, ಮಾ.11- ಎಸ್.ಎಂ. ಕೃಷ್ಣ ನಗರದಲ್ಲಿನ ಮನೆಗಳನ್ನು ತೆರವು ಮಾಡಲು ಸೂಚಿಸಿದ ಹೈಕೋರ್ಟ್ ಆದೇಶವನ್ನು ವಿರೋಧಿಸಿ, ತೆರವು ಕಾರ್ಯ ತಡೆಹಿಡಿಯುವಂತೆ ಒತ್ತಾಯಿಸಿ ಅಲ್ಲಿನ ನಿವಾಸಿಗಳು ಜಿಲ್ಲಾಧಿಕಾರಿ ಹಾಗೂ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿದ ಎಸ್.ಎಂ. ಕೃಷ್ಣ ನಗರ ನಿವಾಸಿಗಳು, 2002ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಕೆ. ಶಿವರಾಂ ಅವರು ಎಸ್.ಎಂ. ಕೃಷ್ಣ ನಗರದ ಸರ್ವೆ ನಂ. 145/1ಪಿಗೆ ಸೇರಿದ 3 ಎಕರೆ ಜಾಗವನ್ನು ನಿರಾಶ್ರಿತರಿಗೆ ಸರ್ಕಾರದಿಂದ ಆಶ್ರಯ ಮನೆಗಳನ್ನು ನಿರ್ಮಾಣ ಮಾಡಿ ಕೊಟ್ಟಿರುತ್ತಾರೆ.

ಆ ಜಾಗದಲ್ಲಿ ಮನೆ ಮಾಡಿಕೊಟ್ಟ ನಂತರ 2002ರಿಂದ 2025ರ ವರೆಗೂ 23 ವರ್ಷಗಳಿಂದ ಕಂದಾಯವನ್ನು ಪಾಲಿಕೆಗೆ ಕಟ್ಟುತ್ತಾ ಬಂದಿದ್ದೇವೆ. ಆದರೀಗ ಪತ್ರಿಕೆಗಳಲ್ಲಿ ಈ ಜಾಗದಲ್ಲಿನ ಮನೆಗಳನ್ನು ತೆರವುಗೊಳಿಸುವಂತೆ ಹೈಕೋರ್ಟ್ ಆದೇಶ ನೀಡಿರುವುದು ಇಲ್ಲಿನ ನಿವಾಸಿಗಳಿಗೆ ಆತಂಕ ತಂದಿದೆ.

ಈ ಭಾಗದಲ್ಲಿ ಹೆಚ್ಚಾಗಿ ಕಡು ಬಡವರು, ವಿಕಲ ಚೇತನರು ಹಾಗೂ ಕೂಲಿ ಕಾರ್ಮಿಕರು ಜೀವನ ನಡೆಸುತ್ತಿದ್ದಾರೆ. ಆದರೆ ಯಾವಾಗ ಏನಾಗುತ್ತದೆಯೋ ಎಂಬ ಭಯ ನಾಗರಿಕರಲ್ಲಿ ಕಾಡುತ್ತಿದೆ. ತೆರವು ಕಾರ್ಯ ತಡೆಯಬೇಕೆಂದು ಮನವಿ ಮಾಡಿದ್ದಾರೆ.

ಈ ವೇಳೆ ಅಲ್ಲಿನ ನಿವಾಸಿಗಳಾದ ಮಲ್ಲಿಕಾರ್ಜುನಪ್ಪ, ಚನ್ನಕೇಶವ, ಬಿ.ಎಂ.ಜಿ. ವೀರೇಶ್, ಕುಮಾರ್, ಮಹೇಶ್, ಸಾಹೇಬ್‌ಗೌಡ್ರು, ದಾನಾಚಾರಿ, ಅಣ್ಣಪ್ಪ, ಗೌರಮ್ಮ, ಗೀತಾ, ರೂಪಾ ಇತರರು ಇದ್ದರು.

### ಉಪಕಾರ...

ವ್ಯಕ್ತಿತ್ವ ಉಳಿವುದು ಉಪಕಾರದಲ್ಲಿ
ವ್ಯಕ್ತಿತ್ವ ಅಳಿವುದದು ಅಪಕಾರದಲ್ಲಿ
ಬದುಕಲ್ಲಿ ಬಾಳದು ಗೋಳಾಗದಿರಲಿ
ಕರ್ತವ್ಯದಲ್ಲಿ ಅದು ಬೆಳಕಿನಲ್ಲಿರಲಿ...

**- ವೀಣಾ ಕೃಷ್ಣಮೂರ್ತಿ, ದಾವಣಗೆರೆ.**

# ಪ್ರವರ್ಗ-1 ರ ಜಾತಿಗಳ ಸರ್ವತೋಮುಖ ಅಭಿವೃದ್ಧಿಗೆ ಒತ್ತಾಯ

ದಾವಣಗೆರೆ, ಮಾ. 11- ಪ್ರವರ್ಗ-1 ರ ಜಾತಿಗಳಿಗೆ ಸೇರಿದ 96 ಜಾತಿಗಳ 46 ಅಲೆಮಾರಿ, ಅರೆ ಅಲೆಮಾರಿ ಜಾತಿಗಳು ಮತ್ತು 376 ಒಳಪಂಗಡಗಳ ಸಮಾಜದ ಜನರ ಸರ್ವತೋಮುಖ ಅಭಿವೃದ್ಧಿಗೆ ಮುಂದಾಗುವಂತೆ ಕರ್ನಾಟಕ ರಾಜ್ಯ ಪ್ರವರ್ಗ-1 ರ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಗುತ್ತೂರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವರ್ಗ-1 ರ ಜಾತಿಗಳು ತೀರ ಹಿಂದುಳಿದ್ದು, ಕಡು ಬಡತನದ ಜನರೇ ಹೆಚ್ಚಾಗಿರುವ ಪ್ರವರ್ಗ-1 ರ ಜಾತಿಗಳ ವಿದ್ಯಾರ್ಥಿಗಳಿಗೆ ಶಾಲಾ-ಕಾಲೇಜು ದಾಖಲಾತಿ ಸಂದರ್ಭದಲ್ಲಿ ಸೂಕ್ತ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಶಿಕ್ಷಣ ಸಂಸ್ಥೆಗೆ ಸಲ್ಲಿಸಿದರೆ ಅವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡುವಂತೆ ಸಂಪೂರ್ಣ ಶೈಕ್ಷಣಿಕ ಶುಲ್ಕ ವಿನಾಯತಿ ನೀಡಬೇಕು. ಪ್ರವರ್ಗ-1 ರ ಜಾತಿಗಳ ವಿದ್ಯಾರ್ಥಿ ವೇತನ ಶುಲ್ಕ ಮರುಪಾವತಿ, ವಿದ್ಯಾಸಿರಿ ಹಾಗೂ ಇನ್ನಿತರೆ ಸೌಲಭ್ಯಗಳು ಶೀಘ್ರವೇ ತಲುಪುವಂತೆ ಕ್ರಮಕೈಗೊಳ್ಳುವಂತೆ ಆಗ್ರಹಿಸಿದರು.

ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನ ಪೂರ್ಣಗೊಂಡಿರುವ ಉಪ್ಪಾರ, ಜೋಗಿ, ಕಾಟಿಕ್ ಮತ್ತಿತರೆ ಜಾತಿಗಳ ವರದಿಯನ್ನು ಸರ್ಕಾರ ಒಪ್ಪಿಕೊಂಡು ಕೇಂದ್ರ ಸರ್ಕಾರಕ್ಕೆ ಶೀಘ್ರವಾಗಿ ಶಿಫಾರಸ್ಸು ಮಾಡಲು ಕ್ರಮ ಕೈಗೊಳ್ಳುವುದು. ಪ್ರವರ್ಗ-1 ರ ಜಾತಿಗಳಲ್ಲಿ ಕುಲಶಾಸ್ತ್ರೀಯ ಅಧ್ಯಯನ ಆಗದೇ ಇರುವ ಜಾತಿಗಳ ಅಧ್ಯಯನಕ್ಕಾಗಿ 10 ಕೋಟಿ ರೂ.ಗಳ ಅನುದಾನ ಬಿಡುಗಡೆಗೆ ಡಿ.ದೇವರಾಜ ಅರಸ್ ಸಂಶೋಧನಾ ಕೇಂದ್ರಕ್ಕೆ ಹಾಗೂ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದರು.

ಪ್ರವರ್ಗ-1 ರ ಜಾತಿಗಳ ಸಂಘ-ಸಂಸ್ಥೆಗಳಿಗೆ ತಮ್ಮದೇ ಆದ ವಿದ್ಯಾರ್ಥಿ ನಿಲಯ ಹಾಗೂ ಸಮುದಾಯ ಭವನ ನಿರ್ಮಿಸಿಕೊಳ್ಳಲು ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅರ್ಧ ಎಕರೆಗೂ ಹೆಚ್ಚು ಜಾಗ ನೀಡುವುದಲ್ಲದೇ, ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡುವುದು. ಈಗಾಗಲೇ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಹಣ ಬಿಡುಗಡೆ ಮಾಡಬೇಕೆಂದರು.

ರಾಜ್ಯದಲ್ಲಿ 90 ಲಕ್ಷಕ್ಕೂ ಅಧಿಕ ಜನರಿದ್ದು, ಸಂಖ್ಯೆಗೆ ಅನುಗುಣವಾಗಿ ಹಾಲಿ ಇರುವ ಶೇ. 4 ರ ಮೀಸಲಾತಿ ಮಿತಿಯನ್ನು ಹಿಂದುಳಿದ ವರ್ಗಗಳ ಆಯೋಗದ ಮೂಲಕ ಶೇ.8 ಕ್ಕೆ ಏರಿಸಲು ಶಿಫಾರಸ್ಸು ಮಾಡಿಸಿ ಶೀಘ್ರವೇ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಟಿ. ಶ್ರೀನಿವಾಸ್, ಎಸ್.ಎಂ. ಸುರೇಶ್, ಕೆ.ಹೆಚ್. ಹನುಮಂತರಾಜ, ಎಂ.ಸಿ. ರಮೇಶ್, ಭೋಜರಾಜ್, ಡಿ.ಏಕಾಂತಪ್ಪ ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ 16 ರಂದು ರಥೋತ್ಸವ

ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದಲ್ಲಿ ಇಂದಿನಿಂದ ಇದೇ ದಿನಾಂಕ 16 ರವರೆಗೆ ಶ್ರೀ ಹನುಮಂತ ದೇವರ ರಥೋತ್ಸವದ ನಿಮಿತ್ಯ ಇಂದು ರಾತ್ರಿ 9.30 ಕ್ಕೆ ಗಿಣಿ ಉತ್ಸವ, ನಾಳೆ ಗುರುವಾರ ರಾತ್ರಿ 9.30 ಕ್ಕೆ ಚಿಗರಿ ಉತ್ಸವ, 14 ರಂದು ರಾತ್ರಿ 9.30 ಕ್ಕೆ ಕುದುರೆ ಉತ್ಸವ, ರಾತ್ರಿ 12 ಕ್ಕೆ ರಥೋತ್ಸವದ ಕಳಸ ಸ್ಥಾಪನೆ, 15 ರಂದು ಬೆಳಿಗ್ಗೆ 8.30 ಕ್ಕೆ ಆನೆ ಉತ್ಸವ ಜರುಗಲಿದೆ.

## ಎಸ್‌ಓಜಿ ಕಾಲೋನಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ತಟ್ಟೆ ವಿತರಣೆ



ದಾವಣಗೆರೆ, ಮಾ. 11- ನಗರದ ದಕ್ಷಿಣ ವಲಯದ ಎಸ್‌ಓಜಿ ಕಾಲೋನಿಯಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಶಾರದಾ ಪೂಜೆ ನಡೆಯಿತು.

ಈ ಸಂದರ್ಭದಲ್ಲಿ ಪಾಲಿಕೆ 31ನೇ ವಾರ್ಡ್‌ನ ಪಾಮೇನಹಳ್ಳಿ ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳಿಗೆ ಮುಂಬರುವ ಪರೀಕ್ಷೆಗಳಲ್ಲಿ ಉತ್ತಮವಾಗಿ ಬರೆಯಲು ಶುಭ ಹಾರೈಸಿದರು.

ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ಎಸ್.ಎಂ. ಬಡಾವಣೆ ಈ ಎರಡೂ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ಅನುಕೂಲಕ್ಕಾಗಿ 310 ತಟ್ಟೆಗಳನ್ನು ವಿತರಿಸಿದ ನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ, ಶ್ರೀಮತಿ ಗೀತಾ ಮಾರುತಿ, ಎಸ್‌ಎಂ ಬಡಾವಣೆ ಸಹಿಪ್ರಾ ಶಾಲೆ ಎಸ್‌ಡಿಎಂಸಿ ಸದಸ್ಯ ಎಸ್. ನಾಗರಾಜ್ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಹದಡಿ ವೆಂಕಟೇಶಪ್ಪ, ಡಿ.ಜಿ. ಶಿವಕುಮಾರ್, ರೇವಣಸಿದ್ದಪ್ಪ, ಮುನಿಯಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ಉನ್ನತ ವೇಗದ ಇಂಟರ್‌ನೆಟ್ ಸೇವೆಗೆ ಸ್ಪೇಸ್‌ಎಕ್ಸ್ ಜೊತೆ ಏರ್‌ಟೆಲ್ ಸಹಭಾಗಿ

ನವದೆಹಲಿ, ಮಾ. 11 - ಭಾರತದಲ್ಲಿ ಉನ್ನತ ವೇಗದ ಇಂಟರ್‌ನೆಟ್ ಸೇವೆ ಒದಗಿಸುವ ಸಲುವಾಗಿ ಅಮೆರಿಕದ ಉದ್ಯಮಿ ಎಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್ ಜೊತೆ ಕೈ ಜೋಡಿಸುವುದಾಗಿ ಟೆಲಿಕಾಂ ಉದ್ಯಮ ಭಾರತಿ ಏರ್‌ಟೆಲ್ ತಿಳಿಸಿದೆ.

ಸ್ಪೇಸ್‌ಎಕ್ಸ್‌ನ ಸ್ಟಾರ್‌ಲಿಂಕ್ ಉಪಗ್ರಹ ಸೇವೆಯನ್ನು ಭಾರತದಲ್ಲಿ ಒದಗಿಸುವ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಏರ್‌ಟೆಲ್ ತಿಳಿಸಿದೆ. ಸ್ಟಾರ್‌ಲಿಂಕ್ ಉಪಗ್ರಹ ಅಂತರ್ಜಾಲ ಸೇವೆಯನ್ನು ಏರ್‌ಟೆಲ್ ಮೂಲಕ ಒದಗಿಸುವ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ. ಗ್ರಾಹಕರು ಹಾಗೂ ಉದ್ಯಮಗಳಿಗೆ ಈ ಸೇವೆ ಒದಗಿಸಲು ಉದ್ದೇಶಿಸಲಾಗಿದೆ ಎಂದು ಏರ್‌ಟೆಲ್ ಹೇಳಿದೆ.


**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ನವಿಲೇಹಾಳ್ ಗ್ರಾಮ ಪಂಚಾಯಿತಿ ಕಾರ್ಯಾಲಯ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ**

ಕ್ರ. ಸಂಖ್ಯೆ : ಗ್ರಾಪಂ.ಚಿ/ಇಟೆಂಡರ್/2024-25 ದಿನಾಂಕ :- 04.03.2025

**'ಇ-ಪ್ರಕ್ಯೂರ್ ಮೆಂಟ್' ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಈ ಕಛೇರಿಯಿಂದ 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ನವಿಲೇಹಾಳ್, ಚನ್ನಗಿರಿ ತಾಲ್ಲೂಕು ದಾವಣಗೆರೆ ಜಿಲ್ಲೆ ಇವರು ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರ / ಸಾಮಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Document for E-procurement for Goods ನಮೂನೆಯಲ್ಲಿ (K/H-2) ಆಹ್ವಾನಿಸಲಾಗಿದೆ.

| ಕ್ರ.ಸಂ. | ಕಾಮಗಾರಿ ಹೆಸರು | ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ನವಿಲೇಹಾಳ್ ಗ್ರಾಮದ ಮೂರು ವಾರ್ಡ್‌ಗಳಿಗೆ ಬೀದಿದೀಪ ನಿರ್ವಹಣೆ RDPR/2024-25/SE2105 | 449282-00 |
| 2 | ನವಿಲೇಹಾಳ್ ಗ್ರಾಮ ಪಂಚಾಯಿತಿಯ ಬೀದಿ ದೀಪಗಳ ಸಾಮಗ್ರಿ ಖರೀದಿ ಹಾಗೂ ನಿರ್ವಹಣೆ RDPR/2024-25SE2107 | 449487-00 |
| 3 | ನವಿಲೇಹಾಳ್ ಗ್ರಾಮದ ಕುಡಿಯುವ ನೀರಿನ ಮೋಟಾರ್ ಬಿಡಿಭಾಗಗಳ ಸಾಮಗ್ರಿ ಖರೀದಿ RDPR/2024-25IND7029 | 400000-00 |
| 4 | ನವಿಲೇಹಾಳ್ ಗ್ರಾಮದ ಕುಡಿಯುವ ನೀರಿನ ಮೋಟಾರ್ ದುರಸ್ತಿ ಹಾಗೂ ನಿರ್ವಹಣೆ RDPR/2024-25IND7027 | 243852-00 |

**ಇ-ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ - 2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ & ಸಮಯ | ದಿನಾಂಕ : 10-03-2025 ರಿಂದ 15.03.2025ರವರೆಗೆ |
| 2 | ಇ-ಪೋರ್ಟಲ್‌ನಲ್ಲಿ ಟೆಂಡರನ್ನು ಇಂಡೀಕರಿಸಲು ಕೊನೆಯ ದಿನಾಂಕ | ದಿನಾಂಕ : 17-03-2025 ಸಂಜೆ 5.30 ಗಂಟೆಯವರೆಗೆ |
| 3 | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ / ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 18-03-2025 ಬೆಳಿಗ್ಗೆ 11 ಗಂಟೆಗೆ |
| 4 | ಈ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿವರ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ, ನವಿಲೇಹಾಳ್. |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ನೋಡಿಕೊಳ್ಳುವುದು. ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/- ಅಧ್ಯಕ್ಷರು, ಗ್ರಾಮ ಪಂಚಾಯಿತಿ. ನವಿಲೇಹಾಳ್.
ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ನವಿಲೇಹಾಳ್



ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
**ಗ್ರಾಮ ಪಂಚಾಯಿತಿ ಕಾರ್ಯಾಲಯ, ಬುಳಸಾಗರ.**
ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

ನಂ:ಗ್ರಾಪಂ/ಬುಳಸಾ/2024-25/ ದಿನಾಂಕ:10.03.2025

**ಟೆಂಡರ್ ಪ್ರಕಟಣೆ**

ವಿಷಯ:- **2024-25ನೇ ಸಾಲಿನ ಬುಳಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 15 ನೇ ಹಣಕಾಸುಯೋಜನೆಯಡಿ ವಿವಿಧ ಕಾಮಗಾರಿ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆದಿರುವ ಬಗ್ಗೆ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಅಡಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ಕರೆಯಲಾಗಿದೆ

| ಟೆಂಡರ್ ಸಂಖ್ಯೆ | ಟೆಂಡರ್ ಹೆಸರು | ಮೀಸಲಾತಿ |
|---|---|---|
| RDPR/2024-25/OW/ WORK_INDENT13482 | ಹಟ್ಟಿ ಗ್ರಾಮದ ಪಿಡಬ್ಲ್ಯೂಡಿ ರಸ್ತೆಯಿಂದ ಗುಲಾಬ್ ಜಾನ್ ಮನೆಯವರೆಗೆ ಚರಂಡಿ ನಿರ್ಮಾಣ | ಸಾಮಾನ್ಯ |
| RDPR/2024-25/OW/ WORK_INDENT13499 | ಹಟ್ಟಿ ಗ್ರಾಮದ ಪಿಡಬ್ಲ್ಯೂಡಿ ರಸ್ತೆಯಿಂದ ಶಾಹೀನ ಬಾನು ಮನೆಯವರೆಗೆ ಸಿಸಿ ರಸ್ತೆ ಮತ್ತು ಡೆಕ್ ನಿರ್ಮಾಣ | ಪ್ರವರ್ಗ-1 |
| RDPR/2024-25/OW/ WORK_INDENT13502 | ಹಟ್ಟಿ ಗ್ರಾಮದ ರಶೀದ ಬಾನು ಮನೆಯಿಂದ ಆರೀಫ್ ಮನೆವರೆಗೆ ಚರಂಡಿ ನಿರ್ಮಾಣ | ಎಸ್.ಸಿ |
| RDPR/2024-25/OW/ WORK_INDENT13496 | ಹಟ್ಟಿ ಗ್ರಾಮದ ಶುದ್ದ ಕುಡಿಯುವ ನೀರಿನ ಘಟಕ ಮುಂಭಾಗ ಕಾಂಕ್ರೀಟ್‌ಹಾಕುವುದು. | ಸಾಮಾನ್ಯ |

ಈ ಸಂಬಂಧ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ- ಟೆಂಡರ್‌ಗಾಗಿ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ e-procurement portal ಪದ್ಧತಿಯಂತೆ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಭರ್ತಿ ಮಾಡಲು ಕೊನೆಯ ದಿನಾಂಕ ಹಾಗೂ ಹೆಚ್ಚಿನ ಮಾಹಿತಿಗೆ http:/kppp.karnataka.gov.in ಪೋರ್ಟಲ್ ಅಥವಾ ಕಚೇರಿ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬುಳಸಾಗರ ಇವರನ್ನು ಸಂಪರ್ಕಿಸಿ.

ವಾಸಾಇ/ದಾವಣಗೆರೆ/828/ ಕೆಎಸ್‌ಎಂಸಿಎ/2024-25
**ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ಬುಳಸಾಗರ.**



**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರಸೊತ್ತನ್ನು ನನ್ನ ಕಕ್ಷಿಗಾರರು ಶ್ರೀ ಕೆ.ಜಿ. ಸುರೇಶ್ ಬಿನ್ ಲೇಟ್ ಕೆ.ಜಿ. ಬಸವನಗೌಡ, ಡೋರ್ : 3367/8, ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ಹಳೇ ಆರ್‌ಟಿಓ ರಸ್ತೆ, 13ನೇ ಮೇನ್, 5ನೇ ಕ್ರಾಸ್, ದಾವಣಗೆರೆ ಇವರಿಂದ ಖರೀದಿಸಲು ಇಚ್ಛಿಸಿದ್ದು ಈ ಬಗ್ಗೆ ಯಾರದಾದರೂ ಯಾವುದೇ ರೀತಿಯ ತಂಟೆ,ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆ ವಗ್ಯೆರೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳಒಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಸದರಿ 15 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆ ವಗ್ಯೆರೆಗಳನ್ನು ಯಾವುದೇ ರೀತಿಯಿಂದಲೂ ಪರಿಗಣಿಸಲಾಗುವುದಿಲ್ಲ. ಮತ್ತು ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ, ಆಕ್ಷೇಪಣೆ ವಗ್ಯೆರೆಗಳು ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಕೆ.ಜಿ. ಸುರೇಶ್ ಬಿನ್ : ಲೇಟ್ ಕೆ.ಜಿ. ಬಸವನಗೌಡ, ವಗ್ಯೆರೆ ಇವರಿಂದ ಪಡೆದುಕೊಳ್ಳುವ ನೋಂದಾಯಿತ ಕ್ರಯಪತ್ರವನ್ನು ಎಷ್ಟು ಮಾತ್ರಕ್ಕೂ ಪ್ರತಿಬಂಧಿಸುವುದಿಲ್ಲ.

**ಷೆಡ್ಯೂಲ್** : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರೀ ಸರ್ವೆ ನಂ. 215/7 ವಿಸ್ತೀರ್ಣ 01 ಎಕರೆ, 13 ಗುಂಟೆವುಳ್ಳ ಜಮೀನು ದಾವಣಗೆರೆ ಜಿಲ್ಲಾಧಿಕಾರಿಗಳವರಿಂದ ಅರ್ಜಿ ಸಂಖ್ಯೆ 2790 ದಿನಾಂಕ : 11.06.2019ರ ಪ್ರಕಾರ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಭೂ ಪರಿವರ್ತನೆಯಾದ ಪ್ರದೇಶದಲ್ಲಿ ಸೈಟುಗಳ್ನಾಗಿ ವಿಂಗಡಿಸಿ ಈ ಬಗ್ಗೆ ತಯಾರು ಮಾಡಿರುವ ಪ್ಲಾನನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಂ. ದಾಹನಪ್ರಾ/ಯೋವಿ/ಅಂವವಿ/618/2021-22/903 ದಿನಾಂಕ : 24/25/-08-2021ರ ಪ್ರಕಾರ ಅಂತಿಮ ವಸತಿ ವಿನ್ಯಾಸ ಅನುಮೋದನಾ ಪತ್ರ ಪಡೆದು, ನಂತರ ಸದರಿ ಪ್ಲಾನ್‌ನಲ್ಲಿ ಕಂಡ ನಿವೇಶನಗಳಿಗೆ ದಾವಣಗೆರೆ ಮಹಾನಗರ ಪಾಲಿಕೆಯವರು ನೀಡಿರುವ ಹಿಂಬರದ ನಂ. ದಾಮಪಾ/ಕಂಶಾ/ಭೂ-ಪರಿ/ಸಿಆರ್-25/2021-22 ದಿನಾಂಕ : 18.11.2021ರ ಪ್ರಕಾರ ಡೋರ್ ನಂಬರ್ ಹಾಗೂ ಖಾತೆ ಸಹ ದಾಖಲು ಮಾಡಿಸಿರುವ ಸೈಟುಗಳ ಪೈಕಿ ಪ್ಲಾನ್‌ನಲ್ಲಿ ಕಂಡ ನಮ್ಮಬಾಬ್ತು ರೀ ಸರ್ವೆ ನಂ. 215/7 ರಲ್ಲಿನ ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ, ಶಿವ ಪಾರ್ವತಿ ಬಡಾವಣೆಯಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್ ನಂ. 4 (ನಾಲ್ಕು) ಮಹಾನಗರ ಪಾಲಿಕೆ ಡೋರ್ ನಂ. 3411/4, ಮಹಾನಗರ ಪಾಲಿಕೆಯ ಗಣಕೀಕೃತ ಖಾತೆ ದಾಖಲೆಗಳಲ್ಲಿ ಕಂಡಂತೆ ದಾಖಲೆ ಸಂಖ್ಯೆ 2775525, ಸ್ವತ್ತಿನ ಸಂಖ್ಯೆ 2207749409, ವಾರ್ಡ್ ನಂ. 35, ಸ್ವತ್ತಿನ ಹಳೇ ಸಂಖ್ಯೆ : 3411/4, ನಿರ್ಧಾರಣಾ ಸಂಖ್ಯೆ, 3411/4, ಅಳತೆ : ಪೂರ್ವ-ಪಶ್ಚಿಮ 9.00 + 11.15/2 ಮೀಟರ್ , ಉತ್ತರ-ದಕ್ಷಿಣ : 10.10 ಮೀಟರ್ (9.00 +11.15/2 x 10.10 ಮೀಟರ್)=101.7575 ಚದರ ಮೀಟರ್‌ವುಳ್ಳ ವಸತಿ ಖಾಲಿ ನಿವೇಶನಕ್ಕೆ **ಚಕ್ಕುಬಂದಿ :**

**ಪೂರ್ವ** : ರೀ. ಸ.ನಂ.214ರ ಅನುಮೋದಿತ ವಿನ್ಯಾಸ, **ಪಶ್ಚಿಮ** : 18.00 ಮೀಟರ್ ಅಗಲದ ರಸ್ತೆ, **ಉತ್ತರ** : 3.00 ಮೀಟರ್ ಕಾಲು ದಾರಿ, **ದಕ್ಷಿಣಕ್ಕೆ** : ಸೈಟ್ ನಂ.5 ಮತ್ತು

ಸೈಟ್ ನಂ. 5 (ಐದು) ಮಹಾನಗರ ಪಾಲಿಕೆ ಡೋರ್ ನಂ. 3411/5, ಮಹಾನಗರ ಪಾಲಿಕೆಯ ಗಣಕೀಕೃತ ಖಾತೆ ದಾಖಲೆಗಳಲ್ಲಿ ಕಂಡಂತೆ ದಾಖಲೆ ಸಂಖ್ಯೆ 2775530, ಸ್ವತ್ತಿನ ಸಂಖ್ಯೆ : 5119546487, ವಾರ್ಡ್ ನಂ. 35, ಸ್ವತ್ತಿನ ಹಳೇ ಸಂಖ್ಯೆ : 3411/5, ನಿರ್ಧಾರಣಾ ಸಂಖ್ಯೆ 3411/5, ಅಳತೆ : ಪೂರ್ವ-ಪಶ್ಚಿಮ 11.15 +13.30/2 ಮೀಟರ್, ಉತ್ತರ-ದಕ್ಷಿಣ : 9.14 ಮೀಟರ್ (11.15+13. 30/2 x 9.14 ಮೀಟರ್) =111.7365 ಚದರ ಮೀಟರ್ ವುಳ್ಳ ವಸತಿ ಖಾಲಿ ನಿವೇಶನಕ್ಕೆ ಚಕ್ಕುಬಂದಿ : ಪೂರ್ವ-ರೀ. ಸ.ನಂ. 214ರ ಅನುಮೋದಿತ ವಿನ್ಯಾಸ., ಪಶ್ಚಿಮ - 18.00 ಮೀಟರ್ ಅಗಲದ ರಸ್ತೆ, ಉತ್ತರ -ಸೈಟ್ ನಂ. 4, ದಕ್ಷಿಣ - ಸೈಟ್ ನಂ. 6.

ಈ ಮಧ್ಯದ ಎರಡು ನಿವೇಶನಗಳನ್ನು ನನ್ನ ಕಕ್ಷಿಗಾರರು ಮೇಲ್ಕಂಡ ಶ್ರೀ ಕೆ.ಜಿ. ಸುರೇಶ್ ಬಿನ್ ಲೇಟ್ ಕೆ.ಜಿ. ಬಸವನಗೌಡ, ಇವರಿಂದ ಖರೀದಿಸುವವರಿದ್ದಾರೆ.

**ದಾವಣಗೆರೆ.**
**ದಿನಾಂಕ : 10.03.2025**

**ಸಹಿ/- ಮಲ್ಲಿಕಾರ್ಜುನ ಕಣವಿ, ವಕೀಲರು**
**ನಂ. 5 ಮತ್ತು 6, ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ 577 006.**

# ಮಾನವನನ್ನು ಮಹಾದೇವನಾಗಿಸಿದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು

**ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕೆಯ :**
**ಚಕ್ಷುರುನಿರ್ಮಿಲಿತಂ ಏನ್ ತಶ್ರೀ ಗುರುವೇ ನಮಃ**

ಕತ್ತಲೆಯಿಂದ ಬೆಳಕಿನಡೆಗೆ ಅಜ್ಞಾನದಿಂದ ಸುಜ್ಞಾನದೆಡೆಗೆ ಕರೆದುಕೊಂಡು ಹೋಗುವ ಅನೇಕ ಮಹಾನ್ ಪುಣ್ಯ ಪುರುಷರಲ್ಲಿ ಅತ್ಯಂತ ಪುರಾತನ ಇತಿಹಾಸ ಹೊಂದಿದ ವೀರಶೈವ ಪರಂಪರೆಯನ್ನು, ಅದರ ಮಹತ್ವವನ್ನು ಮತ್ತು ಅದರ ಆಚಾರ-ವಿಚಾರಗಳನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಟ್ಟ ಮಾನವನನ್ನು ಮಹಾದೇವನನ್ನಾಗಿಸಿದ ಕೀರ್ತಿ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ.

**ಮಾನವ ಧರ್ಮಕ್ಕೆ ಜಯವಾಗಲ**
**ಧರ್ಮದಿಂದಲೇ ವಿಶ್ವಕ್ಕೆ ಶಾಂತಿ**

ಎಂಬ ದಿವ್ಯ ಸಂದೇಶವನ್ನು ಸಾರಿದ ಮತ್ತು ಮಾನವನ ದಾನವ ಗುಣಗಳನ್ನು ದಹಿಸಿ, ಅವನನ್ನು ಮಹಾದೇವನನ್ನಾಗಿಸಿದ ಅಪೂರ್ವ ಸಿದ್ಧಾಂತವನ್ನು ಜಗತ್ತಿಗೆ ನೀಡಿದ,

**ಜೀವಿ-ಶಿವನಾಗುವ, ಅಂಗ-ಲಿಂಗ ವಾಗುವ,**
**ನೀರು-ತೀರ್ಥವಾಗುವ,ಅನ್ನ-ಪ್ರಸಾದವಾಗುವ**

ಅತ್ಯದ್ಭುತ ಸಿದ್ಧಾಂತವನ್ನು ಜಗತ್ತಿಗೆ ಬೋಧಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗತ್ತಿನ ಕಲ್ಯಾಣಕ್ಕಾಗಿ ಪರಶಿವನ ಆದೇಶಾನುಸಾರ ಕೊಲ್ಲಿಪಾಕಿ ಕ್ಷೇತ್ರದ ಶ್ರೀ **ಸೋಮೇಶ್ವರ ಮಹಾಲಿಂಗದಿಂದ ಅವಿರ್ಭವಿಸಿದ ಪುಣ್ಯ ದಿನವೇ ಪಾಲ್ಗುಣ ಶುದ್ಧ ತ್ರಯೋದಶಿ.**

ದಿನಾಂಕ 12.3.2025 ರ ಬುಧವಾರ ಎಲ್ಲೆಡೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಅಲ್ಲದೆ ಕೆಲವು ಲೇಖನಗಳಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಆಂಧ್ರಪ್ರದೇಶದ ಕದ್ರಿಕೆ ಎಂಬ ಸ್ಥಳದಲ್ಲಿ ಹುಟ್ಟಿದರೆಂದು ನಂಬಲಾಗಿದೆ ಮತ್ತು ಕೆಲವೂಂದು ಕಾದಂಬರಿಗಳು ಇವರನ್ನು ಪರ ಶಿವನ ಅವತಾರವೆಂದು ಗುರುತಿಸುತ್ತದೆ. ಶ್ರೀ ಜಗದ್ಗುರುಗಳು ಬಾಲ್ಯದಲ್ಲಿ ಭಕ್ತಿ ಪರವಶತೆಯನ್ನು ಹೊಂದಿ ಋಷಿಗಳ ಜೊತೆಯಲ್ಲಿ ನಿರಂತರ ಜ್ಞಾನ ಸಾಧನೆ ನಡೆಸಿ ಶೈವ ತತ್ವಗಳನ್ನು ಆಳವಾಗಿ ಅಧ್ಯಯನ ನಡೆಸಿದರು.

ಅಂತೆಯೇ ಮಾನವ ಕುಲದ ಏಳಿಗೆಗೆ ತನ್ನ ಇಡೀ ಬದುಕನ್ನು ಮುಡಿಪಾಗಿಟ್ಟ ಪುಣ್ಯಪುರುಷರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ತ್ಯಾಗ, ಅಧ್ಯಾತ್ಮಿಕ ಶ್ರದ್ಧೆ, ಜನಪರ ಕಾಳಜಿ, ಭವ ಬಂಧಗಳಿಂದ ಜನಸಾಮಾನ್ಯರನ್ನು ಮುಕ್ತಗೊಳಿಸಿ ಅವರ ಬದುಕನ್ನು ಹಸನು ಮಾಡಲು ಅವರು ಮಾಡಿರುವ ಪ್ರಾಮಾಣಿಕ ಪ್ರಯತ್ನಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮವು ಸಾಕ್ಷಿಯಾಗಿ ನಿಲ್ಲುತ್ತದೆ.

ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಉಲ್ಲೇಖವಾದ ಮೊದಲ ಪರಿಚ್ಛೇದದ ಮೊದಲ ಚರಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಶ್ರೀ ಅಗಸ್ತ್ಯ ಮಹಾಮುನಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸುವ ಪ್ರಥಮ ಚರಣದ ಉಲ್ಲೇಖವು ಹೀಗಿದೆ.



**ಇಂದು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ**

**ತ್ರೈಲೋಕ್ಯ ಸಂಪದಾಲೇ ಖ್ಯಾ**
**ಸಮುಲ್ಲೇಖನಬಿತ್ತಯೇ**
**ಸಚ್ಚಿದಾನಂದರೂಪಾಯ**
**ಶಿವಾಯ ಬ್ರಹ್ಮಣೇ ನಮಃ !!**

ಮೂರು ಲೋಕವೆಂಬ ಸಂಪದ್ರೂಪವಾದ ಚಿತ್ರದ ಬರವಣಿಗೆಗೆ ಆಧಾರವಾದ ಗೋಡೆಯಂತಿರುವ ಸತ್,ಚಿತ್. ಆನಂದ ರೂಪ ಶಿವ ನಾದ ಬ್ರಹ್ಮನಿಗೆ ನಮಸ್ಕಾರ. ಎಂದು ಸಕಲ ಚರಾಚರ ವಸ್ತು ಗಳಲ್ಲಿ ಶಿವ ಸ್ವರೂಪಿಯನ್ನು ಕಂಡು ಸಾಕ್ಷಾತ್ಕಾರಗೊಂಡು, ಪರಮ ಪೂಜ್ಯರು ನುಡಿದ ನುಡಿಗಳನ್ನು ಇಲ್ಲಿ ವಕಾಣಬಹುದಾಗಿದೆ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿರುವ ತತ್ವ ಸಿದ್ಧಾಂತಗಳು ಕೇವಲ ಬೋಧನೆಗೆ ಸೀಮಿತವಾಗದೆ, ತಾವು ಜನಿಸಿದ ಕೊಲ್ಲಿಪಾಕಿಯಲ್ಲಿ ಎಲ್ಲಾ ಜಾತಿ, ಜನಾಂಗಳಿಗೂ 18 ಮಠಗಳನ್ನು ಸ್ಥಾಪಿಸಿ ಅದಕ್ಕೆ ಶಿಷ್ಯರನ್ನು ನೇಮಿಸಿ ಸಂಸ್ಕಾರ ನೀಡಿದ್ದು, ಶ್ರೀ ಜಗದ್ಗುರು ರೇಣುಕಾಚಾರ್ಯರ ಮೊದಲ ಕ್ರಾಂತಿಕಾರಿ ಹೆಜ್ಜೆಯಾಗಿದೆ. ಅದನ್ನು ಇಂದಿಗೂ 18 ಮಠಗಳ ಕುರುಹು ಕೊಲ್ಲಿಪಾಕಿಯಲ್ಲಿ ಸಾಕ್ಷಿಯಾಗಿರುವುದನ್ನು ನಾವು ಕಾಣಬಹುದಾಗಿದೆ.

**ಎರಡು ಕೋಣೆಗಳ ನೀಂ ಮಾಡು ಮನದಾಲಯದಿ!**
**ಹೊರಕೋಣೆಯಲ್ಲಿ ಲೋಗರಾಟಗಳನಾಡು!**
**ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ!**
**ವರಯೋಗ ಸೂತ್ರವಿದು - ಮಂಕುತಿಮ್ಮ !!**

ಎಂಬ ಡಿವಿಜಿಯವರ ನುಡಿಗಳನ್ನು ಗಮನಿಸಿದಾಗ, ಮನವೆಂಬ ಆಲಯದಲ್ಲಿ ಸದಾ ಉಕ್ಕುವ ಭವದ ವಿಚಾರಗಳು ಏನೇ ಇದ್ದರೂ ನಿನ್ನ ಮೌನದ ಮನೆಯಲ್ಲಿ ಒಬ್ಬನೇ ವಿರಮಿಸಿದಾಗ ಮಾತ್ರ ಮನುಷ್ಯನಿಗೆ ಮಾನಸಿಕ ನೆಮ್ಮದಿ ಸಿಗುತ್ತದೆ ಮತ್ತು ಅದು ಅಧ್ಯಾತ್ಮದಲ್ಲಿ ಮಾತ್ರ ಸಾಧ್ಯ ಎಂಬುದನ್ನು ತಮ್ಮ ಅಧ್ಯಾತ್ಮಿಕ ಸಾಧನೆಯಲ್ಲಿ ಕಂಡುಕೊಂಡ ಪರಮಪೂಜ್ಯರು ಅಧ್ಯಾತ್ಮದ ಅರಿವಿಗೆ ಸಂಸ್ಕಾರದ ಅಗತ್ಯತೆಯನ್ನು ಮನಗಂಡರು.

ನಂತರ ಶ್ರೀ ಜಗದ್ಗುರುಗಳು ಧರ್ಮ ಸಂಸ್ಕಾರ ನೀಡುವ ಪರಂಪರೆಯನ್ನು ಹುಟ್ಟು ಹಾಕಿ ಮಲಯಾ ಮಾಚಲದಲ್ಲಿ ಬರುವ ತರ ಶ್ರೇಣಿಯಲ್ಲಿ ಪೃಥ್ವಿ ತತ್ವದ ಸಂಕೇತವಾದ ಹಸಿರು ಧ್ವಜವನ್ನು ಹಿಡಿದು ಭದ್ರಾ ನದಿ ತಟದಲ್ಲಿ ಜಗದ್ಗುರು ವೀರ ಸಿಂಹಾಸನ ರಂಭಾಪುರಿ ಪೀಠವನ್ನು ಸ್ಥಾಪಿಸಿದರು. ವೀರಶೈವ ಸಂಪ್ರದಾಯದಂತೆ ಅಷ್ಟಾವರ್ಣಗಳಾದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದಗಳೆಂಬ ಆಚಾರಗಳಿಂದ ಮಾನವನು ಮಹಾದೇವನಾಗಬಹುದು ಎಂದು ಪ್ರಾಯೋಗಿಕವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು.

ಇದೇ ಮಾದರಿಯಲ್ಲಿ ಪಂಚಪೀಠಾ ಧೀಶ್ವರರು ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಪಂಚ ತತ್ವಗಳಿಂದ ಉದ್ಭವಗೊಂಡು ರಂಭಾಪುರಿ, ಉಜ್ಜೈನಿ ,ಕೇದಾರ, ಶ್ರೀಶೈಲ, ಕಾಶಿ ಎಂಬ ಪಂಚ ಪೀಠಗಳಿಂದ ಧರ್ಮ ಸಂಸ್ಕಾರಗಳನ್ನು ನೀಡುತ್ತಾ ಬಂದಿವೆ. ಅಂತೆಯೇ ವೀರ, ನಂದಿ, ಭೃಗಿ, ವೃಷಭ, ಸ್ಕಂದ ಎಂಬ ಪಂಚ ಗೋತ್ರಗಳಿಂದ ಹಾಗೂ ಪಡುವಡಿ. ವೃಷ್ಟಿ, ಲಂಬನ. ಮುಕ್ತಾಗುಳ್ಳ ಪಂಚವರ್ಣ, ಎಂಬ ಸೂತ್ರ ಅಥವಾ ಬಗೆಗಳಿಂದ ಕರೆಯಲ್ಪಡುತ್ತವೆ.

ಮತ್ತು ರೇಣುಕ, ದಾರುಕ, ಘಂಟಾಕರ್ಣ, ದೇನುಕರ್ಣ, ವಿಶ್ವಕರ್ಣ, ಎಂಬ ಶಾಖೆಗಳನ್ನು ಒಳಗೊಂಡು ಜಾತಿ/ಲಿಂಗ ಭೇದಗಳಿಲ್ಲದೆ ಸರ್ವರನ್ನೂ ಸಮಾನವಾಗಿ ಕಾಣುವ ವೀರಶೈವ ಧರ್ಮದ ಸಂಪ್ರದಾಯದಂತೆ ಇಷ್ಟಲಿಂಗವನ್ನು ಧರಿಸಿ ಭಕ್ತ, ಮಹೇಶ, ಪ್ರಸಾದ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟಸ್ಥಲಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಎಲ್ಲರಲ್ಲೂ ಧರ್ಮ ಸಂಸ್ಕಾರಗಳನ್ನು ಬಿತ್ತಿ ಜನ ಸಾಮಾನ್ಯರ ಬಾಳಿಗೆ ಬೆಳಕಾಗಿವೆ.

ಶ್ರೀ ಮದ್ ರಂಭಾಪುರಿ ಪೀಠದಲ್ಲಿ ಈಗಿರುವ ಪರಮ ಪೂಜ್ಯರು 121ನೇ ಪೀಠಾಧಿಪತಿಗಳಾಗಿದ್ದು, ಜಗದ್ಗುರು ಶ್ರೀ ಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ!! ವೀರ ಸೋಮೇಶ್ವರ ರಾಜದೇಶಿಕೇಂದ್ರ, ಶಿವಾಚಾರ್ಯ ಭಗವತ್ಪಾದರು

**ಸಾಹಿತ್ಯ ಸಂಸ್ಕೃತಿ ಸಂವರ್ಧಿಸಲಿ,**
**ಶಾಂತಿ ಸಮೃದ್ಧಿ ಸರ್ವರಿಗಾಗಲಿ**

ಎಂಬ ಉದಾತ್ತ ಸಂದೇಶಗಳನ್ನು ಮಾನವ ಕುಲಕ್ಕೆ ಸಾರುತ್ತಾ ಧರ್ಮ ಜಾಗೃತಿಗಾಗಿ ಪಂಚಪೀಠಗಳನ್ನು ಮೊದಲು ಮಾಡಿಕೊಂಡು ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಧ್ಯೇಯ ವಾಕ್ಯದಡಿ ನಿರಂತರವಾಗಿ ಜನರ ಕಲ್ಯಾಣಕ್ಕೆ ಕಟಿಬದ್ಧವಾಗಿ ಕಾರ್ಯ ನಿರ್ವಹಿಸುತ್ತಿವೆ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಕಿಕೊಟ್ಟ ವೀರಶೈವ ಪರಂಪರೆಯನ್ನು ಅದರ ಆಚಾರ. ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಇಷ್ಟಲಿಂಗ ಧಾರಣೆಯ ಮೂಲಕ ಭಗವಂತನನ್ನು ಅರಿತುಕೊಳ್ಳಬೇಕು ಎಂಬ ತತ್ವವನ್ನು ಪ್ರಚಾರ ಮಾಡುವಲ್ಲಿ ಅಧ್ಯಾತ್ಮ ಮತ್ತು ತತ್ವಶಾಸ್ತ್ರ ಅಹಂ ಬ್ರಹ್ಮಾಸ್ಮಿ ಮತ್ತು ಶಿವೋಹಂ ಎಂಬ ತತ್ವಗಳಿಗೆ ವೀರಶೈವ ಚಿಂತನೆಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಗಳನ್ನು ನೀಡಿ

**ಅವಮಾನಿತ ವರ್ಗಗಳನ್ನು ಪ್ರೀತಿಸಿ**
**ಧಾರ್ಮಿಕ ಶಿಕ್ಷಣವನ್ನು ನೀಡಿ**
**ಸರ್ವರೂ ಸಮಾನರು ಎಂಬ ಸದ್ಭಾವನೆ ಯೊಂದಿಗೆ**

ಲಿಂಗಾಯತ ಧರ್ಮದ ಮೂಲ ಸಿದ್ಧಾಂತಗಳನ್ನು ಪ್ರತಿಪಾದಿಸಿ ವೀರಶೈವ ಸಿದ್ದಾಂತದ ಪರಂಪರೆಯನ್ನು ಬಲಪಡಿಸಲು ತಮ್ಮ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಎಲ್ಲ ಪರಮಪೂಜ್ಯ ಜಗದ್ಗುರು ಪಂಚಾಚಾರ್ಯರಿಗೆ ಭಕ್ತ ಸಮೂಹವು ಅಪಾರ ಅಭಿಮಾನ, ಪ್ರೀತಿ, ಗೌರವಗಳನ್ನು ಇಟ್ಟುಕೊಂಡು ಸರ್ವರೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಜಯಂತಿಯನ್ನು ಆಚರಿ ಸುತ್ತಿರುವುದು ಶ್ರೀ ಜಗದ್ಗುರುಗಳು ಹಾಕಿಕೊಟ್ಟ ಭಕ್ತಿ ಮಾರ್ಗಕ್ಕೆ ಮತ್ತು ಭಗವಂತನ ಸಾಕ್ಷಾತ್ಕಾರಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಇಷ್ಟ ಲಿಂಗಪೂಜೆ ದೇವರ ಒಳಹರಿವು ಸಮಾಜವನ್ನು ಒಂದು ಗಟ್ಟುವ ಪರಿ ಶಿವಾದ್ವೈತ ಸಿದ್ಧಾಂತಗಳು ಕರ್ಮ ಮುಕ್ತ ಜೀವನ ಪ್ರಜ್ಞಾಪೂರ್ಣ ಜೀವನ ತತ್ವಜ್ಞಾನವನ್ನು ಅಧ್ಯಾತ್ಮಿಕ ಅನುಭವದೊಂದಿಗೆ ಬೆಸೆದು ಬದುಕನ್ನು ಕಟ್ಟಿಕೊಳ್ಳಬೇಕೆಂದು ಬಯಸಿದ ಶ್ರೀಜಗದ್ಗುರುಗಳು ವೀರಶೈವ ತತ್ವ ಶಾಸ್ತ್ರವನ್ನು ಜನಸಾಮಾನ್ಯರಿಗೆ ಪರಿಚಯಿಸಿ ಸಮಾಜದ ಸಮಾನತೆ ಧಾರ್ಮಿಕ ಸಾಮರಸ್ಯ ಮತ್ತು ಅಧ್ಯಾತ್ಮಿಕ ಪ್ರಗತಿಗೆ ಅದನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿ ಅವರ ಬದುಕನ್ನು ಹಸನು ಮಾಡಿದ ಕೀರ್ತಿ ವಿಶ್ವ ವ್ಯಾಪಿಯಾಗಿದೆ. ಅದಕ್ಕೆ ಇಂಬುಕೊಡುವಂತೆ ಒಂದು ಪ್ರಸಂಗವು ಶರಣ ಸಾಹಿತ್ಯದಲ್ಲಿ ಉಲ್ಲೇಖವಾಗಿದೆ. ವೀರಶೈವ ಸಿದ್ಧಾಂತದ ಆಚಾರಗಳ ಅಡಿಯಲ್ಲಿ ಅಧ್ಯಾತ್ಮ ಸಾಧನೆ ಮಾಡಿದ ಅಕ್ಕನನ್ನು ಕುರಿತು ಚೆನ್ನಬಸವಣ್ಣನು

**ತನುವಿನೊಳಗಿದ್ದು ತನುವಗೆದ್ದವಳು**
**ಮನದೊಳಗಿದ್ದು ಮನವಗೆದ್ದವಳು**
**ವಿಷಯದೊಳಗಿದ್ದು ವಿಷಯಗೆದ್ದವಳು**
**ಭವಿಯ ಸಂಗದೊಳಿದ್ದು ಭವವ ಗೆದ್ದವಳು !!**

ಎಂದು ಗೌರವದ ಮಾತುಗಳನ್ನಾಡುತ್ತಾರೆ.

ಅಂತೆಯೇ ದಿನಾಂಕ 12.3.2025 ರ ಶ್ರೀ ಗುರು ರೇಣುಕಾಚಾರ್ಯರ ಜಯಂತಿ ಎಲ್ಲೆಡೆಯ ಸಡಗರ, ಸಂಭ್ರಮಗಳಿಂದ ಸಮಸ್ತ ವೀರಶೈವ ಲಿಂಗಾಯತ ಭಕ್ತರ ಸಮೂಹವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ಅಂತೆಯೇ ದಾವಣಗೆರೆಯ ಶ್ರೀ ಅಭಿನವ ರೇಣುಕ ಮಂದಿರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಯುಗಮಾನೋತ್ಸವ ಸಮಾರಂಭವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು (ಪುರವರ್ಗ ಮಠ ಶ್ರೀ ಕ್ಷೇತ್ರ ಆವರಗೊಳ್ಳ) ಇವರ ದಿವ್ಯ ಸಾನಿಧ್ಯದಲ್ಲಿ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ಗೌರವಾಧ್ಯಕ್ಷರಾದ ಶ್ರೀ ಉಳುವಯ್ಯ ಮತ್ತು ಎಲ್ಲ ಸದಸ್ಯರು ಹಾಗೂ ಭಕ್ತರ ಸಹಯೋಗದಲ್ಲಿ ಮತ್ತು ಜಗಳೂರು ತಾಲ್ಲೂಕಿನಲ್ಲಿ ಪರಮ ಪೂಜ್ಯ ಶ್ರೀ ಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ಅನೇಕ ಗಣ್ಯರ ನೇತೃತ್ವದಲ್ಲಿ ರುದ್ರಾಭಿಷೇಕ, ಕಳಸ, ಸಾರೋಟು, ವಾದ್ಯ ವೈಭವಗಳಿಂದ ಮೆರವಣಿಗೆ ಮೂಲಕ
ಶ್ರೀ ಗುರು ರೇಣುಕಾಚಾರ್ಯರ ಜಯಂತಿಯ ಯುಗಮಾನೋತ್ಸವ ಸಮಾರಂಭವನ್ನು ಆಚರಿಸಲಾಗುತ್ತದೆ

ಶ್ರೀ ಮದ್ ರಂಭಾಪುರಿ ಪೀಠದಲ್ಲಿಯೂ ಸಹ ಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ವೀರಶೈವ ಲಿಂಗಾಯತ ಸಿದ್ಧಾಂತಗಳ ಆಚಾರ-ವಿಚಾರಗಳ ಮೂಲಕ ಪಂಚಪೀಠಗಳನ್ನು ಮೊದಲು ಮಾಡಿಕೊಂಡು ಮಾನವನ ಕಲ್ಯಾಣಕ್ಕೆ ವೀರಶೈವ ಪರಂಪರೆಯ ಹೆಗ್ಗಳಿಕೆ ಮತ್ತು ಅದರ ಶ್ರೀಮಂತಿಕೆಯನ್ನು ಪರಿಚಯಿಸುವಲ್ಲಿ ರಂಭಾಪುರಿ ಪೀಠದಲ್ಲಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿರುತ್ತದೆ.

2025, ಮಾರ್ಚ್ 10ರಿಂದ ದಿನಾಂಕ 14ರವರೆಗೆ ಕೃಷಿ ಸಮ್ಮೇಳನ, ಶಿವಾದ್ವೈತ ಸಮಾವೇಶ, ಜಾನಪದ ಮೇಳ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ರಾಯಚೂರು ಜಿಲ್ಲೆಯ ಕವಿತಾಳ ಗ್ರಾಮದ ಸಾವಯವ ಕೃಷಿ ತಜ್ಞರಾದ ಡಾ. ವಿತಾ ಮಿಶ್ರಾ ಅವರಿಗೆ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿರುವುದು ಅದಮ್ಯಸಾಮಾಜಿಕ ಕಳಕಳಿಯ ಧ್ಯೋತಕವಾಗಿದೆ.



**- ಬಿ.ಎಂ.ದಾರುಕೇಶ,** ಕೆ.ಇ.ಎಸ್.,
ಹಿರಿಯ ಉಪನ್ಯಾಸಕರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ದಾವಣಗೆರೆ.

## ಅಪಕ್ವತೆ ರಾಜಕೀಯ ಲಾಭಕ್ಕೆ

**(1ನೇ ಪುಟದಿಂದ)**- ಕಾರಣ ಮತ್ತು ಪರಿಹಾರ' ಕುರಿತು ಮನೋಚಿಕಿತ್ಸಕ ವಸಂತ್ ನಡವಳ್ಳಿ ಮಾತನಾಡುತ್ತಾ, ನಮ್ಮ ಬದುಕಿನ ದಾರಿಯೇ ಹಿಂಸೆಯಾಗಿದೆ. ಹಿಂಸೆ ಜೀವನದ ಅವಿಭಾಜ್ಯ ಅಂಗವಾಗಿದೆ. ಇದೇ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಕ್ಕೆ ಕಾರಣವೂ ಆಗಿದೆ ಎಂದು ಹೇಳಿದರು.

ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಇಂದು-ನಿನ್ನೆಯದಲ್ಲ. ಸಾವಿರಾರು ವರ್ಷಗಳಿಂದಲೂ ನಡೆಯುತ್ತಿದೆ. ಆದರೆ ವರದಿಯಾಗುತ್ತಿರಲಿಲ್ಲ. ಇಂದು ಸಾಮಾಜಿಕ ಜಾಲ ತಾಣ, ಮಾಧ್ಯಮ ಹಾಗೂ ಕಾನೂನುಗಳ ಕಾರಣದಿಂದಾಗಿ ಜನರಿಗೆ ತಿಳಿಯುತ್ತಿದೆ ಎಂದರು.

ದೇಶದಲ್ಲಿ ನಡೆಯುವ ಶೇ.90ರಷ್ಟು ಅತ್ಯಾಚಾರ ಪ್ರಕರಣಗಳು ವರದಿಯಾಗುವುದಿಲ್ಲ ಎನ್ನುವುದು ಆಘಾತಕಾರಿ ವಿಷಯ. ಶೇ.80ರಷ್ಟು ಅತ್ಯಾಚಾರ ಪ್ರಕರಣಗಳಲ್ಲಿ ಪರಿಚಿತರು, ಸುತ್ತ ಮುತ್ತಲಿನ ವ್ಯಕ್ತಿಗಳೇ ಭಾಗಿಯಾಗಿರುತ್ತಾರೆ. ಮಕ್ಕಳ ಮೇಲೆ ನಡೆಯುವ ಶೇ.95ರಷ್ಟು ಅತ್ಯಾಚಾರ ಪ್ರಕರಣಗಳಲ್ಲಿ ಕುಟುಂಬದವರೇ ಇರುತ್ತಾರೆ ಎಂದರು.

ಅತ್ಯಾಚಾರಕ್ಕೆ ಕಠಿಣ ಶಿಕ್ಷೆ ಇರುವ ಅರಬ್ ದೇಶದಲ್ಲೂ, ಕಠಿಣ ಕಾನೂನು ಇರುವ ಅಮೆರಿಕಾ, ಯೂರೋಪ್ ದೇಶಗಳಲ್ಲಿ ಅತ್ಯಾಚಾರಗಳು ನಡೆಯುತ್ತಿವೆ. ಹೀಗಾಗಿ ಶಿಕ್ಷೆ ವಿಧಿಸುವುದರಿಂದ ಅಪರಾಧ ತಡೆಯಬಹುದೆಂಬುದಕ್ಕೆ ಯಾವುದೇ ಆಧಾರಗಳಿಲ್ಲ. ಶಿಕ್ಷೆಯಿಂದ ಬದಲಾವಣೆ ತರುವ ಭ್ರಮೆ ಬಿಟ್ಟು, ಬೇರೆಯದ್ದೇ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ ಎಂದರು. ಎಐಡಿವೈಓ ರಾಜ್ಯ ಉಪಾಧ್ಯಕ್ಷ ವಿಜಯ್ ಕುಮಾರ್ ಆಶಯ ನುಡಿಗಳನ್ನಾಡಿದರು.

ಇಂದಿನ ಯುವ ಮನಸ್ಸಿನ ತಲ್ಲಣಗಳು ಕುರಿತು ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಮಾತನಾಡಿದರು. ಜಿಲ್ಲಾ ಸಂಚಾಲಕ ಪರಶುರಾಮ್ ಪಿ. ಅಧ್ಯಕ್ಷತೆ ವಹಿಸಿದ್ದರು. ಎಆರ್‌ಜಿ ಕಾಲೇಜು ಪ್ರಾಂಶುಪಾಲ ಸಿ.ಬಿ. ಬೋರಯ್ಯ, ಸುನಿಲ್ ಉಪಸ್ಥಿತರಿದ್ದರು. ಕೆ. ಅನಿಲ್ ಕುಮಾರ್ ನಿರೂಪಿಸಿದರು. ಸಂಘಟಕ ಗುರು ಪಲ್ಲಾಗಟ್ಟೆ ಸ್ವಾಗತಿಸಿದರು. ಶಶಿಕುಮಾರ್ ವಂದಿಸಿದರು.

## ಗ್ಯಾರಂಟಿ ಸಮಿತಿಗೆ ಕಾರ್ಯಕರ್ತರು

**(1ನೇ ಪುಟದಿಂದ)** ಮಾಡಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆ ಮಾಡಿ ಸರ್ಕಾರದಿಂದ ಗ್ಯಾರಂಟಿ ಸಮಿತಿ ಸದಸ್ಯರಿಗೆ ಹಣ ನೀಡುವುದು ಬೇಡ ಎಂದು ಪಟ್ಟು ಹಿಡಿದು ಧರಣಿ ಆರಂಭಿಸಿದರು.

ಈ ನಡುವೆಯೇ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಶ್ನೋತ್ತರ ಕಲಾಪ, ವಿಧೇಯಕ ಮಂಡನೆ ಕಲಾಪವನ್ನು ನಡೆಸಿ, ನಂತರ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಇದಕ್ಕೂ ಮುಂಚೆ ಮಾತನಾಡಿದ್ದ ಪ್ರತಿಪಕ್ಷದ ನಾಯಕ ಆರ್ ಅಶೋಕ್, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಸಂಬಳ ಹೆಚ್ಚು ಮಾಡಲು ಹಿಂದೆ-ಮುಂದೆ ನೋಡುತ್ತೀರಿ. ಆದರೆ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರುಗಳಿಗೆ ದೊಡ್ಡ ಪ್ರಮಾಣದಲ್ಲಿ ಗೌರವ ಧನ ನೀಡುತ್ತಿದ್ದೀರಿ. ಆಶ್ರಯ, ವಸತಿ ಸೇರಿದಂತೆ ಯಾವುದೇ ಸಮಿತಿಗಳ ಅಧ್ಯಕ್ಷರುಗಳಿಗೆ ಗೌರವ ಧನ ನೀಡುತ್ತಿಲ್ಲ. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳಿಗೆ ಗೌರವ ಧನ ನೀಡುತ್ತಿರುವುದು ಏಕೆ ? ಎಂದು ಪ್ರಶ್ನಿಸಿದರು.

### ಕಾರ್ಯಕರ್ತರಿಗೆ ಹುದ್ದೆ ನೀಡುವ ಹಕ್ಕಿದೆ : ಡಿಕೆಶಿ ಸಮರ್ಥನೆ

**(1ನೇ ಪುಟದಿಂದ)** ಕುಟುಕಿದರು. ಸರ್ಕಾರ ಬಳ್ಳಾರಿ ಯಲ್ಲಿ 187 ಕೋಟಿ ರೂ.ಗಳನ್ನು ಪಕ್ಷದ ಕಾರ್ಯಕರ್ತ ರಿಗೆ ಬಳಸಿಕೊಂಡಿದೆ ಎಂಬ ವಿಚಾರವನ್ನು ಬಜೆಟ್ ಮೇಲಿನ ಚರ್ಚೆ ವೇಳೆ ಪ್ರಸ್ತಾಪಿಸಲಿ ಉತ್ತರ ಕೊಡುತ್ತೇವೆ ಎಂದರು.

ರಾಜ್ಯದ ಮತದಾರರು ಕಾಂಗ್ರೆಸ್‌ಗೆ 138 ಸ್ಥಾನಗಳನ್ನು ನೀಡಿ ಶಕ್ತಿ ತುಂಬಿದ್ದಾರೆ, ವಿರೋಧ ಪಕ್ಷದ ನಾಯಕರು ಹಾಗೂ ಶಾಸಕರು ತಮಗೂ ಸಮಿತಿಗಳಲ್ಲಿ ಅಧ್ಯಕ್ಷ, ಸದಸ್ಯ ಸ್ಥಾನ ನೀಡಿ ಎಂಬುದಾಗಿ ಮನವಿ ಮಾಡಿದ್ದಾರೆ, ಇದು ನನ್ನೊಬ್ಬನ ನಿರ್ಧಾರವಲ್ಲ, ಈ ಬಗ್ಗೆ ಸಂಪುಟದಲ್ಲಿ ಚರ್ಚಿಸಿ, ತೀರ್ಮಾನ ಮಾಡುತ್ತೇವೆ, ನಾವು ಎಂದಿಗೂ ನಮ್ಮ ಕಾರ್ಯಕರ್ತರ ಜೊತೆ ಇದ್ದೇ ಇರುತ್ತೇವೆ ಎಂದರು.

ಇದಕ್ಕೆ ವಿರೋಧ ಪಕ್ಷಗಳ ಶಾಸಕರು ತೀವ್ರವಾಗಿ ಆಕ್ಷೇಪಿಸಿ ಗದ್ದಲ ಎಬ್ಬಿಸಿದಾಗ ಶಿವಕುಮಾರ್ ಮಾತನಾಡಿ, ಬಿಜೆಪಿ ಪ್ರಾರಂಭದಲ್ಲಿ ಗ್ಯಾರಂಟಿಗಳಿಗೆ ವಿರೋಧ ಮಾಡಿತು, ಆದರೂ ನಾವು ಜಾರಿಗೆ ತಂದೆವು, ಅವು ಜನರಿಗೆ ತಲುಪಿದವು, ಪ್ರಧಾನಮಂತ್ರಿಯಿಂದ ಪ್ರತಿಪಕ್ಷದ ಪ್ರತಿಯೊಬ್ಬರೂ ಗ್ಯಾರಂಟಿ ಯೋಜನೆಗಳಿಗೆ ಟೀಕೆ ಮಾಡಿರುವವರೇ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವವರೆಗೆ ಗ್ಯಾರಂಟಿ ನಿಲ್ಲಿಸಲ್ಲ, ರಾಜ್ಯದ ಬಡಜನತೆಗೆ, ಮಹಿಳೆಯರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಗ್ಯಾರಂಟಿ ಮೂಲಕ ಅನುಕೂಲ ಮಾಡಿಕೊಟ್ಟಿದ್ದೇವೆ.

ಹೆಣ್ಣು ಕುಟುಂಬದ ಕಣ್ಣು ಎಂಬುದಕ್ಕೆ ಸಹಾಯ ಮಾಡಿದ್ದೇವೆ, ವಿರೋಧ ಪಕ್ಷಗಳು ನಮ್ಮನ್ನು ಹೆದರಿಸಲು ಪ್ರಯತ್ನಪಟ್ಟವು, ಆದರೆ, ಇದು ನಮ್ಮ ಬದ್ಧತೆ ಎಂದರು.

ಜನ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದರು, ಪ್ರತಿಯೊಂದು ಪದಾರ್ಥಗಳ ಬೆಲೆಯೂ ಹೆಚ್ಚಾಗಿತ್ತು, ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿತು, ಯೋಜನೆಗಳಿಗೆ ನೂರಾರು ಟೀಕೆ, ಟಿಪ್ಪಣಿ ಬಂದವು.

ಒಂದು ಕಾಳು ಕಡಿಮೆ ಕೊಟ್ಟರೂ ಸುಮ್ಮನಿರುವುದಿಲ್ಲ ಎಂಬುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಕಾಂಗ್ರೆಸ್ ಸರ್ಕಾರದಿಂದ ಸಾಧ್ಯವೇ ? ಎಂದು ಪ್ರಶ್ನಿಸಿದ್ದರು. ನಾವು ಅಧಿಕಾರಕ್ಕೆ ಬಂದ ಮೊದಲ ದಿನವೇ ಐದು ಗ್ಯಾರಂಟಿಗಳಿಗೆ ಒಪ್ಪಿಗೆ ಕೊಟ್ಟು ಆದೇಶ ಹೊರಡಿಸಿದೆವು.

ರಾಜ್ಯದ ಶೇ.20ರಷ್ಟು ಬಜೆಟ್ ಅಂದರೆ, 50 ಸಾವಿರ ಕೋಟಿ ರೂ. ಗ್ಯಾರಂಟಿಗಳಿಗೆ ಮೀಸಲಿಟ್ಟರೆ ಎಷ್ಟು ಸಮಸ್ಯೆ ಆಗುತ್ತದೆ ಎನ್ನುವ ಅರಿವು ನಮಗಿದೆ, ಆದರೆ, ಜನರ ಕಲ್ಯಾಣ ಮುಖ್ಯ, ಜೀವ ಇದ್ದರೆ ಜೀವನ ಎಂದು ಹೇಳಿದರು.

ಬಿಜೆಪಿ ಆಡಳಿತವಿರುವ ದೆಹಲಿ, ಮಹಾರಾಷ್ಟ್ರ, ಮಧ್ಯ ಪ್ರದೇಶ ಸೇರಿದಂತೆ, ಅನೇಕ ರಾಜ್ಯಗಳಲ್ಲಿ ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಆರ್.ಅಶೋಕ್ ಬಳಸಿರುವ ಮನೆಹಾಳು ಪದ ಕಡತಲ್ಲಿಯೇ ಉಳಿಯಲಿ, ನಾವು ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಮನೆ ಕಟ್ಟುತ್ತಿದ್ದೇವೆ, ಆದರೂ ಮನೆಹಾಳು ಪದ ಪ್ರಯೋಗಿಸಿದ್ದಾರೆ ಎಂದರು.

## ರನ್ಯಾ ಮನೆ ಮೇಲೆ ಸಿಬಿಐ ದಾಳಿ

**(1ನೇ ಪುಟದಿಂದ)** ಸಿಐಡಿಗೆ ಸೂಚಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ತೀವ್ರಗೊಳಿಸುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಕರೆಸಿಕೊಂಡು ಚಿನ್ನ ಕಳ್ಳಸಾಗಣೆಗೆ ಸಂಬಂಧಿಸಿದಂತೆ ವಿವರ ಪಡೆದಿದ್ದಾರೆ.

ವಿಧಾನಸಭೆ ಕಲಾಪದಲ್ಲಿ ಭಾಗವಹಿಸಿದ್ದ ಡಾ.ಪರಮೇಶ್ವರ್ ಅವರನ್ನು ಮೊಗಸಾಲೆಯಲ್ಲಿನ ತಮ್ಮ ಕಚೇರಿಗೆ ಕರೆಸಿಕೊಂಡ ಮುಖ್ಯಮಂತ್ರಿ ಮಾತುಕತೆ ನಡೆಸಿದರು.

ಚಿನ್ನ ಕಳ್ಳಸಾಗಣೆಯಲ್ಲಿ ಇಬ್ಬರು ಸಚಿವರ ಪಾತ್ರ ಇದೆ ಎಂಬ ಬಗ್ಗೆ ಮಾಧ್ಯಮಗಳಲ್ಲಿ ಬರುತ್ತಿರುವ ವರದಿ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆಗೆ ಕೆಲವು ಉದ್ದಿಮೆದಾರರು ಕೈಜೋಡಿಸಿದ್ದಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಗೃಹ ಸಚಿವರ ಜೊತೆ ಮುಖ್ಯಮಂತ್ರಿ ಚರ್ಚಿಸಿದರೆನ್ನಲಾಗಿದೆ. ಪ್ರಕರಣದಲ್ಲಿ ಸಚಿವರ ಪಾತ್ರ ಇದೆ ಎಂಬ ಮಾಹಿತಿ ಹೊರಬೀಳುತ್ತಿದ್ದಂತೆ ಮುಖ್ಯಮಂತ್ರಿ ಅವರು ನಿನ್ನೆಯೇ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ನಡೆಸಿದರಾದರೂ, ಗೃಹ ಸಚಿವರ ಜೊತೆ ಸಮಾಲೋಚನೆ ನಡೆಸಿರಲಿಲ್ಲ.

ಸಿಬಿಐ ರಂಗ ಪ್ರವೇಶ ಮಾಡುತ್ತಿದ್ದಂತೆ ಮುಖ್ಯಮಂತ್ರಿ ಅವರು, ಗೃಹ ಸಚಿವರೊಂದಿಗೆ ಮಾಹಿತಿ ಪಡೆದಿದ್ದಲ್ಲದೆ, ತಮ್ಮ ಕೆಲವು ಆಪ್ತ ಸಚಿವರೊಂದಿಗೆ ಸಮಾಲೋಚನೆ ಮಾಡಿದ್ದಾರೆ.

ದುಬೈನಿಂದ ಚಿನ್ನ ತಂದು ವಿಮಾನ ನಿಲ್ದಾಣದಲ್ಲಿ ವಿಐಪಿ ದ್ವಾರದ ಮೂಲಕ ಹೊರಬರುತ್ತಿದ್ದ ರನ್ಯಾ ರಾವ್ ಅವರನ್ನು ಕೇಂದ್ರ ಕಂದಾಯ ಗುಪ್ತಚರ ವಿಭಾಗ ವಶಕ್ಕೆ ಪಡೆದು ತನಿಖೆ ನಡೆಸಿತ್ತು.

ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸುವಲ್ಲಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆಯಲ್ಲಿ ತೊಡಗಿದ್ದ ಮಾಹಿತಿ ಕಲೆ ಹಾಕಿದ್ದಲ್ಲದೆ, ಆರೋಪಿಗೆ ಪ್ರಭಾವೀ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಹಾಗೂ ಉದ್ದಮೆದಾರರ ಸಂಪರ್ಕ ಇರುವುದು ತನಿಖೆಯಿಂದ ಬೆಳಕಿಗೆ ಬಂದಿತು.

ಚಿನ್ನ ಕಳ್ಳಸಾಗಣೆ ಕೇವಲ ಬೆಂಗಳೂರಿಗೆ ಸೀಮಿತವಾಗದೆ, ರಾಷ್ಟ್ರವ್ಯಾಪಿ ಹಬ್ಬಿದೆ, ಅಲ್ಲದೆ, ದುಬೈ ವಿಮಾನ ನಿಲ್ದಾಣದಲ್ಲೂ ಆರೋಪಿಗೆ ಸಹಾಯ ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ.)ಕ್ಕೆ ಕಂದಾಯ ಗುಪ್ತಚರ ವಿಭಾಗ ನೀಡಿತು.

ಕರ್ನಾಟಕದಲ್ಲಿ ಸಿಬಿಐ ತನಿಖೆಗೆ ಮುಕ್ತ ಅವಕಾಶವನ್ನು ರಾಜ್ಯ ಸರ್ಕಾರ ಕೊಡುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಗುಪ್ತಚರ ವಿಭಾಗದ ದೂರನ್ನೇ ಸಿಬಿಐ ಸ್ವಯಂ ಪ್ರೇರಿತವಾಗಿ ದೆಹಲಿಯಲ್ಲಿ ದಾಖಲೆ ಮಾಡಿಕೊಂಡು ತನಿಖೆ ಕೈಗೆತ್ತಿಕೊಂಡಿದೆ.

## ಕಿಸಾನ್ ನಿಧಿ : ರೈತರ ಸೇರ್ಪಡೆಗೆ ಸಿದ್ಧ

**(1ನೇ ಪುಟದಿಂದ)** ಯಾರಾದರೂ ಈ ಯೋಜನೆಯಿಂದ ಹೊರಗಿದ್ದರೆ ಅವರನ್ನು ಸೇರ್ಪಡೆ ಮಾಡಲು ನೆರವಾಗಿ. ಅವರು ಹಿಂದಿನ ಕಂತುಗಳನ್ನು ಪಡೆಯುವಂತೆ ಮಾಡುತ್ತೇವೆ. ಒಂದು ದಿನವೂ ವಿಳಂಬವಾಗದ ರೀತಿಗಳಲ್ಲಿ ಹಣ ಪಾವತಿಸುತ್ತೇವೆ ಎಂದು ಸಚಿವರು ಹೇಳಿದ್ದಾರೆ.

**ತಟ್ಟೆ ಇಡ್ಲಿ + ಚಟ್ನಿ**
**10 ರೂ ಮಾತ್ರ**
Bulk order only
**ಆರಾಧ್ಯ ಹೋಟೆಲ್**
ಲಾಯರ್ ರಸ್ತೆ.
**89706 51265**

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್,
3ನೇ ಮುಖ್ಯರಸ್ತೆಯಲ್ಲಿರುವ
ಮನೆಗೆ, ಮನೆ ಕೆಲಸಕ್ಕೆ ಮತ್ತು
ಅಡುಗೆ ಮಾಡುವುದರಲ್ಲಿ ನುರಿತ
ಮಹಿಳೆ ಬೇಕಾಗಿದ್ದಾರೆ.
**99807 05864**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು
ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ
ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**ಜಮೀನು ಮಾರಾಟಕ್ಕೆ ಇದೆ**
1 ಎಕರೆ 0.3 ಗುಂಟೆ ಖಾಲಿ
ಜಮೀನು, ದಾವಣಗೆರೆ.
ನೀಲಾನಹಳ್ಳಿ ಗ್ರಾಮ
**97396 37553**

**ಸೈಟು ಮಾರಾಟಕ್ಕಿದೆ**
64x64.50 ಅಳತೆ ಇರುವ
ಕಾರ್ನರ್ ಸೈಟ್ ಮಾರಾಟಕ್ಕೆ ಇದೆ.
ತರಳಬಾಳು ಬಡಾವಣೆ, ಹಳೆ
ಸೇಂಟ್ಸ್ ಜಾನ್ಸ್ ಸ್ಕೂಲ್ ಹಿಂಭಾಗ.
**98806 98332**

**ಮಳಿಗೆ ಮತ್ತು ಆಫೀಸ್ ಬಾಡಿಗೆಗೆ ದೊರೆಯುತ್ತವೆ**
ನರಸರಾಜ ರಸ್ತೆ, ಡೋರ್ ನಂ.
181/1 to 3E ಮತ್ತು 181/1 to 3F,
ಮಳಿಗೆ 12x15, ಆಫೀಸ್ 15x25 ಅಡಿವುಳ್ಳ.
ರವಿ ನರ್ಸಿಂಗ್ ಹೋಂ, ಡಾ|| ಎ. ಕೆಂಚಪ್ಪ ಆಸ್ಪತ್ರೆ ಪಕ್ಕ
ವಿಚಾರಿಸಿ. ಮಾಯಕೊಂಡ ಡಿ.ಟಿ.ಪಿ. ಸೆಂಟರ್,
**98444 38007, 93425 85067**

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಕೆಲಸ
ಮಾಡಲು ಹುಡುಗರು/
ಹುಡುಗಿಯರು ಬೇಕಾಗಿದ್ದಾರೆ.
**99868 86464**

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್
2 BHK, 1ನೇ ಮಹಡಿ 3 BHK,
2ನೇ ಮಹಡಿ ಸಿಂಗಲ್ ರೂಂ
ಅಟ್ಯಾಚ್ ಬಾತ್ ರೂಂ ಮನೆ ಮಾರಾಟಕ್ಕಿದೆ.
#1982/2, 6ನೇ ಕ್ರಾಸ್,
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**9480693506, 9449851177**

**ಬೇಕಾಗಿದ್ದಾರೆ**
ಹೈದರಾಬಾದ್‌ನ ಪಿ.ಎಸ್. ರೆಸ್ಟೋರೆಂಟ್‌ನಲ್ಲಿ
ದಾವಣಗೆರೆ ಬೆಣ್ಣೆ ದೋಸೆ ಮಾಡಲು
ದೋಸೆ ಭಟ್ಟರು, ಇಡ್ಲಿ ಇತರೆ ತಿನಿಸುಗಳನ್ನು
ಮಾಡಲು ಭಟ್ಟರು ಮತ್ತು ಸೌತ್ ಇಂಡಿಯನ್
ಕುಕ್ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ
ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ.
**94486 90158**

**ಕೆಲಸಕ್ಕೆ ಬೇಕಾಗಿದ್ದಾರೆ**
**ಪಾಟೀಲ್ ಏಜೆನ್ಸಿ**
ಸೇಲ್ಸ್‌ಮೆನ್ -01 ಬೇಕಾಗಿದ್ದಾರೆ.
**90606 60949**
**98803 28444**

**ಬೇಕರಿ ಕೌಂಟರ್ ಮಾರಾಟಕ್ಕಿದೆ**
**ಸ್ಥಳ - ಶಾಮನೂರ್ ರಸ್ತೆ**
**ಮಾಬ್ -**
**95388 96927**

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್
2 BHK, 1ನೇ ಮಹಡಿ 3 BHK,
2ನೇ ಮಹಡಿ ಸಿಂಗಲ್ ರೂಂ ಅಟ್ಯಾಚ್
ಬಾತ್ ರೂಂ ಮನೆ ಮಾರಾಟಕ್ಕಿದೆ.
#1982/2, 6ನೇ ಕ್ರಾಸ್, ಸಿದ್ದವೀರಪ್ಪ
ಬಡಾವಣೆ, ದಾವಣಗೆರೆ.
**9480693506, 9449851177**

**ಸೈಟುಗಳು ಮತ್ತು ಮನೆ ಮಾರಾಟಕ್ಕೆ ಇವೆ**
ಎಂಸಿಸಿ 'ಬಿ' ಉತ್ತರ 40x60 ಮನೆ
ಎಂಸಿಸಿ 'ಬಿ' ಪಶ್ಚಿಮ 40x60 ಮನೆ
ಎಂಸಿಸಿ 'ಬಿ' ಪೂರ್ವ 40x60 ಸೈಟ್
ಎಂಸಿಸಿ 'ಎ' ಪಶ್ಚಿಮ-ದಕ್ಷಿಣ 44x60
ಏಜೆಂಟರು
**81231 15137**

**Rent/Lease**
Readily available for
Rent/Lease
Near DC Office 1/2 acre
with ground
**7338389447, 7829606346**

**ಪಾಸ್ ಬುಕ್ ಕಳೆದಿದೆ**
ಬಾಪೂಜಿ ಬ್ಯಾಂಕಿನ SB & C/A
ದಿನಾಂಕ : 11.3.2025ರ ಮಧ್ಯಾಹ್ನ
2.30ಕ್ಕೆ ವಿದ್ಯಾನಗರ ಮೇನ್ ರೋಡ್
ನಲ್ಲಿ ಬೈಕಿನಲ್ಲಿ ಹೋಗುವಾಗ (ಶರಭೇಶ್ವರ
ಹೋಟೆಲ್ ಕ್ಯಾರಿ ಬ್ಯಾಗ್ ಸಮೇತ
ಕಳೆದುಹೋಗಿರುತ್ತದೆ. ಯಾರಿಗಾದರೂ
ಸಿಕ್ಕಲ್ಲಿ ಕೆಳಗಿನ ನಂಬರಿಗೆ ತಿಳಿಸಿರಿ.
**98446 32184 (ಗುರುಪಾದಪ್ಪ)**

**ಶ್ರೀ ಬಸವೇಶ್ವರ ಬೋರ್‌ವೆಲ್ಸ್**
ಮನೆಯ ಒಳಗೂ, ಹೊರಗೂ
$6^1/_2$ & $4^1/_2$ 200 ಅಡಿ, 400
ಅಡಿಯವರೆಗೂ ಕೊರೆಯಲಾಗುವುದು.
**99008 92916**

**ಬೇಕಾಗಿದ್ದಾರೆ**
ಅಡುಗೆ ಭಟ್ಟರು, ರುಬ್ಬುವವರು
ಹಾಗೂ ಸರ್ವೀಸ್‌ಗಾಗಿ,
ವೆಜ್ ಹೋಟೆಲ್‌ಗಾಗಿ,
ಅನುಭವವುಳ್ಳವರು ಸಂಪರ್ಕಿಸಿ :
**70902 69155**

**ಕೆಲಸಕ್ಕೆ ಬೇಕಾಗಿದ್ದಾರೆ**
**ಸಮರ್ಥ ಸಲ್ಯೂಷನ್ & ಸರ್ವೀಸ್**
ಬಾಪೂಜಿ ಆಸ್ಪತ್ರೆಯಲ್ಲಿ ಆಯಾ,
ವಾರ್ಡ್ ಬಾಯ್ ಬೇಕಾಗಿದ್ದಾರೆ.
PF, ESI ಸೌಲಭ್ಯವಿರುತ್ತದೆ.
**99860 88996, 99866 44968**

**ಬೇಕಾಗಿದ್ದಾರೆ**
ಬಿಎ., ಬಿ.ಇಡಿ., ಬಿ.ಎಸ್ಸಿ., ಬಿ.ಇಡಿ., ಡಿ.ಇಡಿ. ಹಾಗೂ
ಕಂಪ್ಯೂಟರ್ ತರಬೇತಿ ಹೊಂದಿದ ಶಿಕ್ಷಕರು ಬೇಕಾಗಿದ್ದಾರೆ.
**ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ,**
**ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ**
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, (ಹೊಸ
ಆರ್‌ಟಿಓ ಆಫೀಸ್ ಹಿಂಭಾಗ), ಕೊಂಡಜ್ಜಿ ರಸ್ತೆ, ದಾವಣಗೆರೆ.
**99640 17729 / 81479 30221**

**ತಕ್ಷಣ ಬೇಕಾಗಿದ್ದಾರೆ**
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು
ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಹೆಲ್ಪರ್
ಬೇಕಾಗಿದ್ದಾರೆ.
ಪರಿಚಯದೊಂದಿಗೆ ಸಂಪರ್ಕಿಸಿ :
**ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್**
ಬಿನ್ನಿ ಕಂಪನಿ ರೋಡ್, ದಾವಣಗೆರೆ.
**87622 21696**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಹೋಟೆಲ್ ಬಾಡಿಗೆಗಿದೆ**
ಹಳೇ ಬಸ್ ಸ್ಟ್ಯಾಂಡ್ ಎದುರು
ಕೆಬಿಆರ್ ಕಾಂಪೌಂಡ್‌ನಲ್ಲಿ
ಹೋಟೆಲ್ ಎಲ್ಲಾ ಫರ್ನಿಚರ್
ಸಮೇತ ಬಾಡಿಗೆಗೆ ಇದೆ. ವಿಚಾರಿಸಿ.
**94807 12363, 63605 78256**

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near
Shaneshwara Temple Karur
Industrial Area, P.B Road,
Davanagere -577006
**72049 94628**

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು,
ಹೋಲ್ ಸೇಲ್ ಫಾರ್ಮಾದಲ್ಲಿ
ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ
ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
**ಶ್ರೀ ಗುರು ಎಂಟರ್ ಪ್ರೈಸಸ್**
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ**
**ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ
10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ
ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**ಮೊ: 94481 59303, 80509 52637**

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು
PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ.
ವಯೋಮಿತಿ 20 ರಿಂದ 25 (ಅವಿವಾಹಿತರು) ದಾವಣಗೆರೆ
ನಗರದಲ್ಲಿ ವಾಸಿಸುವವರು ಮಾತ್ರ. ಸ್ವ-ವಿವರಗಳೊಂದಿಗೆ
ಸಮಯ ಬೆಳಿಗ್ಗೆ : 10.30 ರಿಂದ 8ರವರೆಗೆ ಸಂಪರ್ಕಿಸಿರಿ :
**ಗುಪ್ತ ಗೋಲ್ಡ್ ಪ್ಯಾಲೇಸ್**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
**89711 71555**

**WANTED**
**S.V. MARKETING DAVANGERE**
* Marketing Executive
* Accountant
* Godown Incharge.
**63620 23451, 97434 37003**

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
**3ನೇ ಲಕ್ಕಿ ಡ್ರಾ ವಿನ್ನರ್ - ಸೀಮಾ ನಾರ್ವೇಕರ್**
**049**
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
**ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್**
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ,
ದಾವಣಗೆರೆ-2. ಫೋನ್ : 08192-252589

**ತಕ್ಷಣ ಬೇಕಾಗಿದ್ದಾರೆ**
**ಹರಿಹರದ ಲಿಕ್ಕರ್ ಶಾಪ್‌ನಲ್ಲಿ**
**ಕೆಲಸ ಮಾಡಲು ಬೇಕಾಗಿದ್ದಾರೆ**
* ಸಪ್ಲೈಯರ್ * ವೆಂಡರ್
* ಆಲ್ ರೌಂಡ್ ಕುಕ್
* ಕ್ಯಾಷಿಯರ್ ಕಂ ಬಿಲ್ಲಿಂಗ್
ಕಂಪ್ಯೂಟರ್ಸ್
ಅನುಭವವುಳ್ಳವರಿಗೆ ಆಕರ್ಷಕ
ಸಂಬಳ. ಸಂಪರ್ಕಿಸಿ :
**99726 98591, 94490 37488**

**Wanted**
Room Boys and
Watchmen
**98861 58644**

**ಮನೆ ಬಾಡಿಗೆಗೆ ಇದೆ**
#21, ಹೊಸ ಮಹಡಿ ಮನೆ ಬಾಡಿಗೆಗಿದೆ
ದೇವರಾಜ್ ಅರಸ್ ಬಡಾವಣೆ,
ಎ ಬ್ಲಾಕ್, 5ನೇ ಕ್ರಾಸ್, ದಾವಣಗೆರೆ.
**99012 47050**
**72040 22829**

**WANTED**
**CIVIL ENGINEERS**
Freshers and 3-4 years
Experienced, Building
Projects at Bangalore
**80880 50729**
**89711 03671**

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ
ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ
ದುಶ್ಚಟಗಳು, ಗೃಹದೋಷ, ನಾಗದೋಷ, ಮಾಟ ಮಂತ್ರ,
ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ
ದೋಷಗಳ ಸಂಪೂರ್ಣ ನಿವಾರಣೆಗಾಗಿ
(ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)
**80733 42011**

**ಬಾಡಿಗೆಗೆ ಅಥವಾ ಲೀಸ್‌ಗೆ**
ಡೋರ್ ನಂ. 1680/10, 12ನೇ ಕ್ರಾಸ್,
ಸಿದ್ದವೀರಪ್ಪ ಬಡಾವಣೆ 15x50 ಅಳತೆವುಳ್ಳ
ಪಶ್ಚಿಮ ದಿಕ್ಕಿನ 2 ಬೆಡ್ ರೂಮ್‌ನ ಗ್ರೌಂಡ್
ಫ್ಲೋರ್‌ನಲ್ಲಿರುವ ಬೋರ್ ನೀರು,
ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ
ಬಾಡಿಗೆಗೆ ಅಥವಾ ಲೀಸ್‌ಗೆ ಇದೆ.
**94806 67365, 94489 30345**

**Required**
Lady candidate for Office work
& Accountant / GST
Good English communication
with computer knowledge.
P J Extension, Davangere.
**99006 66122**

## ಕುಟುಂಬ ಯೋಜನೆ ಯಶಸ್ವಿಗೊಳಿಸಿದ ರಾಜ್ಯಗಳಿಗೆ ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಶಿಕ್ಷೆ : ಕಾಂಗ್ರೆಸ್

ನವದೆಹಲಿ, ಮಾ. 11 - ಕ್ಷೇತ್ರ ಪುನರ್‌ವಿಂಗಡಣೆ ಮಾಡುವುದರಿಂದ ಕುಟುಂಬ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ರಾಜ್ಯಗಳಿಗೆ ಶಿಕ್ಷೆಯಾಗುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಕ್ಷೇತ್ರ ಪುನರ್‌ವಿಂಗಡಣೆ ಕಾರಣದಿಂದ 9 ರಾಜ್ಯಗಳು ಸ್ಥಾನಗಳನ್ನು ಕಳೆದುಕೊಳ್ಳಲಿವೆ ಎಂದಿದ್ದಾರೆ.

ಕುಟುಂಬ ಯೋಜನೆ ಯಶಸ್ವಿಯಾಗಿ ಜಾರಿಗೆ ತಂದ ಹಾಗೂ ಫಲವತ್ತತೆ ಕಡಿಮೆ ಮಾಡಿದ ರಾಜ್ಯಗಳು ಒಂದರಿಂದ 8 ಸ್ಥಾನಗಳನ್ನು ಕಳೆದುಕೊಳ್ಳಲಿವೆ. ಮತ್ತೊಂದೆಡೆ, ಉತ್ತರ ಪ್ರದೇಶ (11) ಹಾಗೂ ಬಿಹಾರ (10) ಸ್ಥಾನಗಳನ್ನು ಪಡೆದುಕೊಳ್ಳಲಿವೆ ಎಂದಿದ್ದಾರೆ.

ತಮಿಳುನಾಡು (8), ಕೇರಳ (8), ಆಂಧ್ರಪ್ರದೇಶ ಮತ್ತು ತೆಲಂಗಾಣ (8), ಒಡಿಶಾ (3), ಪಶ್ಚಿಮ ಬಂಗಾಳ (4), ಕರ್ನಾಟಕ (2), ಹಿಮಾಚಲ ಪ್ರದೇಶ (1), ಪಂಜಾಬ್ (1) ಹಾಗೂ ಉತ್ತರಾಖಂಡ (1) ರಾಜ್ಯಗಳು ಸ್ಥಾನಗಳನ್ನು ಕಳೆದುಕೊಳ್ಳಲಿವೆ ಎಂದು ಜೈರಾಮ ರಮೇಶ್ ಹೇಳಿದ್ದಾರೆ.

ಅಸ್ಸಾಂ, ಜಮ್ಮು ಮತ್ತು ಕಾಶ್ಮೀರ ಹಾಗೂ ಮಹಾರಾಷ್ಟ್ರಗಳು ಯಾವುದೇ ಸ್ಥಾನ ಕಳೆದುಕೊಳ್ಳುವುದಿಲ್ಲ ಇಲ್ಲವೇ ಯಾವುದೇ ಸ್ಥಾನ ಪಡೆದುಕೊಳ್ಳುವುದಿಲ್ಲ.

ಉತ್ತರ ಪ್ರದೇಶ (11), ಬಿಹಾರ (10), ರಾಜಸ್ಥಾನ (6), ಮಧ್ಯಪ್ರದೇಶ (4), ಜಾರ್ಖಂಡ್ (1), ಹರಿಯಾಣ (1), ಗುಜರಾತ್ (1), ದೆಹಲಿ (1) ಹಾಗೂ ಛತ್ತೀಸ್‌ಘಡ (1) ರಾಜ್ಯಗಳು ಹೆಚ್ಚು ಸ್ಥಾನ ಪಡೆಯಲಿವೆ ಎಂದವರು ಹೇಳಿದ್ದಾರೆ.

ವಿದ್ವಾಂಸರಾದ ಮಿಲನ್ ವೈಷ್ಣವ್ ಹಾಗೂ ಜೇಮಿ ಹಿಂಟ್ಸನ್ ಅವರು ಮಾರ್ಚ್ 2019ರಲ್ಲಿ ಮಾಡಿರುವ ವಿಶ್ಲೇಷಣೆಯನ್ನು ಜೈರಾಮ್ ರಮೇಶ್ ಉಲ್ಲೇಖಿಸಿದ್ದಾರೆ.

ಕುಟುಂಬ ಯೋಜನೆ ಹಾಗೂ ಫಲವತ್ತತೆ ದರ ತಗ್ಗಿಸುವುದು ರಾಷ್ಟ್ರೀಯ ಉದ್ದೇಶವಾಗಿತ್ತು. ಈ ಉದ್ದೇಶವನ್ನು ಯಶಸ್ವಿಯಾಗಿ ಜಾರಿಗೆ ತಂದ ರಾಜ್ಯಗಳು ಸ್ಥಾನಗಳನ್ನು ಕಳೆದುಕೊಳ್ಳಲಿವೆ ಎಂದು ರಮೇಶ್ ಹೇಳಿದ್ದಾರೆ.

## ಹರೀಶ್ ಮಾತಿನಲ್ಲಿ ಬದ್ಧತೆ ಇರಲಿ : ಕಾಂಗ್ರೆಸ್

ದಾವಣಗೆರೆ, ಮಾ. 11 - ಶಾಸಕ ಬಿ.ಪಿ. ಹರೀಶ್ ಅವರು ಬದ್ಧತೆಯಿಂದ ಮಾತನಾಡಬೇಕು, ಸಚಿವರ ಬಗ್ಗೆ ಏಕವಚನ ಬಳಸಿದರೆ ತಕ್ಕಪಾಠ ಕಲಿಸಬೇಕಾದಿತು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಎಚ್ಚರಿಸಿದ್ದಾರೆ.

ಪಕ್ಷದ ಆಂತರಿಕ ಸಮಸ್ಯೆಗಳನ್ನೇ ಬಗೆಹರಿಸಿಕೊಳ್ಳಲಾಗದ ಹರೀಶ್ ಅವರು ಈ ಹಿಂದೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಹಿಂಬಾಲಕರಾಗಿ ಇಂದು ಅವರ ವಿರುದ್ಧ ಮಾತನಾಡುತ್ತಿದ್ದಾರೆ. ಮಾಜಿ ಸಚಿವ ರವೀಂದ್ರನಾಥ್, ಮಾಡಾಳು ವಿರೂಪಾಕ್ಷಪ್ಪ, ರೇಣುಕಾಚಾರ್ಯ ವಿರುದ್ಧವೂ ಮನ ಬಂದಂತೆ ಮಾತನಾಡುತ್ತಿದ್ದಾರೆ. ಇದು ಅವರ ಆಂತರಿಕ ವಿಚಾರವಾಗಿದ್ದು, ಇದೀಗ ಈ ರಾಜ್ಯ, ದೇಶವೇ ಶಾಮನೂರು ಕುಟುಂಬವನ್ನು ಸೈ ಎನ್ನುತ್ತಿದ್ದರೆ, ಬಿ.ಪಿ. ಹರೀಶ್ ಮಾತ್ರ ಅವರ ಮೇಲೆ ಇಲ್ಲಸಲ್ಲದ ಆರೋಪ ಮಾಡುವುದನ್ನು ನೋಡಿದರೆ, ಚಿಕಿತ್ಸೆಯ ಅವಶ್ಯವಿದೆ ಎಂಬುದನ್ನು ಕಾಣಬಹುದಾಗಿದ್ದು, ಬಿಜೆಪಿಗರು ಅವರಿಗೆ ಚಿಕಿತ್ಸೆ ಕೊಡಿಸಲು ಮುಂದಾಗಲಿ ಎಂದು ಸಲಹೆ ನೀಡಿದ್ದಾರೆ.

ಹರೀಶ್ ಅವರು ಇಂತಹ ಹೇಳಿಕೆಗಳನ್ನು ಬಿಟ್ಟು ಕ್ಷೇತ್ರದ ಅಭಿವೃದ್ಧಿಗೆ, ಸಚಿವರೊಂದಿಗೆ ಕೈಜೋಡಿಸಿ ಕೆಲಸ ಮಾಡುವುದನ್ನು ಮೊದಲು ಕಲಿಯಿರಿ ಎಂದವರು ತಿಳಿಸಿದ್ದಾರೆ.

# ವಿದ್ಯುತ್ ಪೂರೈಕೆ ಸಮಸ್ಯೆ: ರೈತರಿಂದ ಕೆಪಿಟಿಸಿಎಲ್ ಘಟಕಕ್ಕೆ ಬೀಗ, ಅಧಿಕಾರಿಗಳಿಂದ ರೈತರ ಮನವೊಲಿಕೆ



ಮಾಯಕೊಂಡ, ಮಾ.11- ಹೋಬಳಿಯ ಓಬೇನಹಳ್ಳಿ, ಹೊನ್ನಾ ನಾಯ್ಕನಹಳ್ಳಿ, ನರಗನಹಳ್ಳಿ, ದಿಂಡದಹಳ್ಳಿ ಗ್ರಾಮದ ಐಪಿ ಸೆಟ್‌ಗಳಿಗೆ ನಿಗದಿತವಾಗಿ ವಿದ್ಯುತ್ ಪೂರೈಸುತ್ತಿಲ್ಲ, ಕೂಡಲೇ ಅವ್ಯವಸ್ಥೆ ಸರಿಪಡಿಸಬೇಕು ಎಂದು ಒತ್ತಾಯಿಸಿ ರೈತರು ಬೆಸ್ಕಾಂ ಅಧಿಕಾರಿಗಳಿಗೆ ಅಹವಾಲು ಸಲ್ಲಿಸಲು ಮಾಯಕೊಂಡದ ಬೆಸ್ಕಾಂ ಕಚೇರಿಗೆ ದೌಡಾಯಿಸಿದರು.

ಬೆಸ್ಕಾಂ ಶಾಖಾಧಿಕಾರಿ, ಕೆಪಿಟಿಸಿಎಲ್ ಎಇಇ ಉಮೇಶ್, ಎಂಜಿನಿಯರ್ ನಾಗರಾಜ್ ಸೇರಿ ಯಾವ ಅಧಿಕಾರಿಗಳು ಸ್ಥಳದಲ್ಲಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ರೈತರು ಕೆಪಿಟಿಸಿಎಲ್ ಘಟಕಕ್ಕೆ ಬೀಗ ಜಡಿದು, ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸುವವರೆಗೆ ಇಲ್ಲಿಂದ ಕದಲುವುದಿಲ್ಲ ಎಂದು ಪಟ್ಟುಹಿಡಿದರು.

ರೈತ ಮುಖಂಡ ಗ್ರಾಮ ಪಂಚಾಯತಿ ಸದಸ್ಯ ಓಬೇನಹಳ್ಳಿ ಚಂದ್ರಶೇಖರ್ ಮಾತನಾಡಿ, ಹೊನ್ನಾನಾಯಕನಹಳ್ಳಿ, ಓಬಣ್ಣನಹಳ್ಳಿ, ಬಾವಿಹಾಳ್, ರೈತರ ಗೋಳು ಕೇಳುವವರಿಲ್ಲವಾಗಿದೆ. ಒಂದೆರಡು ಗಂಟೆಯೂ ವಿದ್ಯುತ್ ಕೊಡುವುದಿಲ್ಲ. ಹಗಲು ರಾತ್ರಿ ನೀರು ಕಟ್ಟಿ, ಬೆಳೆ ಉಳಿಸಿಕೊಳ್ಳಲು ಜೀವ ಪಣಕ್ಕಿಟ್ಟು ಹೋರಾಡುವಂತಾಗಿದೆ. ಐದು ತಾಸಿನಲ್ಲಿ ಮೂರು ಗಂಟೆಯೂ ಕರೆಂಟ್ ಕೊಡುವುದಿಲ್ಲ. ಅರ್ಧಗಂಟೆಯಲ್ಲಿ ನಾಲ್ಕಾರು ಸಾರಿ ಟ್ರಿಪ್ ಆಗುತ್ತಿದ್ದು, ಮೋಟಾರ್‌ಗಳು ಹಾಳಾಗಿವೆ. ಬೆಸ್ಕಾಂ ಅಧಿಕಾರಿಗಳಿಗೆ ಕಿಂಚಿತ್ತೂ ಜವಾಬ್ದಾರಿ ಇಲ್ಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೊನ್ನಾಯಕನಹಳ್ಳಿ ರಾಜಪ್ಪ ಮತ್ತಿತರರು ಮಾತನಾಡಿ, ನಾಲ್ಕಾರು ವರ್ಷಗಳಿಂದ ಇವರನ್ನು ಬೇಡಿ ಸಾಕಾಗಿದೆ. ಬೆಳೆ ನೀರಿಲ್ಲದೇ ಒಣಗಿ ರೈತರು ಕಂಗಾಲಾಗಿದ್ದಾರೆ. ಇಂಥ ಬೇಜವಾಬ್ದಾರಿ ಅಧಿಕಾರಿಗಳಿಂದಲೇ ರೈತರು ಬೀದಿಗೆ ಬಿದ್ದಿದ್ದಾರೆ. ಯಾರಿಗೂ ನಮ್ಮಿಂದ ತೊಂದರೆಯಾಗಿಲ್ಲ. ಆದರೆ ನಮಗೆ ತೊಂದರೆ ಮಾಡಿದರೆ ಸಹಿಸುವುದೇ ಇಲ್ಲ ಎಂದು ಕಿಡಿಕಾರಿದರು.

ಗ್ರಾ.ಪಂ.ಸದಸ್ಯ ಉಳ್ಳಾಗಡ್ಡಿ ಲಕ್ಷ್ಮಣ, ರೈತರು ಒಗ್ಗಟ್ಟಾಗಬೇಕು. ಯಾರಿಗೂ ಹೆದರುವ ಅಗತ್ಯವೇ ಇಲ್ಲ. ಕರೆಂಟ್ ಸರಿಯಾಗಿ ಕೊಡಲು ಆಗಲ್ಲ ಎಂದರೆ ಇವರೇನು ಕೆಲಸ ಮಾಡುತ್ತಾರೆ. ಸಂಬಂಧಪಟ್ಟವರು ಸ್ಥಳಕ್ಕೆ ಬರಬೇಕು ಎಂದು ಒತ್ತಾಯಿಸಿದರು.

**ಶೀಘ್ರ ಸರಿಪಡಿಸುವ ಭರವಸೆ;** ಸ್ಥಳಕ್ಕೆ ಆಗಮಿಸಿದ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತೀರ್ಥೇಶ್, ಓವರ್ ಲೋಡ್ ಸಮಸ್ಯೆಯಿಂದಾಗಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದೇ ಸಂಬಂಧ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಅಗತ್ಯವಾದ ಸಾಮರ್ಥ್ಯವುಳ್ಳ ಹೆಚ್ಚುವರಿ ಮಾರ್ಗ ನಿರ್ಮಿಸಿ ನರಗನಹಳ್ಳಿ ಫೀಡರ್ ಸಮಸ್ಯೆ ನೀಗಲಾಗುತ್ತದೆ. ಹೊನ್ನನಾಯ್ಕನಹಳ್ಳಿ ಫೀಡರ್ ದುರಸ್ತಿ ಮಾಡಿ ಸರಿಪಡಿಸಲಾಗುತ್ತದೆ. ಒಂದೆರಡು ದಿನಗಳಲ್ಲಿ ವಿದ್ಯುತ್ ಪೂರೈಕೆ ಸಮಸ್ಯೆ ಸರಿಪಡಿಸಿ, ರೈತರ ಬವಣೆ ನೀಗಿಸುತ್ತೇವೆ ಎಂದು ಭರವಸೆ ನೀಡಿ ರೈತರ ಮನವೊಲಿಸಿದರು.

ಕೆಪಿಟಿಸಿಎಲ್ ಎಇಇ ಉಮೇಶ್, ಎಂಜಿನಿಯರ್ ನಾಗರಾಜ್ ಮತ್ತಿತರರು ಸಮಸ್ಯೆ ಬಗ್ಗೆ ಚರ್ಚಿಸಿದರು.

ಪ್ರತಿಭಟನೆಯಲ್ಲಿ ಮಾಯಕೊಂಡ, ಹೊನ್ನಾ ನಾಯ್ಕನಹಳ್ಳಿ, ಓಬೇನಹಳ್ಳಿ, ಬಾವಿಹಾಳ್ ಗ್ರಾಮದ ನೂರಾರು ರೈತರು ಭಾಗವಹಿಸಿದ್ದರು.

**ಪೊಲೀಸರೊಂದಿಗೆ ವಾಗ್ವಾದ :** ಸ್ಥಳಕ್ಕೆ ಆಗಮಿಸಿದ ಮಾಯಕೊಂಡ ಪಿಎಸ್‌ಐ ಅಜ್ಜಪ್ಪ ಮತ್ತು ಸಿಬ್ಬಂದಿ, ಬೆಸ್ಕಾಂ ಅಧಿಕಾರಿಗಳಿಗೆ ಪ್ರತಿಭಟನೆಯ ಸ್ಥಳಕ್ಕೆ ಬಂದು ಸಮಾಜಾಯಿಷಿ ನೀಡಲು ಹೇಳಿದಾಗ ಅಧಿಕಾರಿಗಳು ಹೊರಗಡೆ ಕೆಲಸದ ನಿಮಿತ್ತ ತೆರಳಿರುವುದನ್ನು ತಿಳಿಸಿದರು.

ಕೆಪಿಟಿಸಿಎಲ್‌ಗೆ ಬೀಗ ಹಾಕಿದರೆ ಬೇರೆ ಕಡೆಗೆ ಕರೆಂಟ್ ಕೊಡಲು ತೊಂದರೆಯಾಗುತ್ತದೆ ಎಂದು ಪೊಲೀಸರು ರೈತರ ಮನವೊಲಿಸಲು ಹೋದಾಗ, ರೈತರು ಮತ್ತು ಪೊಲೀಸರ ಮಧ್ಯೆ ತೀವ್ರ ವಾಗ್ವಾದ ನಡೆಯಿತು. ರೈತರು, ನಾವೇನು ಕಳ್ಳರಲ್ಲ, ನಮ್ಮ ರೈತರ ನೋವು ನಮಗೇ ಗೊತ್ತು, ಒಣಗಿ ಹೋಗಿರುವ ರಾಗಿ, ಅಡಿಕೆ ತೋಟ ನೋಡಿ ಬಂದು ಮಾತನಾಡಿ, ಎಂದರು.

ಕೊನೆಗೂ ಪೊಲೀಸರು ಕೆಪಿಟಿಸಿಎಲ್ ಘಟಕದ ಬೀಗ ತೆಗೆಯಿಸಿ, ಊರುಗಳ ಮಾರ್ಗಕ್ಕೆ ಮಾತ್ರ ಕರೆಂಟ್ ಕೊಡಲು ತಿಳಿಸಿದರು.

## ಜಗಳೂರಿನ ಸರ್ಕಾರಿ ಆಸ್ಪತ್ರೆ ಲ್ಯಾಬ್ ಅವ್ಯವಸ್ಥೆ ಸರಿಪಡಿಸಲು ಒತ್ತಾಯ



ಜಗಳೂರು, ಮಾ. 11 - ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿನ ಲ್ಯಾಬ್ ಅವ್ಯವಸ್ಥೆ ಸರಿಪಡಿಸಲು ಒತ್ತಾಯಿಸಿ ರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಯಂತ್ರಣ ಮಂಡಳಿ ಕಾರ್ಯಕರ್ತರು ತಾಲ್ಲೂಕು ಆಡಳಿತ ಅಧಿಕಾರಿಗೆ ಮನವಿ ಸಲ್ಲಿಸಿದರು.

ಹೊರಗಡೆ ಖಾಸಗಿ ಲ್ಯಾಬ್‌ನ ರಕ್ತ ಪರೀಕ್ಷೆಯಲ್ಲಿ ಸರ್ಕಾರಿ ಆಸ್ಪತ್ರೆಯ ವರದಿಗೂ ವ್ಯತ್ಯಾಸ ಕಂಡು ಬರುತ್ತಿದೆ. ಲ್ಯಾಬ್‌ನ ಅಧಿಕಾರಿಗಳು ತರಬೇತಿಗೆ ಬಂದ ಲ್ಯಾಬ್ ಟೆಕ್ನೀಷಿಯನ್ ವಿದ್ಯಾರ್ಥಿಗಳಿಂದ ರಕ್ತ ಪರೀಕ್ಷೆ ಮಾಡಿಸುತ್ತಾರೆ. 8 ಜನ ಲ್ಯಾಬ್ ತಜ್ಞರಿದ್ದರೂ ರೂ. 80 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಲ್ಯಾಬೋರೇಟರಿ ಉಪಯುಕ್ತವಾಗುತ್ತಿಲ್ಲ ಎಂದು ಸಂಘಟನೆಯ ತಾಲ್ಲೂಕು ಅಧ್ಯಕ್ಷ ಜಿ.ಟಿ. ತಿಪ್ಪೇಸ್ವಾಮಿ ಆರೋಪಿಸಿದರು.

ಆರೋಗ್ಯ ಮಂತ್ರಿ ದಿನೇಶ್ ಗುಂಡುರಾವ್, ಶಾಸಕ ಬಿ. ದೇವೇಂದ್ರಪ್ಪ ಅವರ ಆದೇಶ ಪಾಲಿಸದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲವಾದರೆ ಉಗ್ರಸ್ವರೂಪ ಹೋರಾಟ ರೂಪಿಸಲಾಗುವುದು ಎಂದರು. ಸಂದರ್ಭದಲ್ಲಿ ಪಧಾದಿಕಾರಿಗಳಾದ ಕೆ.ಎಸ್. ಸಿದ್ದೇಶ್. ಕೆ. ಪ್ರದೀಪ್. ಪತ್ರಕರ್ತ ಎಂ.ಡಿ. ಅಬ್ದುಲ್ ರಖೀಬ್ , ಡಿ.ವಿ. ನಾಗರಾಜ್, ಭರತ್ ಕುಮಾರ್ ಇದ್ದರು.

## ಕೊಡಗನೂರು ಕೆರೆ ಏರಿ ದುರಸ್ತಿ : ವಾಹನ ಸಂಚಾರ ಮಾರ್ಗ ಬದಲಾವಣೆಗೆ ಸೂಚನೆ

ಮಾಯಕೊಂಡ, ಮಾ. 11- ಹೋಬಳಿಯ ಕೊಡಗನೂರು ಕೆರೆ ಏರಿಯ ಸುಮಾರು 100 ಮೀಟರ್ ತುರ್ತು ದುರಸ್ತಿ ಕಾರ್ಯ ಪ್ರಾರಂಭವಾಗಿದ್ದು, ಕೆರೆ ಏರಿಯ ಮೇಲೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ದಾವಣಗೆರೆಯಿಂದ ಹೊಳಲ್ಕೆರೆ ಸಂಚರಿಸುವ ವಾಹನಗಳು ಕೊಡಗನೂರು ಕ್ರಾಸ್ ಗಂಗನಕಟ್ಟೆ, ಚಿನ್ನಸಮುದ್ರ, ಹೊನ್ನಾಯಕನಹಳ್ಳಿ ಮೂಲಕ ಓಬನಹಳ್ಳಿ ಗೇಟ್ಗೆ ಬಂದು ರಾಜ್ಯ ಹೆದ್ದಾರಿ ಮೂಲಕ ಹೊಳಲ್ಕೆರೆ ತಲುಪಬಹುದು. ಅಲ್ಲದೇ ಕೊಡಗನೂರು ಕ್ರಾಸ್‌ನಿಂದ ಕೊಡಗನೂರು, ಬೊಮ್ಮನಹಳ್ಳಿ, ಪರಶುರಾಮಪುರ ಮಾರ್ಗ ಬಳಸಿ ರಾಜ್ಯ ಹೆದ್ದಾರಿ ತಲುಪಬಹುದು.

ಹೊಳಲ್ಕೆರೆಯಿಂದ ದಾವಣಗೆರೆ ಹೋಗುವ ವಾಹನಗಳು ಓಬಣ್ಣನಹಳ್ಳಿ, ಚಿನ್ನಸಮುದ್ರ ಗಂಗನಕಟ್ಟೆ ಮಾರ್ಗ ಬಳಸಿಕೊಂಡು ಕೊಡಗನೂರು ಕ್ರಾಸ್‌ಗೆ ಬಂದು ದಾವಣಗೆರೆಗೆ ಪ್ರಯಾಣಿಸಬಹುದು.

ಪರಶುರಾಮಪುರ ಕ್ರಾಸನಿಂದ ಪರಶುರಾಮಪುರ, ಬೊಮ್ಮನಹಳ್ಳಿ, ಕೊಡಗನೂರು ಮಾರ್ಗ ಬಳಸಿ ಕೊಡಗನೂರು ಕ್ರಾಸ್ಗೆ ಬಂದು ದಾವಣಗೆರೆಗೆ ಪ್ರಯಾಣಿಸಬಹುದು ಎಂದು ಸಣ್ಣ ನೀರಾವರಿ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ತರಗನಹಳ್ಳಿಯಲ್ಲಿ ವೈಭವದ ಶ್ರೀ ಬಸವೇಶ್ವರ ರಥೋತ್ಸವ



ಹೊನ್ನಾಳಿ, ಮಾ.11- ತಾಲ್ಲೂಕಿನ ತರಗನಹಳ್ಳಿ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ನಡೆಯಿತು.

ಮಂಗಳವಾರ ಹೂ, ಹಣ್ಣುಗಳು, ಬಾಳೆ ಗಿಡಗಳಿಂದ ಅಲಂಕರಿಸಿದ ರಥದಲ್ಲಿ ಶ್ರೀ ಬಸವೇಶ್ವರ ಸ್ವಾಮಿ ಮತ್ತು ಆಂಜನೇಯ ಸ್ವಾಮಿಯನ್ನು ಪ್ರತಿಷ್ಠಾಪಿಸಿ ವಿವಿಧ ಮಂಗಳವಾದ್ಯಗಳೊಂದಿಗೆ ರಥವನ್ನು ಎಳೆಯುವ ಮೂಲಕ ಭಕ್ತರು ಭಕ್ತಿ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಶ್ರೀ ಬಸವೇಶ್ವರ ಸ್ವಾಮಿ ಕಮಿಟಿಯ ಗೌರವಾಧ್ಯಕ್ಷ ಎಸ್.ಜಿ.ಚಂದ್ರಪ್ಪ, ಅಧ್ಯಕ್ಷ ಹೊಳೆ ಬಸಪ್ಪ, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಕೆ.ಸಿ.ಪ್ರಭಾಕರ್, ಖಜಾಂಚಿ ತರಗನಹಳ್ಳಿ ರಮೇಶ್ ಗೌಡ, ಸದಸ್ಯರುಗಳಾದ ಭೋವಿ ರಾಜು, ಶಾಂತರಾಜ್ ಸ್ವಾಮಿ, ಟಿ.ಜಿ.ಶಿವನಗೌಡ, ಎ.ಎಂ. ಮಲ್ಲಿಕಾರ್ಜುನ, ಕುಬೇರಪ್ಪ, ನಿಂಗಪ್ಪ, ಎಚ್.ಕೆ.ರಾಜು ಇನ್ನಿತರರಿದ್ದರು.

## ದಾವಣಗೆರೆ ತಾ. ಗೊಲ್ಲರಹಟ್ಟಿಯಲ್ಲಿ ನಾಳೆ ಕೋಡಿ ಚೌಡೇಶ್ವರಿ ಜಾತ್ರೆ

ದಾವಣಗೆರೆ ತಾಲ್ಲೂಕಿನ ಬಸವನಾಳ್ ಗೊಲ್ಲರ ಹಟ್ಟಿಯ ಪೂಜಾರ್ ಹೊಲದಲ್ಲಿ ರುವ ಶ್ರೀ ಕೋಡಿ ಚೌಡೇಶ್ವರಿ ದೇವಿ 35ನೇ ವರ್ಷದ ಜಾತ್ರೆಯು ನಾಳೆ ದಿನಾಂಕ 13 ಮತ್ತು 14ರಂದು ಜರುಗಲಿದೆ.

13 ರಂದು ದೇವಿಗೆ ವಿಶೇಷ ಪೂಜೆ ಗಳು ಜರುಗಲಿದ್ದು, ರಾತ್ರಿ ಭಜನಾ ಕಾರ್ಯಕ್ರಮ ಏರ್ಪಾಡಾಗಿದೆ. 14 ರಂದು ಬೆಳಿಗ್ಗೆ ಅಭಿಷೇಕ, ಅಗ್ನಿಕೆಂಡ ನಂತರ ಬೇವಿನ ಉಡುಗೆ ಸೇವೆ, ಜವಳ, ಹರಕೆ ತುಲಾಭಾರ ಇತ್ಯಾದಿ ಕಾರ್ಯ ಕ್ರಮಗಳು ಜರುಗಲಿವೆ.

ಮಧ್ಯಾಹ್ನ ಪ್ರಸಾದ ವ್ಯವಸ್ಥೆ ಇರುತ್ತದೆ. ಸಂಜೆ 4 ಕ್ಕೆ ಬೆಲ್ಲದ ಬಂಡಿ ಕಾರ್ಯಕ್ರಮ ವಿರುತ್ತದೆ.

## ಜಿಗಳಿ: ಇಂದಿನಿಂದ ಶ್ರೀ ರಂಗನಾಥ ಸ್ವಾಮಿ ಜಾತ್ರೆ - ನಾಳೆ ತೇರು



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಜಾತ್ರಾ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 18ರವರೆಗೆ ಜರುಗಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ, ಸಂಜೆ 4 ಗಂಟೆಯಿಂದ ಶಸ್ತ್ರ ಕಾರ್ಯಕ್ರಮ, ಇದೇ ದಿನ ತಡರಾತ್ರಿ (ಗುರುವಾರ ಬೆಳಗಿನ ಜಾವ) ಶ್ರೀ ರಂಗನಾಥಸ್ವಾಮಿ ರಥೋತ್ಸವವು ಶ್ರೀ ಬೀರಲಿಂಗೇಶ್ವರ, ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ ಹಾಗೂ ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಜೊತೆಗೂಡಿ ಬ್ರಾಹ್ಮೀ ಮುಹೂರ್ತದಲ್ಲಿ ನಡೆಯಲಿದೆ.

ದಿನಾಂಕ 13ರ ಗುರುವಾರ ಬೆಳಿಗ್ಗೆ 10.30 ರಿಂದ ಜವಳ ಮುದ್ರೆ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು ಎಂದು ಗ್ರಾಮದ ಗೌಡ್ರ ಬಸವರಾಜಪ್ಪ ತಿಳಿಸಿದ್ದಾರೆ.

# ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ತರಲು ಆಗ್ರಹ




ದಾವಣಗೆರೆ, ಮಾ.11- ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ಆಗ್ರಹಿಸಿ ನಗರದ ಸಿದ್ದವೀರಪ್ಪ ಬಡಾವಣೆಯ ಕೆನರಾ ಬ್ಯಾಂಕಿನ ಪ್ರಾದೇಶಿಕ ಕಚೇರಿ ಮುಂಭಾಗ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆ ಮತ್ತು ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಮಂಗಳವಾರ ಪ್ರತಿಭಟನಾ ಮತ ಪ್ರದರ್ಶಿಸಿತು.

ಈ ವೇಳೆ ಮಾತನಾಡಿದ ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ರಾಷ್ಟ್ರೀಯ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ, ಬ್ಯಾಂಕುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಶೀಘ್ರ ನೇಮಕಾತಿ ಮಾಡಬೇಕು. ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂಗೊಳಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಕೆನರಾ ಬ್ಯಾಂಕ್ ಅಧಿಕಾರಿಗಳ ಸಂಘಟನೆಯ ಪ್ರಾದೇಶಿಕ ಕಾರ್ಯದರ್ಶಿ ಪ್ರದೀಪ್ ಪಾಟೀಲ್ ಮಾತನಾಡಿ, ಗ್ರಾಹಕರಿಗೆ ಅತ್ಯುತ್ತಮ ಸೇವೆ ನೀಡಲು ಬ್ಯಾಂಕುಗಳಲ್ಲಿ ನೇಮಕಾತಿ ಮಾಡಿಕೊಳ್ಳಬೇಕು ಹಾಗೂ ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ಬರಬೇಕು ಎನ್ನುವುದು ನಮ್ಮ ಹಲವಾರು ವರ್ಷಗಳ ಬೇಡಿಕೆಯಾಗಿದ್ದು, ಈ ಬಗ್ಗೆ ಇಂಡಿಯನ್ ಬ್ಯಾಂಕ್ ಅಸೋಸಿಯೇಷನ್ ಹಾಗೂ ಕಾರ್ಮಿಕ ಸಂಘಟನೆಗಳ ನಡುವೆ ಈಗಾಗಲೇ ಒಪ್ಪಂದ ಆಗಿದ್ದರೂ ಸಹ ಕೇಂದ್ರ ಸರ್ಕಾರ ಈ ಕುರಿತು ಮೌನ ತಾಳಿದೆ ಎಂದು ದೂರಿದರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕಾರ್ಯದರ್ಶಿ ಹೆಚ್.ಎಸ್. ತಿಪ್ಪೇಸ್ವಾಮಿ ಮಾತನಾಡಿ, ಸರ್ಕಾರವು ಈ ಕೂಡಲೇ ಮಧ್ಯ ಪ್ರವೇಶಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲವಾದಲ್ಲಿ ಇದೇ ದಿನಾಂಕ 24 ಮತ್ತು 25ರಂದು ಅಖಿಲ ಭಾರತ ಬ್ಯಾಂಕ್ ಮುಷ್ಕರ ನಡೆಯಲಿದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ನಾಯಕರಾದ ಹೆಚ್. ಸುಗೂರಪ್ಪ, ಅನುರಾಧ ಸಂಪನ್ನ ಮುತಾಲಿಕ್, ಪರಶುರಾಮ, ಕೆ. ಗಂಗಾಧರ್, ವಿನೋದ್ ವೆರ್ಣೇಕರ್, ಸಿದ್ದಲಿಂಗೇಶ್ ಕೋರಿ, ಎಸ್. ಪ್ರಶಾಂತ್, ಡಿ.ಹರ್ಷದ್, ಎಲ್. ಗೋಪಾಲಕೃಷ್ಣ, ವಿ.ಆರ್. ಹರೀಶ್, ಟಿ.ಎಸ್. ಅನಿಲ್, ಗೋಪಾಲಕೃಷ್ಣ, ಬಿ.ಎ. ಸುರೇಶ್, ರಶ್ಮಿ ನಾಗರಾಜ್, ಕೆ. ಜಯಲಕ್ಷ್ಮಿ, ವಿಶ್ವಚೇತನ್, ಆಶಾ ವಿದ್ಯಾಸಾಗರ್, ಸುಷ್ಮಾ ಜೋಷಿ, ರೋಹಿಣಿ ಮಂಡ್ರೆ, ಎಲ್. ಲತಾ, ನಾಗರತ್ನಮ್ಮ, ರೇಣುಕಮ್ಮ ಮತ್ತಿತರರಿದ್ದರು.

## ನಗರದ ಗೌತಮ್ ಶಾಖೆ ಕಚೇರಿಯಲ್ಲಿ ಇಂದು ಮಹಿಳಾ ದಿನಾಚರಣೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿದ್ಯಾನಗರದ ಭಾ.ವಿ.ಪ ಗೌತಮ್ ಶಾಖೆ ಕಚೇರಿಯಲ್ಲಿ ಇಂದು ಬೆಳಿಗ್ಗೆ 11ಕ್ಕೆ ಆಚರಿಸಲಾಗುವುದು.

ಅಲ್ಲಿ ಕೈ ಕಸೂತಿ ತರಬೇತಿ ಪಡೆಯುತ್ತಿರುವ ಹೆಣ್ಣು ಮಕ್ಕಳನ್ನು ಉದ್ದೇಶಿಸಿ ಡಾ. ಮಾಧವಿ ಭಿಡೆ ಹಾಗೂ ಡಾ. ಆರತಿ ಸುಂದರೇಶ್ 'ಮಹಿಳೆ ಮತ್ತು ಆರೋಗ್ಯ' ಅನ್ನುವ ವಿಚಾರ ದ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ಗೌತಮ ಶಾಖೆ ಅಧ್ಯಕ್ಷ ಅಜ್ಜಂಪುರ ಶೆಟ್ರು ವಿಜಯ್ ಕುಮಾರ್ ತಿಳಿಸಿದ್ದಾರೆ.

**ರಂಜಾನ್ ರೋಜಾ ಸಮಯ**
ದಿನಾಂಕ : 12 - 03 - 2025
ಇಫ್ತಾರ್ : 6 - 41
ದಿನಾಂಕ : 13 - 03 - 2025
ಸಹೇರಿ : 5 - 16

### ಓದುಗರ ಪತ್ರ

## ದೇಶದ ಸಂಪತ್ತು ಬಳಸಿ ಗಳಿಸಿದ ಆದಾಯಕ್ಕೆ ನೀಡುವುದೇ ಆದಾಯ ತೆರಿಗೆ.!

ಮಾನ್ಯರೇ,

ಟ್ಯಾಕ್ಸ್ ಅಥವಾ ತೆರಿಗೆ ಎಂದರೆ ದೇಶದ ಪ್ರತಿ ನಾಗರಿಕ ಕಡ್ಡಾಯವಾಗಿ ಸರ್ಕಾರಕ್ಕೆ ನೀಡಬೇಕಾದ ವಂತಿಗೆ. ಅದೇ ರೀತಿ ಆದಾಯ ತೆರಿಗೆ ಎಂದರೆ ಯಾವುದೇ ವ್ಯಕ್ತಿ ಮೂಲತಃ ತನ್ನ ಸ್ವಂತದ್ದಲ್ಲದ, ಎಲ್ಲಾ ಪ್ರಜೆಗಳಿಗೆ ಸೇರಿದ ಈ ದೇಶದ ಸಂಪತ್ತನ್ನು ಬಳಸಿಕೊಂಡು ಗಳಿಸಿದ ಆದಾಯಕ್ಕೆ ನೀಡಲೇಬೇಕಾದ ಆದಾಯದ ಭಾಗ. ಎಲ್ಲರಿಗೂ ಸೇರಿದ ಸಂಪತ್ತು, ಸರ್ಕಾರ ನೀಡಿರುವ ಮೂಲಭೂತ ಸೌಕರ್ಯ ಬಳಸಿಕೊಂಡು ನೀಡುವ ಆದಾಯ ತೆರಿಗೆಗೆ ನಾನು ಕೊಟ್ಟಿದ್ದು ಎನ್ನುವುದು ಅರ್ಥವಿಲ್ಲದ್ದು ಎನಿಸುತ್ತದೆ.

ದೇಶದಲ್ಲಿ ಮಾನಸಿಕ ಮತ್ತು ದೈಹಿಕ ಶ್ರಮಿಕರಿಗೆ ಸರಿಯಾದ ಪ್ರತಿಫಲ ಸಿಗುತ್ತಿದೆಯೋ ಇಲ್ಲವೋ ಎನ್ನುವುದನ್ನು ಸರ್ಕಾರಗಳು ಸರ್ವೇ ಮಾಡಿ ಆರ್ಥಿಕ ನೀತಿ ಮಾಡಿದರೆ ಒಳ್ಳೆಯದು ಎನಿಸುತ್ತದೆ. ಇಲ್ಲವಾದಲ್ಲಿ ದೇಶದ ಆರ್ಥಿಕತೆಯ ಬೆಳವಣಿಗೆ ಮೂರನೇ ಸ್ಥಾನ ಎನ್ನುವುದು ಬಾಲಿಷವಾಗುತ್ತದೆ.

ಏಕೆಂದರೆ ಬೆಳವಣಿಗೆಯ ಲಾಭ ಕೇವಲ 10-15% ಜನರಲ್ಲಿ ಮಾತ್ರ ಶೇಖರಣೆ ಆಗಿರುತ್ತೆ. ಜೀವನಾಧಾರ ಮಟ್ಟ (subsistence level) ಕ್ಕೂ ಮೀರಿದ ಆದಾಯಗಳಿಗೆ ಹೆಚ್ಚು, ಹೆಚ್ಚು ಆದಾಯ ತೆರಿಗೆ ಹಾಕಿ ಅಷ್ಟೂ ಆದಾಯ ಇಲ್ಲದವರಿಗೆ ಹಂಚುವುದು ಎಲ್ಲರಿಗೂ ಸೇರಿದ ದೇಶದ ಸಂಪತ್ತಿನ ಹಂಚಿಕೆ ಎನಿಸುತ್ತದೆ. ದೇಶದ ಜನರ ಶ್ರಮ ಮತ್ತು ಸಂಪತ್ತನ್ನು ಉಪಯೋಗ ಮಾಡಿಕೊಂಡು ಬಹಳ ಲಾಭ ಮಾಡಿಕೊಳ್ಳುತ್ತಿರುವ ಕಂಪನಿಗಳ ಆದಾಯದ ಮೇಲೆ 80-90% ತೆರಿಗೆ ಹಾಕಿದರೆ ತಪ್ಪೆನಿಸುತ್ತಾ ?

**ಕೊಟ್ರೇಶ್ ಪಿ.ಐರಣಿ,** ದಾವಣಗೆರೆ.

## ನಗರದಲ್ಲಿ ಇಂದು ರೇಣುಕಾಚಾರ್ಯರ ಜಯಂತಿ




ದಾವಣಗೆರೆ, ಮಾ. 11- ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 12 ರ ಬುಧವಾರ ಬೆಳಿಗ್ಗೆ 11.30 ಕ್ಕೆ ನಗರದ ಅಭಿನವ ರೇಣುಕಾ ಮಂದಿರದಲ್ಲಿ ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ, ಯುಗಮಾನೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ರಾಮಘಟ್ಟದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಜನ ಜಾಗೃತಿ ಧಾರ್ಮಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಮುಷ್ಟೂರಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ತಾವರಕೆರೆ ಶಿಲಾಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಲಿದ್ದಾರೆ. ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಗೌರವಾಧ್ಯಕ್ಷ ಎಸ್.ಜಿ. ಉಳವಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಕಾ ರ್ಯ ಕ್ರ ಮ ವ ನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಕೆ.ಎಸ್. ಬಸವಂತಪ್ಪ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿ.ಪಂ.ಸಿಇಓ ಸುರೇಶ್ ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್, ಪಾಲಿಕೆ ಆಯುಕ್ತೆ ರೇಣುಕಾ, ಡಾ. ಅಥಣಿ ಎಸ್. ವೀರಣ್ಣ, ಅಣಬೇರು ರಾಜಣ್ಣ, ಬಿ.ಸಿ. ಉಮಾಪತಿ, ಚಂದ್ರಣ್ಣ ಐಗೂರು, ಎನ್.ಎ.ಮುರುಗೇಶ್, ದೇವರಮನಿ ಶಿವಕುಮಾರ್, ಕೆ.ಎಂ.ಸುರೇಶ್, ಬಿ.ಎಂ. ವಾಗೀಶಸ್ವಾಮಿ, ಹೆಚ್.ಎಂ. ರುದ್ರಮುನಿಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಸ್.ಜಿ. ಉಳುವಯ್ಯ, ತ್ಯಾವಣಗಿ ವೀರಭದ್ರಸ್ವಾಮಿ, ಎಂ.ವಿ. ಜಯಪ್ರಕಾಶ್ ಮಾಗಿ, ಎಲ್.ಎಂ. ಆರ್. ಬಸವರಾಜ್, ಸಿದ್ದಲಿಂಗಪ್ಪ, ಕೆ.ಎಂ. ಪರಮೇಶ್ವಯ್ಯ, ಎಂ.ಬಸ್ನಯ್ಯ ಸ್ವಾಮಿ , ವೃಷಭೇಂದ್ರಸ್ವಾಮಿ ಮತ್ತಿತರರಿದ್ದರು.

## ಮಹಿಳಾ ನಿಲಯಕ್ಕೆ ಪಡಿತರಕ್ಕೆ ಚೆಕ್ ವಿತರಣೆ



ದಾವಣಗೆರೆ, ಮಾ. 11- ಫೋಟೋಗ್ರಾಫರ್ಸ್ ಯೂತ್ ವೆಲ್ ಫೇರ್ ಅಸೋಸಿಯೇಷನ್ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸರ್ಕಾರಿ ವಿಶೇಷ ದತ್ತು ಸಂಸ್ಥೆ ರಾಜ್ಯ ಮಹಿಳಾ ನಿಲಯ ಇವರಿಗೆ ಒಂದು ತಿಂಗಳ ಪಡಿತರಕ್ಕಾಗಿ 9,124 ರೂ. ಗಳ ಚೆಕ್ ನೀಡಲಾಯಿತು.

ರಾಜ್ಯ ಮಹಿಳಾ ನಿಲಯದ ದಾವಣಗೆರೆ ವಿಭಾಗದ ಅಧೀಕ್ಷಕರಾದ ಶ್ರೀಮತಿ ಭಾರತಿ ಹಿಂಡೇರ ಅವರಿಗೆ ಚೆಕ್ ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷ ಶ್ರೀನಾಥ್ ಪಿ ಅಗಡಿ, ಉಪಾಧ್ಯಕ್ಷ ತಿಪ್ಪೇಸ್ವಾಮಿ, ಕಾರ್ಯದರ್ಶಿ ದುಗ್ಗಪ್ಪ, ಜಿಲ್ಲಾ ಕಾರ್ಯದರ್ಶಿ ಹೆಚ್.ಕೆ. ಚನ್ನಬಸವರಾಜು, ಸಹಕಾರ್ಯದರ್ಶಿ ಅರುಣ ಪಾಟೀಲ್, ಸಂಘಟನಾ ಕಾರ್ಯದರ್ಶಿ ಕಿರಣಕುಮಾರ್ ಉಪಸ್ಥಿತರಿದ್ದರು.

## ನಗರದ ಮಂಜರಿ ಹನುಮಂತಪ್ಪ ಕಾಲೇಜಿನಲ್ಲಿ ಇಂದು

ಶ್ರೀ ಹೊಯ್ಸಳ ವಿದ್ಯಾಸಂಸ್ಥೆಯ ಶ್ರೀ ಮಂಜರಿ ಹನುಮಂತಪ್ಪ ಶಿಕ್ಷಣ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11ಕ್ಕೆ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೊಯ್ಸಳ ವಿದಾಸಂಸ್ಥೆ ಅಧ್ಯಕ್ಷ, ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ ವಹಿಸಲಿದ್ದು, ವಿದ್ಯಾರ್ಥಿ ಸಂಘದ ರಾಜ್ಯಸಂಚಾಲಕ ಪ್ರೊ. ಎ.ಬಿ. ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ದಾವಣಗೆರೆ ವಿಶ್ವವಿದ್ಯಾನಿಲಯದ ಶಿಕ್ಷಣ ನಿಖಾಯ ಮುಖ್ಯಸ್ಥ ಪ್ರೊ. ಕೆ. ವೆಂಕಟೇಶ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾಲೇಜಿನ ಪ್ರಾಚಾರ್ಯ ಡಾ. ಈ. ರಾಜೀವ ಉಪಸ್ಥಿತರಿರುವರು.

## 15ರಂದು ಕೊಡದಗುಡ್ಡದ ಶ್ರೀ ವೀರಭದ್ರಸ್ವಾಮಿ ರಥೋತ್ಸವ



ಜಗಳೂರು ತಾಲ್ಲೂಕಿನ ಕೊಡದ ಗುಡ್ಡದ ಶ್ರೀ ವೀರಭದ್ರಸ್ವಾಮಿ ರಥೋತ್ಸವವು ಇದೇ ದಿನಾಂಕ 15 ರ ಶನಿವಾರ ಜರುಗಲಿದೆ. ಅಂದು ಬೆಳಿಗ್ಗೆ 6 ಗಂಟೆಗೆ ಅಗ್ನಿಕುಂಡ ಮತ್ತು ಸಾಯಂಕಾಲ 4.30ಕ್ಕೆ ರಥೋತ್ಸವ ನಡೆಯಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಮಹಾಗಣಾರಾಧನೆ, ನಾಳೆ ಗುರುವಾರ ಗಜ ವಾಹನೋತ್ಸವ, ದಿನಾಂಕ 14ರ ಶುಕ್ರವಾರ ವೃಷಭ ವಾಹನೋತ್ಸವ, ದಿನಾಂಕ 17ರ ಸೋಮವಾರ ಮುಂಜಾನೆ 6 ಗಂಟೆಗೆ ಓಕಳಿ ನಡೆಯಲಿದೆ.

## ದೊಡ್ಡಬಾತಿಯಲ್ಲಿ ನಾಳೆ ತೇರು



ದಾವಣಗೆರೆ ತಾಲ್ಲೂಕಿನ ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ಮಹಾರಥೋ ತ್ಸವವು ಇದೇ ದಿನಾಂಕ 13 ಗುರುವಾರ ರಾತ್ರಿ 12 ಗಂಟೆ ನಂತರ ನಡೆಯ ಲಿದೆ. ಇಂದು ಆವರಗೊಳ್ಳದ ಶ್ರೀ ವೀರಭದ್ರೇ ಶ್ವರ ಸ್ವಾಮಿಯು ದೊಡ್ಡಬಾತಿಗೆ ದಯಪಾಲಿಸ ಲಿದೆ. ರಾತ್ರಿ ಪತ್ತಾರ ಮನೆತನದವರಿಂದ ಅರಿಶಿಣ ಎಣ್ಣೆ ಕಾರ್ಯಕ್ರಮ ಜರುಗಲಿದೆ. ದಿನಾಂಕ 14ರ ಶುಕ್ರವಾರ ಓಕುಳಿ ಕಾರ್ಯ ನಡೆಯಲಿದೆ.

## ತಾರೇಹಳ್ಳಿಯಲ್ಲಿ ಇಂದು ರಥೋತ್ಸವ



ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿ ರಥೋತ್ಸ ವವು ಇಂದು ಸಂಜೆ 7 ಗಂಟೆಗೆ ನಡೆಯಲಿದೆ. ನಾಳೆ ಗುರುವಾರ ಜಾತ್ರೆ, ಶುಕ್ರವಾರ ಓಕಳಿ ಉತ್ಸವ ನಡೆಯಲಿದೆ.

## ರಾಣೇಬೆನ್ನೂರಿನಲ್ಲಿ ಇಂದು ಭಕ್ತರ ಸಂಪರ್ಕ ಅಭಿಯಾನ



ಆದಿ ಶಕ್ತಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹೇಮಪುರ ಮಹಾಪೀಠ ವಿಶ್ವ ವೀರಾಂಜನೇಯ ಮಹಾಸಂಸ್ಥಾನದ ಭಕ್ತರ ಸಂಪರ್ಕ ಅಭಿಯಾನ ಕಾರ್ಯಕ್ರಮ ನಡೆಯಲಿದ್ದು, ಹೊನ್ನಾವರ ತಾಲ್ಲೂಕು ಗೇರುಸೊಪ್ಪ ಬಂಗಾರು ಮಕ್ಕಿ ಕ್ಷೇತ್ರದ ಶ್ರೀ ಮಾರುತಿ ಗುರುಗಳು ಸಾನ್ನಿಧ್ಯ ವಹಿಸುವರು.

# ಕಾನೂನುಗಳಿದ್ದರೂ ಮಕ್ಕಳು, ಮಹಿಳೆಯರ ಮೇಲೆ ದೌರ್ಜನ್ಯ, ಹಿಂಸೆ

## ರಾ.ಲ. ಕಾನೂನು ಕಾಲೇಜಿನ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ವ್ಯಾಕುಲತೆ

ದಾವಣಗೆರೆ, ಮಾ. 11- ದೇಶದಲ್ಲಿ ಮಕ್ಕಳು ಹಾಗೂ ಮಹಿಳೆಯರ ಪರವಾಗಿ ಎಷ್ಟೋ ಕಾನೂನುಗಳಿದ್ದರೂ ಈಗಲೂ ಸಹ ಮಕ್ಕಳು ಮತ್ತು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಹಿಂಸೆ ಮುಂದುವರೆಯುತ್ತಿರುವುದು ನಿಜಕ್ಕೂ ಕಳವಳಕಾರಿ ಸಂಗತಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ನಗರದ ರಾ.ಲ. ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಮಹಿಳೆಯರು ಹಾಗೂ ಪುರುಷರಲ್ಲಿನ ಅಸಮಾನತೆ, ಸಾಮಾಜಿಕ ಅಂತರ ಕಡಿಮೆ ಮಾಡುವ ಮೂಲಕ ತಾರತಮ್ಯ ನಿವಾರಣೆ ಮಾಡಬೇಕಾಗಿದೆ. ಇಂತಹ ಮಹಿಳೆಯರ ದಿನಾಚರಣೆ ಮೂಲಕ ಕೆಲವು ಅನಿಷ್ಟಗಳನ್ನು ಹೋಗಲಾಡಿಸಲು ಮಹಿಳೆಯರು, ಪುರುಷರು ಇಬ್ಬರೂ ಮುಂದಾಗಬೇಕೆಂದು ಕಿವಿಮಾತು ಹೇಳಿದರು.

ಆಧುನಿಕತೆ ಇಷ್ಟೆಲ್ಲಾ ಮುಂದುವರೆದಿದ್ದರೂ ಸಹ ಈಗಲೂ ನಾವುಗಳು ಕೆಲವು ಕಡೆ ಪುರುಷ ಪ್ರಧಾನ ಸಮಾಜ ಕಾಣುತ್ತಿದ್ದೇವೆ. ಮನೆಗಳಲ್ಲೂ ಸಹ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಿಗೇ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನ ಸ್ಥಾನದಲ್ಲಿದ್ದಾರೆ. ಇದರಲ್ಲಿ ಹಲವಾರು ಮಹನೀಯರಾದ ರಾಜಾರಾಮ್‌ಮೋಹನ್ ರಾಯ್, ವಿವೇಕಾನಂದ, ಡಾ.ಬಿ.ಆರ್.ಅಂಬೇಡ್ಕರ್ ಸೇರಿದಂತೆ ಹಲವಾರು ಪುರುಷರ ಪಾತ್ರವೂ ಇದೆ ಎಂದು ಹೇಳಿದರು.

ಏನೇ ಕಾನೂನು ಇದ್ದರೂ ನಮ್ಮಗಳ ಮನಸ್ಥಿತಿ ಬದಲಾಗದ ಹೊರತು ಸಾಮಾಜಿಕವಾಗಿ ಬದಲಾವಣೆ ತರಲು ಅಸಾಧ್ಯ. ನಮ್ಮಲ್ಲಿ ಮೊದಲು ಬದಲಾವಣೆ ಆಗಬೇಕು. ಕಾನೂನುಗಳಿಗೆ ಗೌರವ ನೀಡಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ನಮ್ಮಗಳ ಮನಸ್ಸನ್ನು ನಿಗ್ರಹ ಮಾಡಿದಾಗ ಮಾತ್ರ ಅಪರಾಧಗಳನ್ನು ತಡೆಗಟ್ಟಲು ಸಾಧ್ಯ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಮಾತನಾಡಿ, ಭಾರತದ ಇತಿಹಾಸ ವನ್ನು ಗಮನಿಸಿದಾಗ ಅನೇಕ ಯುದ್ದಗಳು, ಅನೇಕ ರಾಜ ಮನೆತನಗಳ ನಡುವೆ ಹೋರಾಟಗಳು ಮಹಿಳೆಯರ ಕಾರಣದಿಂದಲೇ ನಡೆದಿರುವುದು ದುರಾದೃಷ್ಟಕರ ಸಂಗತಿ, ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಮಹಿಳೆಯರೇ ಕಾರಣ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮಹಿಳಾ ದಿನಾಚರಣೆಗಳು ಸಕಾರಾತ್ಮಕ ಚಿಂತನೆ ಅಡಿಯಲ್ಲಿ ಆಗಬೇಕಾಗಿದೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣಕುಮಾರ್ ಮಾತನಾಡಿ, ಸ್ತ್ರೀ ಸಮಾನತೆಗಾಗಿ ಮತ್ತು ಅವರ ಮೇಲೆ ದೌರ್ಜನ್ಯಗಳನ್ನು ತಡೆಯಲು ಮತ್ತು ಹಿಂದಿನ ಕಾಲದಲ್ಲಿದ್ದ ಮಹಿಳೆಯರ ವಿರುದ್ಧದ ಅನೇಕ ಅನಿಷ್ಠ ಪದ್ಧತಿಗಳನ್ನು ತಡೆಗಟ್ಟಲು ಅನೇಕ ಮಹನೀಯರು ಹೋರಾಟ ಮಾಡಿದ ಫಲವಾಗಿ ಇಂದು ಸ್ತ್ರೀಯರು ಸಮಾನತೆ ಪಡೆಯಲು ಸಾಧ್ಯವಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನ ಜಾರಿಗೊಂಡ ಮೇಲೆ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಅಲ್ಲದೇ ಮಹಿಳಾ ದಿನಾಚರಣೆ ಕೇವಲ ಭಾಷಣಕ್ಕೆ ಸೀಮಿತ ವಾಗದೇ ಆರ್.ಎಲ್.ಕಾನೂನು ಕಾಲೇಜು ಸ್ತ್ರೀ ಸಮಾನತೆಗೆ ದುಡಿದವರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಎಸ್. ಯತೀಶ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜೆ.ಜೆ.ಎಂ. ಮೆಡಿಕಲ್ ಕಾಲೇಜು ಪ್ರಾಂಶುಪಾಲರಾದ ಡಾ.ಶುಕ್ಲಶೆಟ್ಟಿ, ಸಂಚಾರಿ ಪೊಲೀಸ್ ಅಧಿಕಾರಿ ಶ್ರೀಮತಿ ಶೈಲಜಾ, ನಿವೃತ್ತ ಪ್ರಾಧ್ಯಾಪಕರಾದ ಡಾ.ಅನುರಾಧ ಬಕ್ಕಪ್ಪ ವೇದಿಕೆಯಲ್ಲಿದ್ದರು.

## ಸಂಸದರ ಹುಟ್ಟುಹಬ್ಬ : ವಿನೂತನವಾಗಿ ಆಚರಣೆ

ದಾವಣಗೆರೆ, ಮಾ. 11 - ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ತಮ್ಮ ಹುಟ್ಟುಹಬ್ಬ ಆಚರಣೆಗಾಗಿ ದುಂದು ವೆಚ್ಚ ಮಾಡಬೇಡಿ ಎಂದು ಕರೆ ನೀಡಿದ್ದ ಹಿನ್ನೆಲೆಯಲ್ಲಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ವಿಶೇಷವಾಗಿ ಆಚರಿಸಲು ಅಭಿಮಾನಿಗಳು ತೀರ್ಮಾನಿಸಿದ್ದಾರೆ.

ಹರಿಹರ ತಾಲ್ಲೂಕಿನ ಮುಖಂಡ ಬೆಳ್ಳೂಡಿ ಬಸವರಾಜ್ ಹಾಗೂ ಹಾಲೇಶ್ ಗೌಡ್ರು ದೇವರಬೆಳಕೆರೆ ಸಿದ್ದವೀರಪ್ಪ ನಾಲೆಯ ಬಲದಂಡೆಯ ಚಾನೆಲ್ ಹೂಳು ತೆಗೆಯುವ ಮೂಲಕ ಸಂಸದರಿಕೆ ಹುಟ್ಟು ಹಬ್ಬದ ಶುಭಾಶಯ ಕೋರಲು ನಿರ್ಧರಿಸಿದ್ದಾರೆ.

ದೇವರಬೆಳಕೆರೆ, ಕಡ್ಲೇಗುಂದಿ, ಸಲಗನಹಳ್ಳಿ, ಬನ್ನಿಕೊಡು, ಶಿವನಹಳ್ಳಿ, ಬೆಳ್ಳೂಡಿ, ಹನಗವಾಡಿ ಮಾರ್ಗವಾಗಿ ಹರಿಹರ ತಲುಪುವ ಈ ನಾಲೆಯ ಹೂಳು ತೆಗೆಯುವ ಕಾರ್ಯ ನಾಡಿದ್ದು ದಿನಾಂಕ 13ರ ಗುರುವಾರ ಪ್ರಾರಂಭವಾಗಲಿದೆ.

## ನಗರದಲ್ಲಿ ಇಂದು ಶ್ರೀ ರೇವಣಸಿದ್ಧೇಶ್ವರರ ಜಯಂತಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ತಾಲ್ಲೂಕು ಘಟಕ ಹಾಗೂ ಶ್ರೀ ಬೀರೇಶ್ವರ ದೇವಸ್ಥಾನ ಜಾಗದ ಅಭಿವೃದ್ಧಿ ಟ್ರಸ್ಟ್, ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಪಿ.ಬಿ. ರಸ್ತೆಯ ಬೀರೇಶ್ವರ ದೇವಸ್ಥಾನದ ಆವರಣದಲ್ಲಿ ಐತಿಹಾಸಿಕ ಪುರುಷ, ಆದಿ ಜಗದ್ಗುರು ಶ್ರೀ ರೇವಣಸಿದ್ಧೇಶ್ವರರ ಜಯಂತಿ ಆಚರಿಸಲಾಗುತ್ತದೆ.

# ಹೆಣ್ಣು ಮಕ್ಕಳಿಗೆ ಗೌರವ ಕೊಡಬೇಕು



**ಭಾರತೀಯ ದಂತ ವೈದ್ಯಕೀಯ ಸಂಘದ ಮಹಿಳಾ ದಿನಾಚರಣೆಯಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಕರೆ**

ದಾವಣಗೆರೆ, ಮಾ.11- ಭಾರತ ದೇಶದಲ್ಲಿ ಹಿಂದಿನ ಕಾಲದಿಂದಲೂ ಹೆಣ್ಣು ಮಕ್ಕಳಿಗೆ ಗೌರವ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಶೋಷಣೆ ಹೆಚ್ಚಾಗಿರುವುದು ವಿಷಾದನೀಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ವ್ಯಾಕುಲತೆ ವ್ಯಕ್ತಪಡಿಸಿದರು.

ನಗರದ ಬಿಇಎ ಅಸೋಸಿಯೇಷನ್ ದಂತ ವೈದ್ಯಕೀಯ ಕಾಲೇಜುಗಳ ಹಾಗೂ ಭಾರತೀಯ ದಂತ ವೈದ್ಯಕೀಯ ಸಂಘದಿಂದ ಕಾಲೇಜು ಆಫ್ ಡೆಂಟಲ್ ಸೈನ್ಸಸ್‌ನಲ್ಲಿ ಇಂದು ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಮನೆಯೇ ಮೊದಲ ಪಾಠಶಾಲೆ. ಹಾಗಾಗಿ ಮನೆಯಿಂದಲೇ ಹೆಣ್ಣು ಮಕ್ಕಳಿಗೆ ಗೌರವ ಕೊಡುವುದನ್ನು ಕಲಿಸಬೇಕು. ವಿದ್ಯೆಯ ಸ್ವಾತಂತ್ರ್ಯ ನೀಡಿ, ಕಾನೂನಿನ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದು ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಭಾರತೀಯ ದಂತ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಅಶೋಕ್ ಎಲ್., ಕಾರ್ಯದರ್ಶಿ ಡಾ. ವಿಕ್ರಂ ಎಸ್. ಅಂಬರ್‌ಕರ್, ಖಜಾಂಚಿ ಡಾ. ಎಂ.ಎಸ್, ಶೃತಿ, ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ನಿರ್ದೇಶಕರಾದ ಡಾ. ವಸುಂಧರ ಶಿವಣ್ಣ, ಪ್ರಾಂಶುಪಾಲ ಡಾ. ಐ.ಎಂ.ಅಲಿ, ಉಪ ಪ್ರಾಂಶುಪಾಲರಾದ ಡಾ. ಶೋಭ ಪ್ರಕಾಶ್, ಬಾಪೂಜಿ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ನಂದೀಶ್ವರ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆಯೋಜಕರಾದ ಡಾ. ಮಮತಾ, ಡಾ. ರೂಪ, ಡಾ. ಪೂರ್ಣಿಮಾ, ಡಾ. ಶೃತಿ, ಡಾ. ತೇಜಸ್ವಿನಿ ಇನ್ನಿತರರು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

# ಕಷ್ಟ ಬಂದಾಗ ರೈತರು ಆತ್ಮಸ್ಥೈರ್ಯ ಕಳೆದುಕೊಳ್ಳುವುದು ಬೇಡ

## ಬಾಳೆಹೊನ್ನೂರಿನಲ್ಲಿ ಜರುಗಿದ ಕೃಷಿ ಸಮ್ಮೇಳನದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ತಾಕೀತು

ಬಾಳೆಹೊನ್ನೂರು, ಮಾ. 11- ಕಷ್ಟ ಬಂದಾಗ ರೈತರು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಆತ್ಮಹತ್ಯೆಯಂತಹ ಕಾರ್ಯಕ್ಕೆ ಕೈ ಹಾಕಬಾರದು ಎಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ತಾಕೀತು ಮಾಡಿದರು.

ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ನರಸಿಂಹರಾಜಪುರ ತಾಲ್ಲೂಕು ಪತ್ರಕರ್ತರ ಸಂಘದಿಂದ ಇಂದು ಜರುಗಿದ ಕೃಷಿ ಸಮ್ಮೇಳನ ಹಾಗೂ ಕಾಫಿ-ಅಡಿಕೆ ಬೆಳೆಗಾರರ ಹಿತ ಚಿಂತನ ಮಂಥನ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.



ಭೂಮಿಯಲ್ಲಿ ಅದ್ಭುತ ಶಕ್ತಿಯಿದೆ. ಭೂ ತಾಯಿ ಮಡಿಲಿಗೆ ಹಿಡಿ ಕಾಳು ಹಾಕಿದರೆ ಖಂಡಗ ಕಾಳು ಕೊಡುತ್ತಾಳೆ. ಒಕ್ಕಲಿಗ ಒಕ್ಕಿದರೆ ಲೋಕವೆಲ್ಲ ಉಕ್ಕುವುದು. ಒಕ್ಕಲಿಗೆ ಒಕ್ಕದಿದ್ದರೆ ಲೋಕವೆಲ್ಲ ಬಿಕ್ಕುವುದೆಂದು ಸರ್ವಜ್ಞ ಕವಿ ಎಚ್ಚರಿಸಿದ್ದಾರೆ. ಮಲೆನಾಡಿನ ಪ್ರಾಂತ್ಯದಲ್ಲಿ ಕಾಫಿ ಮತ್ತು ಅಡಿಕೆ ಬೆಳೆ ಮುಖ್ಯವಾದವುಗಳು. ಕೃಷಿ ಮಾಡುವ ರೈತ ಏನೇ ಸವಾಲುಗಳು ಬಂದರೂ ಅವುಗಳನ್ನು ಎದುರಿಸಿ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದರು.

ಸಮಾರಂಭವನ್ನು ಉದ್ಘಾಟಿಸಿದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಶ್ರೀ ಜಗದ್ಗುರು ರೇಣುಕಾಚಾರ್ಯರ ಕ್ರಾಂತಿ ಸಾಮಾನ್ಯವಾದುದಲ್ಲ. ಸಕಲ ಜೀವಾತ್ಮರನ್ನು ಉದ್ಧರಿಸಿದ ಮಹಾನ್ ಆಚಾರ್ಯ ಪುರುಷರು. ಅವರು ಕೊಟ್ಟ ತತ್ವ ಸಂದೇಶ ಕಾಯಕ ಜೀವನದ ಹಿರಿಮೆ ನಮ್ಮೆಲ್ಲರ ಪ್ರಗತಿಗೆ ಅಡಿಪಾಯ ಎಂದು ಹೇಳಿದರು.

ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಕೃಷಿ ಸಮ್ಮೇಳನ ಹಮ್ಮಿಕೊಂಡಿರುವುದು ಶ್ರೀ ರಂಭಾಪುರಿ ಪೀಠದ ರೈತ ಪರವಾದ ಕಳಕಳಿ ವೇದ್ಯವಾಗುತ್ತದೆ.

ಸಾಧ್ಯವಾದುದನ್ನು ಮಾಡಲು ಶಕ್ತಿ ಸಾಕು. ಅಸಾಧ್ಯವಾದುದನ್ನು ಮಾಡಲು ವಿಶ್ವಾಸ ಮುಖ್ಯ. ಶಕ್ತಿ, ವಿಶ್ವಾಸಗಳಿಂದ ಎಲ್ಲವೂ ಸಾಧ್ಯ ಎಂದರು.

ಬೀರೂರು ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಎನ್.ಆರ್. ಪುರ ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಎಸ್. ಸಚಿನ್ ಕುಮಾರ್ ಮಾತನಾಡಿದರು.

ಮಾಜಿ ಸಚಿವ ಡಿ.ಎನ್.ಜೀವರಾಜ್, ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್ ದೇವವೃಂದ, ಧರ್ಮರಾಜ ಹೊಂಕ್ರವಲ್ಲಿ, ಹೆಚ್.ಬಿ. ರಾಜಗೋಪಾಲ್, ರವಿಚಂದ್ರ, ಕೊರಟಗೆರೆ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕೃಷಿ ತಜ್ಞ ಚಂದ್ರಶೇಖರ ನಾರಣಾಪುರ ಹಾಗೂ ವೀರಭದ್ರಗೌಡ ಕೆ.ವಿ. ಕುಪ್ಪಗೋಡು ಅವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರು ರಕ್ಷೆ ನೀಡಿ ಆಶೀರ್ವದಿಸಿದರು.

ಕು. ಅನ್ವಿತ - ವಂದನ ಅವರು ಭರತ ನಾಟ್ಯ ಪ್ರದರ್ಶನ ಮಾಡಿದರು. ಅಖಿಲ ಭಾರತ ವೀರಶೈವ ಮಹಾಸಭಾ ಚಿಕ್ಕಮಗಳೂರು ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ವನಮಾಲಾ ಮೃತ್ಯುಂಜಯ ಅಲ್ದೂರು ಸ್ವಾಗತಿಸಿದರು. ಶಿವಮೊಗ್ಗದ ಶಾಂತಾ ಆನಂದ ಪ್ರಾರ್ಥಿಸಿದರು. ಶಿಕ್ಷಕರಾದ ಹೇಮಲತಾ ಬಿಕ್ಕೋಡು ಹಾಗೂ ಲೀಲಾವತಿ ಕೆ.ಎಸ್ ಪಡುವಳಲು ನಿರೂಪಿಸಿದರು. ಪ್ರವೀಣ ಬೆಳಗೊಳ ರೈತಗೀತೆ ಹಾಡಿದರು.

## ಬಾಘೇಲ್ ನಿವಾಸದ ಮೇಲೆ ಇ.ಡಿ. ದಾಳಿಗೆ ಅಡ್ಡಿ : ಎಫ್‌ಐಆರ್ ದಾಖಲು

ರಾಯಪುರ, ಮಾ. 11 - ಛತ್ತೀಸ್‌ಘಡದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಭೂಪೇಶ್ ಬಾಘೇಲ್ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದಾಗ ಅಡ್ಡಿಪಡಿಸಿದ ಹಾಗೂ ಕಲ್ಲು ತೂರಿದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ.

ದುರ್ಗ್ ನಗರದಲ್ಲಿರುವ ಬಾಘೇಲ್ ನಿವಾಸದ ಮೇಲೆ ದಾಳಿ ನಡೆಸಲಾಗಿತ್ತು. ಮದ್ಯ ಹಗರಣದಿಂದ ಹುಟ್ಟಿಕೊಂಡ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆಸಲಾಗಿತ್ತು.

## ಮಹಿಳಾ ದಿನಾಚರಣೆ ಪ್ರಯುಕ್ತ ಶಾಸಕಿಯರಿಗೆ ಹೆಚ್ಚುವರಿ ಅನುದಾನ

ಗಾಂಧಿನಗರ, ಮಾ. 11 - ಗುಜರಾತ್‌ನ ಎಲ್ಲಾ 14 ಶಾಸಕಿಯರಿಗೆ ಎರಡು ಕೋಟಿ ರೂ.ಗಳ ಹೆಚ್ಚುವರಿ ಅನುದಾನ ನೀಡುವುದಾಗಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಶಾಸಕಿಯರ ಕ್ಷೇತ್ರಗಳಲ್ಲಿ ಕಾಮಗಾರಿ ಕೈಗೊಳ್ಳಲು ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

**ಬೇಕಾಗಿದ್ದಾರೆ**

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಶಾಂತಲಾ ದಿ ವೆಡ್ಡಿಂಗ್ ಮಾಲ್......

ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ. ಮೊ. 96861 95329

॥ ಶ್ರೀ ಉಳವಿ ಚನ್ನ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ॥ ಜಿ॥ ವಿದ್ಯಾರ್ಥಿ ಭವನ್ ಸರ್ಕಲ್ ಹದಡಿ ರಸ್ತೆ ಹತ್ತಿರದ ವಾಸಿ
ಶ್ರೀ ಮುರುಗೇಶಪ್ಪ ಬಳ್ಳಾರಿ ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ : 10.03.2025ನೇ ಸೋಮವಾರ ರಾತ್ರಿ 12.20 ಗಂಟೆಗೆ ನನ್ನ ಧರ್ಮಪತ್ನಿ
**ಶ್ರೀಮತಿ ಭಾರತಿ ಬಿ.ಎಂ.**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 12.03.2025ನೇ ಬುಧವಾರದಂದು ಮಧ್ಯಾಹ್ನ 2 ಗಂಟೆಗೆ ವಿದ್ಯಾರ್ಥಿ ಭವನ್ ಸರ್ಕಲ್ ಹದಡಿ ರಸ್ತೆ ಹತ್ತಿರ ದಾವಣಗೆರೆಯ ನಮ್ಮ ಸ್ವಗೃಹ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮುರುಗೇಶಪ್ಪ ಮತ್ತು ಮಕ್ಕಳು, ಬಳ್ಳಾರಿ ವಂಶಸ್ಥರು
ಹಾಗೂ ಬಂಧು-ಮಿತ್ರರು, ಮೊ : 94806 93853

ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

CELEBRATING THE LIFE OF

GV Sayagavi



NOVEMBER 8, 1933 - MARCH 10, 2025

WE REQUEST YOUR PRESENCE FOR TRIBUTE & GRATITUDE IN LOVING MEMORY, WHICH WILL BE HELD ON

MARCH 12, 2025

AT 12:00 PM

1919/84, 5TH MAIN, SWAMY VIVEKANANDA EXTENSION, DAVANGERE-577 004

FONDLY REMEMBERED BY SAYAGAVI'S FAMILY, RELATIVES & FRIENDS

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas